09 September 2026 Wednesday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಜಗತ್ತು ಎಷ್ಟೇ ಮುಂದುವರಿದರೂ,
ಮನಸ್ಸು ನಿಂತ ನೀರಾದರೆ
ಸಾಧನೆ ಅಸಾಧ್ಯ!
-ಸ್ನೇಹಾ ಆನಂದ್

info.varthaman@gmail.com


ಅಧಿಕಾರ ಪಡೆಯಲು ಮಾತ್ರ 'ಅಹಿಂದ' ಬಳಕೆ: ಎಚ್.ವಿಶ್ವನಾಥ್ ಪುಟ ಸಂ. 2


ಅಂತಾರಾಷ್ಟ್ರೀಯ ಬೌದ್ಧ ಸಮ್ಮೇಳನಕ್ಕೆ ಸಂಪೂರ್ಣ ಸಹಕಾರ: ಶಾಸಕ ಪುಟ ಸಂ. 3


ಆನೆಗಳ ದಾಳಿ: ಅರಣ್ಯ ಇಲಾಖೆ ವಿರುದ್ಧ ರೈತರ ಆಕ್ರೋಶ ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು | ಗ್ರಾಮಾಂತರ ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 265 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3



## ಕೂಲಿ ಕಾರ್ಮಿಕರೊಂದಿಗೆ ಇಡ್ಲಿ ತಿಂದ ಸಿಎಂ ಡಿಕೆಶಿ

**ಬೆಂಗಳೂರು:** ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಂಗಳವಾರ ಬೆಳಗ್ಗೆಯೇ ಯಶವಂತಪುರ ಎಪಿಎಂಸಿ ಮಾರುಕಟ್ಟೆಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂದರ್ಭ ಬೀದಿ ಬದಿಯ ಶೆಡ್ ಹೋಟೆಲ್‌ನಲ್ಲಿ ಕೂಲಿ ಕಾರ್ಮಿಕರೊಂದಿಗೆ ಕುಳಿತು ಇಡ್ಲಿ ತಿಂದಿದ್ದು ವಿಶೇಷವಾಗಿತ್ತು.

ಈ ವೇಳೆ ತಮ್ಮೊಂದಿಗೆ ಕುಳಿತಿದ್ದ ಕೂಲಿಕಾರರ ಉಪಹಾರದ ಬಿಲ್ ಅನ್ನು ಸ್ವತಃ ಮುಖ್ಯಮಂತ್ರಿಯೇ ಪಾವತಿಸಿದರು. ಹೋಟೆಲ್ ಮಾಲೀಕರಿಗೆ 500 ರೂ. ನೀಡಿ ಇವರ ಬಳಿ ಹಣ ಪಡೆಯಬೇಡಿ ಎಂದು ಹೇಳಿದರು.

ಭೇಟಿಯ ವೇಳೆ ಎಪಿಎಂಸಿ ಮಾಜಿ ಸದಸ್ಯ ಅರುಣ್ ಪರಮೇಶ್ವರ್ ಹಾಗೂ ಸ್ಥಳೀಯರು ಮಾರುಕಟ್ಟೆಯ ದುರವಸ್ಥೆ ಮತ್ತು ಅವ್ಯವಸ್ಥೆಗಳ ಕುರಿತು ದೂರು ನೀಡಿದರು.

ಮಂಡಿ ವ್ಯಾಪಾರಿಗಳು ಹಾಗೂ ರೈತರೊಂದಿಗೆ ನಡೆಸಿದ ಮಾತುಕತೆಯ ವೇಳೆ ರೈತರು ತಮ್ಮ ಅಳಲು ತೋಡಿಕೊಂಡರು. ಸ್ಥಳದಲ್ಲಿ ಅಧಿಕಾರಿಗಳ ನಿಯಂತ್ರಣವಿಲ್ಲದೆ, ವ್ಯಾಪಾರಿಗಳು ಒಂದೊಂದು ರೀತಿಯ ದರ ನಿಗದಿಪಡಿಸುತ್ತಿದ್ದಾರೆ. ಚಿತ್ರದುರ್ಗ ಸೇರಿದಂತೆ ಹೊರ ಜಿಲ್ಲೆಗಳಲ್ಲಿ ಮಾರುಕಟ್ಟೆ ಸಮಸ್ಯೆ ಇರುವುದರಿಂದ ಯಶವಂತಪುರಕ್ಕೆ ಬರುತ್ತಿದ್ದಾರೆ. ಇಲ್ಲಿ ಮಧ್ಯವರ್ತಿಗಳ ಹಾವಳಿ ವಿಪರೀತವಾಗಿದೆ. ತೂಕದಲ್ಲೂ ಭಾರೀ ಮೋಸ ನಡೆಯುತ್ತಿದೆ. 65 ಕೆಜಿ ತೂಕದ ಮೂಟೆಯನ್ನು ಕೇವಲ 50 ಕೆಜಿ ಎಂದು ಲೆಕ್ಕ ಹಾಕಲಾಗುತ್ತಿದೆ ಎಂದು ರೈತರು ಡಿ.ಕೆ.ಶಿವಕುಮಾರ್ ಗಮನಕ್ಕೆ ತಂದರು.



# ಕಾವೇರಿ: ರಾಜ್ಯಕ್ಕೆ ಮತ್ತೆ ಜಲಾಘಾತ

## ನಿತ್ಯ 6 ಸಾವಿರ ಕ್ಯೂಸೆಕ್ ನೀರು ಹರಿಸಲು ಆದೇಶ



ಬೆಂಗಳೂರು: ಕಾವೇರಿ ನೀರು ಹಂಚಿಕೆ ವಿಚಾರದಲ್ಲಿ ಕರ್ನಾಟಕಕ್ಕೆ ಮತ್ತೆ ಆಘಾತವಾಗಿದೆ. ರಾಜ್ಯದ ಅಧಿಕಾರಿಗಳ ಪ್ರಬಲ ವಾದದ ನಡುವೆಯೂ ನಿತ್ಯ ತಮಿಳುನಾಡಿಗೆ 6 ಸಾವಿರ ಕ್ಯೂಸೆಕ್ ಕಾವೇರಿ ನೀರು ಹರಿಸುವಂತೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಮಹತ್ವದ ಆದೇಶ ನೀಡಿದೆ.

ಈ ಮೂಲಕ ತಮಿಳುನಾಡಿಗೆ ನಿತ್ಯ 6 ಸಾವಿರ ಕ್ಯೂಸೆಕ್ ನೀರು ಹರಿಸಬೇಕೆಂಬ ನೀರು ನಿಯಂತ್ರಣ ಸಮಿತಿಯ ಆದೇಶವನ್ನು ಕಾವೇರಿ ಪ್ರಾಧಿಕಾರ ಎತ್ತಿಹಿಡಿದಿದೆ. ಅಧ್ಯಕ್ಷ ಎಸ್.ಕೆ. ಹಲ್ದಾರ್ ಅವರ ನೇತೃತ್ವದಲ್ಲಿ ಮಂಗಳವಾರ ಪ್ರಾಧಿಕಾರದ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

### ವರ್ಚ್ಯುಯಲ್ ಸಭೆ ಮತ್ತು ಅಧಿಕಾರಿಗಳ ಭಾಗಿ

ಈ ಸಭೆಯಲ್ಲಿ ತಮಿಳುನಾಡಿನ ಅಧಿಕಾರಿಗಳು ವರ್ಚ್ಯುಯಲ್ ಮೂಲಕ ಭಾಗವಹಿಸಿದ್ದರು. ಕರ್ನಾಟಕದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ ಕೂಡ ವರ್ಚ್ಯುಯಲ್ ಮೂಲಕ ಸಭೆಯಲ್ಲಿ ಪಾಲ್ಗೊಂಡಿದ್ದರು. ಮಂಗಳವಾರ ಬೆಳಗ್ಗೆ ನಡೆದ ಸಭೆಯಲ್ಲಿ ಇದಕ್ಕೂ ಮುನ್ನವೇ ಕಾವೇರಿ ನೀರು ನಿಯಂತ್ರಣ ಸಮಿತಿಯು ತಮಿಳುನಾಡಿಗೆ 6 ಸಾವಿರ ಕ್ಯೂಸೆಕ್ ನೀರು ಹರಿಸುವಂತೆ ಶಿಫಾರಸು ಮಾಡಿತ್ತು. ನಂತರ ನಡೆದ ಪ್ರಾಧಿಕಾರದ ಸಭೆಯಲ್ಲಿ ಕೂಡ ಅದೇ ಪ್ರಮಾಣದ ನೀರು ಹರಿಸಲು ಆದೇಶಿಸಿರುವುದು ಕರ್ನಾಟಕದಲ್ಲಿ ಕಾವೇರಿ ನೀರು ಹಂಚಿಕೆ ಕುರಿತು ಮತ್ತೆ ತೀವ್ರ ಚರ್ಚೆಗೆ ಕಾರಣವಾಗಿದೆ.

### ಕುಡಿಯುವ ನೀರಿನ ಆತಂಕ ಮತ್ತು ಜನರ ಆಕ್ರೋಶ

ಕರ್ನಾಟಕದ ಜನರಿಗೆ ಕುಡಿಯುವ ನೀರಿನ ಸಮಸ್ಯೆ ಎದುರಾಗಿದ್ದರೂ, ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳದ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವು ನೀರು ಹರಿಸಲು ಸೂಚಿಸಿರುವುದು ರಾಜ್ಯದ ಜನರ ಆಕ್ರೋಶಕ್ಕೆ ಕಾರಣವಾಗಿದೆ. ಅಲ್ಲದೆ, ಮುಂಬರುವ ಬೇಸಿಗೆಯಲ್ಲಿ ಕುಡಿಯುವ ನೀರಿಗೆ ತೀವ್ರ ಹಾಹಾಕಾರ ಉಂಟಾಗಬಹುದು ಎಂಬ ಆತಂಕ ಎದುರಾಗಿದೆ.

## ಪ್ರಾಧಿಕಾರದ ಆದೇಶ ಅಸಂಬಂದ್ಧ: ಸಚಿವ ಚಲುವರಾಯಸ್ವಾಮಿ ಕಿಡಿ



**ಬೆಂಗಳೂರು:** ತಮಿಳುನಾಡಿಗೆ ನಿತ್ಯ 6 ಸಾವಿರ ಕ್ಯೂಸೆಕ್ ಕಾವೇರಿ ನೀರು ಹರಿಸುವಂತೆ ಕಾವೇರಿ ನೀರು ನಿರ್ವಹಣಾ ಸಮಿತಿ (ಸಿಡಬ್ಲು ಆರ್‌ಸಿ) ನೀಡಿರುವ ಆದೇಶ ಅಸಂಬದ್ಧವಾಗಿದೆ. ಈ ಆದೇಶ ನೋವು ಹಾಗೂ ಬೇಸರ ತಂದಿದೆ ಎಂದು ಜಲಸಂಪನ್ಮೂಲ ಸಚಿವ ಎನ್.ಚಲುವರಾಯಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ಮಾಧ್ಯಮಗಳೊಂದಿಗೆ ಮಂಗಳವಾರ ಮಾತನಾಡಿದ ಅವರು, ಸಮಿತಿ ಸಭೆಯಲ್ಲಿ ರಾಜ್ಯದ ಅಧಿಕಾರಿಗಳು ವಾಸ್ತವ ಸ್ಥಿತಿಯ ಬಗ್ಗೆ ಪ್ರಬಲವಾಗಿ ವಾದ ಮಂಡಿಸಿದ್ದಾರೆ. ತಮಿಳುನಾಡು 17 ಸಾವಿರ ಕ್ಯುಸೆಕ್ ನೀರಿಗೆ ಬೇಡಿಕೆ ಇಟ್ಟಿತ್ತು. ಆದರೆ ಕಳೆದ ಒಂದು ವಾರದಿಂದ ಕಾವೇರಿ ಜಲಾನಯನ ಪ್ರದೇಶದಲ್ಲಿ ನೀರಿನ ಒಳಹರಿವು ಗಣನೀಯವಾಗಿ ತಗ್ಗಿದೆ. ಇಂತಹ ಸಂಕಷ್ಟದ ಸ್ಥಿತಿಯಲ್ಲಿ 6 ಸಾವಿರ ಕ್ಯುಸೆಕ್ ನೀರು ಹರಿಸುವುದೂ ನಮಗೆ ಅಸಾಧ್ಯ. ನಾವು 'ಶೂನ್ಯ ನೀರು' ಬಿಡುವ ನಿಟ್ಟಿನಲ್ಲಿ ಸತತ ಪ್ರಯತ್ನ ನಡೆಸುತ್ತಿದ್ದೇವೆ ಎಂದು ಹೇಳಿದರು.

ದೆಹಲಿಯಲ್ಲಿ ಕುಳಿತು ಆಡಳಿತ ನಡೆಸುವ ಸಾಂವಿಧಾನಿಕ ಹಾಗೂ ಆಡಳಿತಾತ್ಮಕ ಪೀಠಗಳಿಗೆ ನೆಲಮಟ್ಟದ ವಾಸ್ತವ ಸ್ಥಿತಿ ಅರ್ಥವಾಗುತ್ತಿಲ್ಲ. ಈ ಹಿಂದೆಯೂ ವಾಸ್ತವ ಸ್ಥಿತಿ ಅರಿಯದೆ ಇದೇ ರೀತಿಯ ಆದೇಶಗಳನ್ನು ನೀಡಿರುವ ನಿದರ್ಶನಗಳಿವೆ. ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ, ನಾಳೆಯೇ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಲು ಸರ್ಕಾರ ಗಂಭೀರ ಚಿಂತನೆ ನಡೆಸಿದೆ ಎಂದರು. ಪ್ರಸ್ತುತ ಜಲಾಶಯಗಳಲ್ಲಿರುವ ನೀರಿನ ಪೈಕಿ ಶೇ 50 ರಷ್ಟನ್ನು ಕೇವಲ ಕುಡಿಯುವ ನೀರಿನ ಉದ್ದೇಶಕ್ಕೆ ಮೀಸಲಿಡಲಾಗಿದೆ ಎಂದು ಹೇಳಿದರು.




## ಬಿಜೆಪಿಗೆ ಶಾಲಾ ಮೈದಾನ: ಸಿಎಂ ಆದೇಶದಂತೆ ಅನುಮತಿ

**ಬಳ್ಳಾರಿ:** ವಿಜಯೇಂದ್ರ ನೇತೃತ್ವದ ಬಿಜೆಪಿ ಪಾದಯಾತ್ರೆ ಸಮಾರೋಪ ಸಮಾರಂಭಕ್ಕೆ ಬಳ್ಳಾರಿಯ ಎಕ್ಸ್ ಮುನಿಸಿಪಲ್ ಶಾಲಾ ಮೈದಾನ ಬಳಸಲು ಕೊನೆಗೂ ಬಳ್ಳಾರಿ ಜಿಲ್ಲಾಡಳಿತ ಅನುಮತಿ ನೀಡಿದೆ.

ಮೈದಾನ ಕೊಡಲು ನಿರಾಕರಿಸಿದ್ದ ಸರ್ಕಾರದ ವಿರುದ್ಧ ಬಿಜೆಪಿ ನಾಯಕರಿಂದ ಆಕ್ರೋಶ ವ್ಯಕ್ತವಾದ ಬೆನ್ನಲ್ಲೇ ಸಿಎಂ ಸೂಚನೆ ಮೇರೆಗೆ ಜಿಲ್ಲಾಡಳಿತ ಷರತ್ತುಬದ್ಧ ಅನುಮತಿ ನೀಡಿದೆ. ಸೆಪ್ಟೆಂಬರ್ 10ರಂದು ಮಧ್ಯಾಹ್ನ 3ರಿಂದ ಸಮಾರೋಪ ಕಾರ್ಯಕ್ರಮ ನಡೆಸಲು ಬಿಜೆಪಿ ಪೂರ್ವತಯಾರಿ ಮಾಡಿಕೊಂಡಿದೆ.

### ವಿಜಯೇಂದ್ರ ಸವಾಲು

**ಬಿಜೆಪಿ ಪಾದಯಾತ್ರೆಯ ಅಭೂತಪೂರ್ವ ಜನಬೆಂಬಲವನ್ನು ನೋಡಿ ಕಾಂಗ್ರೆಸ್ ಸರ್ಕಾರ ಹತಾಶೆಯಾಗಿದೆ. ಹೀಗಾಗಿ ಉದ್ದೇಶಪೂರ್ವಕವಾಗಿ ಸಮಾವೇಶಕ್ಕೆ ಶಾಲಾ ಮೈದಾನ ಕೊಡಲು ನಿರಾಕರಿಸಲಾಗುತ್ತಿದೆ. ಜಾಗ ಹೇಗೆ ಕೊಡಲ್ಲ ಎಂಬುದನ್ನು ನಾವೂ ನೋಡುತ್ತೇವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇದಕ್ಕೂ ಮೊದಲು ಕಾಂಗ್ರೆಸ್ ಸರ್ಕಾರಕ್ಕೆ ನೇರ ಸವಾಲು ಹಾಕಿದ್ದು.**

ಎಕ್ಸ್ ಮುನ್ಸಿಪಲ್ ಶಾಲಾ ಮೈದಾನದಲ್ಲಿ ಬಳ್ಳಾರಿ ಚಲೋ ಸಮಾರೋಪ ಸಮಾರಂಭ ನಡೆಸಲು ರಾಜ್ಯ ಸರ್ಕಾರ ಅನುಮತಿ ನಿರಾಕರಿಸಿತ್ತು. ಶಾಲಾ ಶಿಕ್ಷಣ ಹಾಗೂ ಪದವಿಪೂರ್ವ ಶಿಕ್ಷಣ ಇಲಾಖೆಯೂ ಕೂಡ ಸಮಾವೇಶಕ್ಕೆ ಮೈದಾನ ನೀಡಲು ಅನುಮತಿಸಿರಲಿಲ್ಲ. ಈ ಸಂಬಂಧ ಬಿಜೆಪಿ ನಾಯಕರು ಜಿಲ್ಲಾಧಿಕಾರಿ ಕಚೇರಿಯಲ್ಲಿ ಮಂಗಳವಾರ ಮಾತುಕತೆ ನಡೆಸಿದ್ದರು.

ಈ ವೇಳೆ ಬಿಜೆಪಿ ನಾಯಕರಿಂದಲೂ ಸಾಕಷ್ಟು ಆಕ್ರೋಶ ವ್ಯಕ್ತವಾದ ಹಿನ್ನೆಲೆ ಸಮಾವೇಶಕ್ಕೆ ಅನುಮತಿ ನೀಡಲಾಗಿದೆ.

## ಇನ್ನೂ 25 ಕ್ಷೇತ್ರ ಬರಪೀಡಿತ

### 2ನೇ ಹಂತದಲ್ಲಿ ಘೋಷಣೆ: ಸಚಿವ ಪರಮೇಶ್ವರ್



**ಬೆಂಗಳೂರು:** ರಾಜ್ಯದಲ್ಲಿ ಮೊದಲ ಹಂತದಲ್ಲಿ 101 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಣೆ ಮಾಡಲಾಗಿದೆ. ಎರಡನೇ ಹಂತದಲ್ಲಿ 25 ತಾಲ್ಲೂಕುಗಳು ಬರ ಪೀಡಿತ ಪ್ರದೇಶಗಳೆಂದು ಘೋಷಣೆಗೆ ಅರ್ಹತೆ ಪಡೆದಿವೆ. ಶೀಘ್ರದಲ್ಲೇ ಘೋಷಣೆ ಮಾಡಲಾಗುವುದು ಎಂದು ಉಪಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ್ ಹೇಳಿದರು.

ಮಾಧ್ಯಮಗಳ ಜೊತೆ ಮಂಗಳವಾರ ಮಾತನಾಡಿದ ಅವರು, ರಾಜ್ಯದಲ್ಲಿ ಬರ ಪರಿಶೀಲನೆ ಕಾರ್ಯ ಮುಕ್ತಾಯವಾಗಿಲ್ಲ. ಹಂತ ಹಂತವಾಗಿ ನಡೆಯುತ್ತಿದೆ. ಬರ ಪೀಡಿತ ಪ್ರದೇಶಗಳ ಘೋಷಣೆ ಪ್ರಕ್ರಿಯೆ ವಿಳಂಬವಾಗಿಲ್ಲ ಮುಂಗಾರು ಹಾಗೂ ಹಿಂಗಾರು ಕಡಿಮೆ ಆಗುವವರೆಗೂ ಪರಿಶೀಲನೆ ನಡೆಯಲಿದೆ. ಸುಮಾರು 200ಕ್ಕೂ ಹೆಚ್ಚು ತಾಲ್ಲೂಕುಗಳು ಬರಪೀಡಿತ ಪ್ರದೇಶಗಳೆಂದು ಘೋಷಿಸಲ್ಪಡುವ ಪರಿಸ್ಥಿತಿ ಇದೆ. ಕರಾವಳಿ ಪ್ರದೇಶವನ್ನು ಹೊರತುಪಡಿಸಿ ಉಳಿದೆಲ್ಲೆಡೆ ಬರ ಪರಿಸ್ಥಿತಿ ಇದೆ ಎಂದರು.

ಕೆಲವು ಶಾಸಕರು ತಮ್ಮ ತಾಲ್ಲೂಕುಗಳನ್ನು ಬೇಕಂದೇ ಬರ ಪೀಡಿತ ಪ್ರದೇಶವೆಂದು ಘೋಷಣೆ ಮಾಡಿಲ್ಲ ಎಂದು ಆರೋಪಿಸಿ ಪ್ರತಿಭಟನೆ ನಡೆಸುತ್ತಿರುವ ವಿಚಾರವಾಗಿ ಪ್ರತಿಕ್ರಿಯಿಸಿದ ಪರಮೇಶ್ವರ್ ಅವರು, ತೀವ್ರ ಬರ ಇದ್ದರೂ ತಮ್ಮ ತಾಲ್ಲೂಕುಗಳನ್ನು ಬರ ಪೀಡಿತ ಪ್ರದೇಶವೆಂದು ಘೋಷಣೆ

ಪುಟ 2ಕ್ಕೆ

## ಅಧ್ಯಕ್ಷ ಸ್ಥಾನ ಉಳಿಸಿಕೊಳ್ಳಲು ಪಾದಯಾತ್ರೆ: ಯತ್ನಾಳ್



**ವಿಜಯಪುರ:** ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನದಿಂದ ಬಿ.ವೈ.ವಿಜಯೇಂದ್ರ ಅವರನ್ನು ತೆಗೆಯುವುದು ಗ್ಯಾರಂಟಿ ಆದ ಮೇಲೆ ಪಾದಯಾತ್ರೆ ಮಾಡುವುದು ಫಿಕ್ಸ್ ಆಗಿದೆ ಎಂದು ಬಿಜೆಪಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಲೇವಡಿ ಮಾಡಿದ್ದಾರೆ.

ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಆರ್ ಅಶೋಕ್, ಸುನೀಲ್ ಕುಮಾರ್ ಎಲ್ಲರೂ ಸದನದ ಬಾವಿಗೆ ಇಳಿದು ಹೋರಾಟ ಮಾಡಿದ್ದರು. ಆಗ ವಿಜಯೇಂದ್ರ 5 ನಿಮಿಷ ಬಾವಿಯಲ್ಲಿ ನಿಲ್ಲಲ್ಲಿಲ್ಲ. ಬರಿ ಪುಕ್ಸಟ್ಟೆ ಒಂದು ಪಾದಯಾತ್ರೆ ಮಾಡಿದರೆ ಕ್ರೆಡಿಟ್ ಬರುತ್ತಾ? ರಾಜ್ಯಾಧ್ಯಕ್ಷ ಸ್ಥಾನದ ವಾರಂಟಿ ಮುಗಿದಿದೆ. ಹೀಗಾಗಿ ತಮ್ಮ ಅಸ್ತಿತ್ವ ತೋರಿಸಲು, ಇದರಿಂದ ಹೀರೋ ಆಗಲು ಹೊರಟಿದ್ದಾರೆ ಎಂದು ವ್ಯಂಗ್ಯವಾಡಿದ್ದಾರೆ.

ಪುಟ 2ಕ್ಕೆ

## ಜೈಲಿನಲ್ಲಿ ಮೊಬೈಲ್ ಕಳ್ಳಾಟ: ಪ್ರಜ್ವಲ್ ಪೊಲೀಸ್ ಕಸ್ಟಡಿಗೆ

**ಬೆಂಗಳೂರು:** ಪರಪ್ಪನ ಅಗ್ರಹಾರ ಜೈಲಿನಲ್ಲಿ ಮೊಬೈಲ್ ಬಳಕೆ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಮಾಜಿ ಸಂಸದ ಪ್ರಜ್ವಲ್ ರೇವಣ್ಣನನ್ನು 2 ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ನೀಡಲಾಗಿದೆ.

ಪ್ರಜ್ವಲ್‌ನನ್ನು 42ನೇ ಎಸಿಎಂಎಂ ನ್ಯಾಯಾಲಯದ ಮುಂದೆ ಮಂಗಳವಾರ ಹಾಜರುಪಡಿಸಲಾಗಿತ್ತು. ಬಾಡಿ ವಾರೆಂಟ್ ಮೇಲೆ ಕಸ್ಟಡಿಗೆ ಪಡೆಯಲು ಪೊಲೀಸರು ಕೋರ್ಟ್‌ನಲ್ಲಿ ಮನವಿ ಮಾಡಿದರು.

ಈ ಪ್ರಕರಣದಲ್ಲಿ ಪ್ರತಾಪ್ ಎ1 ಆರೋಪಿ ಹಾಗೂ ಪ್ರಜ್ವಲ್ ರೇವಣ್ಣ ಎ2 ಆರೋಪಿಯಾಗಿದ್ದು, ತನಿಖೆಗೆ ಅಗತ್ಯವಿರುವ ಹಿನ್ನೆಲೆಯಲ್ಲಿ ಜೈಲಿನಲ್ಲಿರುವ ಪ್ರಜ್ವಲ್ ರೇವಣ್ಣ ಹಾಗೂ ಪ್ರತಾಪ್ ಅವರನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲು ಅನುಮತಿ ನೀಡಬೇಕೆಂದು ಕೋರಿದ್ದರು. ಇದೀಗ ಕೋರ್ಟ್ ಪೊಲೀಸ್ ಅರ್ಜಿಯನ್ನು ಪರಿಗಣಿಸಿ 2 ದಿನ ಪೊಲೀಸ್ ಕಸ್ಟಡಿಗೆ ಆದೇಶ ನೀಡಿದೆ.

ಜೈಲಿನಲ್ಲಿ ಪ್ರಜ್ವಲ್ ಬಳಿ ಮೊಬೈಲ್, ಪೆನ್ ಡ್ರೈವ್, ನೋಟ್ ಬುಕ್ ಪತ್ತೆ ಯಾಗಿತ್ತು. ಈ ಸಂಬಂಧ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ವಶಪಡಿಸಿಕೊಂಡ ಮೊಬೈಲ್, ಪೆನ್ ಡ್ರೈವ್‌ಗಳನ್ನು ಪೊಲೀಸರು ರಿಟ್ರೀವ್ ಗೆ ಕಳುಹಿಸಿದ್ದರು.



## ಎಚ್‌ಸಿಎಂ ಜೊತೆ ತಿಕ್ಕಾಟ ಇಲ್ಲ

### ಸರ್ಕಾರಿ ನಿವಾಸ ಗದ್ದಲಕ್ಕೆ ಸಚಿವ ಬೈರತಿ ಸುರೇಶ್ ಸ್ಪಷ್ಟನೆ




**ಬೆಂಗಳೂರು:** ನಮ್ಮ ನಡುವೆ ಯಾವುದೇ ಮನೆ ಗಲಾಟೆ ಇಲ್ಲ. ತಪ್ಪು ಮಾಹಿತಿ ಹೇಗೆ ಹರಡಿತೋ ಗೊತ್ತಿಲ್ಲ ಎಂದು ಸಾರಿಗೆ ಸಚಿವ ಬೈರತಿ ಸುರೇಶ್ ತಿಳಿಸಿದರು.

ಸರ್ಕಾರಿ ನಿವಾಸ ಹಂಚಿಕೆ ವಿಚಾರವಾಗಿ ಮಾಜಿ ಸಚಿವ ಡಾ. ಎಚ್.ಸಿ. ಮಹದೇವಪ್ಪ ಮತ್ತು ತಮ್ಮ ಮಧ್ಯೆ ಕಿತ್ತಾಟ ನಡೆಯುತ್ತಿದೆ ಎಂಬ ವಿಚಾರಕ್ಕೆ ಸಂಬಂಧಿಸಿದಂತೆ ಬೈರತಿ ಸುರೇಶ್ ವಿಧಾನಸೌಧದಲ್ಲಿ ಮಂಗಳವಾರ ಮಾಧ್ಯಮಗಳಿಗೆ ಸ್ಪಷ್ಟನೆ ನೀಡಿದ್ದಾರೆ.

ಸಚಿವರಿಗೆ ನಿವಾಸ ಹಂಚಿಕೆ ಮಾಡುವುದು

ಪುಟ 2ಕ್ಕೆ

### ಆ ಮನೆಯಲಿ ಅವರೇ ಇರಲಿ!

**ಮನೆಯ ಗೋಡೆ ಒಡೆಸಿದ್ದು ನಾನಲ್ಲ. ಅದು ನನ್ನ ಮನೆಯೂ ಅಲ್ಲ. ಅದು ಸಂಬಂಧಪಟ್ಟ ಇಲಾಖೆಯವರು ಮಾಡಿರುವ ಕೆಲಸ. ಕಳೆದ ತಿಂಗಳು 15ನೇ ತಾರೀಖಿಗೆ ಮನೆ ಖಾಲಿ ಮಾಡಲಾಗಿದೆ ಎಂದು ಪತ್ರ ಬಂದಿತ್ತು. ಇದೀಗ ಮಹದೇವಪ್ಪಣ್ಣ ಅವರೇ ಆ ಮನೆಯಲ್ಲಿ ಮುಂದುವರಿಯುವುದಾದರೆ ನನಗೇನೂ ಅಭ್ಯಂತರವಿಲ್ಲ ಎಂದು ಸಚಿವ ಸುರೇಶ್ ಹೇಳಿದರು. ಅವರನ್ನೇ ಮುಂದುವರಿಯಲು ಸಿಎಂ ಸೂಚಿಸಿದರೆ, ಉಳಿದ ಒಂದೂಮುಕ್ಕಾಲು ವರ್ಷ ಅವರೇ ಇರಲಿ. ನನ್ನ ತಕರಾರಿಲ್ಲ. ಅವರು ಅಂಬೇಡ್ಕರ್ ಅನುಯಾಯಿ, ನಾನೂ ಅಂಬೇಡ್ಕರ್ ಅನುಯಾಯಿ ಎಂದರು.**

## ಅಪೆಕ್ಸ್ ಬ್ಯಾಂಕ್ ಅಧ್ಯಕ್ಷಗಿರಿ: ಕೆ.ಎನ್.ರಾಜಣ್ಣ ದೆಹಲಿಯಾತ್ರೆ

**ನವದೆಹಲಿ:** ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ಘೋಷಣೆಯಾದ ಬೆನ್ನಲ್ಲೇ, ಶಾಸಕ ಕೆ.ಎನ್. ರಾಜಣ್ಣ ಅವರು ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಭೇಟಿ ಮಾಡಿ ಸಮಾಲೋಚಿಸಿದರು.

ಸೆಪ್ಟೆಂಬರ್ 10ರಂದು ಚುನಾವಣೆ ನಡೆಯಲಿದೆ. ಮತ್ತೊಂದು ಅವಧಿಗೆ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರಾಗಲು ರಾಜಣ್ಣ ಉತ್ಸುಕರಾಗಿದ್ದಾರೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಮೇಲೆ ಹೈಕಮಾಂಡ್ ನಾಯಕರಿಂದ ಒತ್ತಡ ತರಲು ಪ್ರಯತ್ನ ನಡೆಸಿದ್ದಾರೆ. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರ ಭೇಟಿಗೆ ಸಮಯಾವಕಾಶ ಕೋರಿದ್ದಾರೆ.

ಅಧ್ಯಕ್ಷ ಗಾದಿ ಮೇಲೆ ಶಾಸಕರಾದ ಶಿವಾನಂದ ಪಾಟೀಲ, ಶಿವರಾಂ ಹೆಬ್ಬಾರ್, ವಿಧಾನ ಪರಿಷತ್ ಸದಸ್ಯ ಎಸ್.ರವಿ, ಬಿಜೆಪಿ ಮುಖಂಡ ಬೆಳ್ಳಿ ಪ್ರಕಾಶ್ ಕಣ್ಣಿಟ್ಟಿದ್ದಾರೆ ಎನ್ನಲಾಗಿದೆ.



## ಸಾಹುಕಾರ್‌ಗೆ ಮತ್ತೊಂದು ಸಂಕಷ್ಟ

### ನಕಲಿ ದಾಖಲೆ ಸೃಷ್ಟಿಸಿ 27 ಎಕರೆ ಜಮೀನು ಕಬಳಿಕೆ ಆರೋಪ



**ಕಲಬುರಗಿ:** ಕೆಪಿಎಸ್‌ಸಿ ಅಕ್ರಮ ನೇಮಕಾತಿ ಪ್ರಕರಣದಲ್ಲಿ ಬಂಧನ ಭೀತಿಯಲ್ಲಿರುವ ಮಾಜಿ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ್‌ಗೆ ಈಗ ಮತ್ತೊಂದು ಸಂಕಷ್ಟ ಎದುರಾಗಿದೆ. ಅಳಿಯ ಶಂಕರಗೌಡ ಮೂಲಕ ನಕಲಿ ದಾಖಲೆ ಸೃಷ್ಟಿಸಿ 27 ಎಕರೆ ಜಮೀನು ಭೂಕಬಳಿಕೆ ಮಾಡಿದ್ದಾರೆ ಎಂಬ ಆರೋಪ ಕೇಳಿಬಂದಿದೆ.

ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ಅಣಬಿ ಗ್ರಾಮದ ಸರ್ವೆ ನಂಬರ್ 242 ಹಾಗೂ 245ರಲ್ಲಿರುವ 27 ಎಕರೆ ಜಮೀನು ಭೂಕಬಳಿಕೆ ಮಾಡಿರುವ

ಪುಟ 2ಕ್ಕೆ

## ಕೆಪಿಎಸ್‌ಸಿ ಹಗರಣ: ಪರೀಕ್ಷೆಗೂ ಮುನ್ನವೇ 12 ಕೋಟಿ ವಸೂಲಿ

**ಬೆಂಗಳೂರು:** ಕರ್ನಾಟಕ ಲೋಕಸೇವಾ ಆಯೋಗ ನಡೆಸದ್ದ ಪಶು ವೈದ್ಯಾಧಿಕಾರಿಗಳ ನೇಮಕಾತಿ ಬೃಹತ್ ಅಕ್ರಮ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹತ್ವದ ಮಾಹಿತಿ ಬೆಳಕಿಗೆ ಬಂದಿದೆ. 24 ಅಭ್ಯರ್ಥಿಗಳು ಹಣ ನೀಡಿ ಹುದ್ದೆ ಗಿಟ್ಟಿಸಿಕೊಂಡಿರುವ ಆಘಾತಕಾರಿ ಸತ್ಯಾಂಶ ಸಿಐಡಿ ತನಿಖೆಯಲ್ಲಿ ಬಯಲಾಗಿದೆ.

ನೇಮಕಾತಿ ಪರೀಕ್ಷೆಗೂ ಮುನ್ನವೇ ಆರೋಪಿಗಳ ತಂಡ 24 ಅಭ್ಯರ್ಥಿಗಳಿಂದ ಮುಂಗಡ ಹಣ ಪಡೆದು ಪ್ರತ್ಯೇಕ ತರಬೇತಿ ನೀಡಿತ್ತು. ಅಭ್ಯರ್ಥಿಯೊಬ್ಬರಿಂದ 20 ಲಕ್ಷ, 40 ಲಕ್ಷದಿಂದ ಹಿಡಿದು 80 ಲಕ್ಷ ರೂ.ವರೆಗೆ ಒಟ್ಟು 12 ಕೋಟಿ ರೂ.ಗೂ ಅಧಿಕ ಮೊತ್ತವನ್ನು ಆರೋಪಿಗಳು

ಪುಟ 2ಕ್ಕೆ

# ಧಮ್ಮವು ಸತ್ಯ, ನ್ಯಾಯದ ಮಾರ್ಗ: ಸುಭಾಷ್ ಮಾಡ್ರಹಳ್ಳಿ



ಗುಂಡ್ಲುಪೇಟೆ: ಬೌದ್ಧ ಧಮ್ಮವು ಸತ್ಯ ಮತ್ತು ನ್ಯಾಯದ ಮಾರ್ಗವಾಗಿದ್ದು, ವೈಜ್ಞಾನಿಕ ದೃಷ್ಟಿಕೋನದಿಂದ ನೋಡಬಹುದಾದ ಧರ್ಮವಾಗಿದೆ ಎಂದು ಸುಭಾಷ್ ಮಾಡ್ರಹಳ್ಳಿ ಅಭಿಪ್ರಾಯಪಟ್ಟರು.

ತಾಲೂಕಿನ ಮಲ್ಲಯ್ಯನಪುರ ಗ್ರಾಮದಲ್ಲಿ ಅಂತರರಾಷ್ಟ್ರೀಯ ಬೌದ್ಧ ಮಹಾ ಸಮ್ಮೇಳನ ಆಚರಣಾ ಸಮಿತಿ?2026, ಚಾಮರಾಜನಗರ, ಭಿಕ್ಕು ಸಂಘ ಹಾಗೂ ಬಿಎಸ್ಐ ವತಿಯಿಂದ ಹಮ್ಮಿಕೊಂಡಿದ್ದ 'ಧಮ್ಮ ಪಯಣ ಜಾಗೃತಿ ಜಾಥಾ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಜಗತ್ತಿನಲ್ಲಿ ವೈಜ್ಞಾನಿಕ ದೃಷ್ಟಿಕೋನದಿಂದ ಕಾಣಬಹುದಾದ ಧರ್ಮ ಬೌದ್ಧ ಧಮ್ಮವಾಗಿದೆ. ಚಾಮರಾಜನಗರದಲ್ಲಿ ಅಕ್ಟೋಬರ್ 24 ಮತ್ತು 25ರಂದು ನಡೆಯಲಿರುವ ಅಂತರರಾಷ್ಟ್ರೀಯ ಬೌದ್ಧ ಮಹಾ ಸಮ್ಮೇಳನದ ಹಿನ್ನೆಲೆಯಲ್ಲಿ ಧಮ್ಮ ಪಯಣವು ಗುಂಡ್ಲುಪೇಟೆ ತಾಲೂಕಿನ ಪ್ರತಿಯೊಂದು ಗ್ರಾಮಕ್ಕೂ ತೆರಳಿ ಜನರಲ್ಲಿ ಧಮ್ಮದ ಕುರಿತು ಜಾಗೃತಿ ಮೂಡಿಸುವ ಕಾರ್ಯದಲ್ಲಿ ತೊಡಗಿದೆ ಎಂದರು.

ಸುಗತ ಪಾಲ ಭಂತೇಜಿ ಅವರು ತ್ರಿಶರಣ ಹಾಗೂ ಪಂಚಶೀಲ ಪಠಣ ನೆರವೇರಿಸಿ, ಧಮ್ಮದ ಮಹತ್ವವನ್ನು ಅರಿತು ಅದರ ಮಾರ್ಗದಲ್ಲಿ ನಡೆದಾಗ ಸಮಾಜದಲ್ಲಿ ಶಾಂತಿ, ನೆಮ್ಮದಿ ಹಾಗೂ ಮೈತ್ರಿ ಮನೋಭಾವ ಬೆಳೆಸಲು ಸಾಧ್ಯ ಎಂದು ತಿಳಿಸಿದರು.

ಬಹುಜನ ಸಮಾಜ ಪಕ್ಷದ ತಾಲೂಕು ಅಧ್ಯಕ್ಷ ಹಾಗೂ ವಕೀಲ ಚಿಕ್ಕನಂಜಯ್ಯ ಮಾತನಾಡಿ, ಬೋಧಿ ಸತ್ವ ಡಾ. ಬಿ.ಆರ್. ಅಂಬೇಡ್ಕರ್ ಅವರು ತೋರಿದ ಹಾದಿಯಲ್ಲಿ ಸಾಗಲು ಇಂತಹ ಧಮ್ಮ ಜಾಗೃತಿ ಕಾರ್ಯಕ್ರಮಗಳು ಅಗತ್ಯವಾಗಿವೆ. ದೇಶದ ಶೋಷಿತ ವರ್ಗದವರ ಮೂಲ ಧಮ್ಮವಾಗಿರುವ ಬೌದ್ಧ ಧಮ್ಮವು ಕಾಲಾಂತರದಲ್ಲಿ ವೈದಿಕ ಪರಂಪರೆಯ ಪ್ರಭಾವದಿಂದ ಸಮಾಜದಲ್ಲಿ ಹಿನ್ನಡೆ ಕಂಡಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕುವೆಂಪು ಕನ್ನಡ ಸಾಹಿತ್ಯ ವೇದಿಕೆ ಅಧ್ಯಕ್ಷ ಬ್ರಹ್ಮಾನಂದ, ಕಾಂಗ್ರೆಸ್ ಪಕ್ಷದ ಪ್ರಚಾರ ಸಮಿತಿ ಜಿಲ್ಲಾ ಖಜಾಂಚಿ ಆರ್.ಡಿ. ಉಲ್ಲಾಸ್, ವಕೀಲ ಕಾಳಸ್ವಾಮಿ, ಗಿರಿಜನ ಶ್ರೇಯೋಭಿವೃದ್ಧಿ ಸಂಘದ ಕಾರ್ಯದರ್ಶಿ ರಾಜೇಂದ್ರ, ಗ್ರಾಮದ ಯಜಮಾನ ರಾಜು, ಶೀರಯ್ಯ, ಮಾಜಿ ಗ್ರಾಮ ಪಂಚಾಯಿತಿ ಸದಸ್ಯ ಸಿದ್ದರಾಜ್, ರಮೇಶ್, ರಾಮು, ನಿವೃತ್ತ ಉಪನ್ಯಾಸಕ ಮಹದೇವಯ್ಯ ಹುಲಸಗುಂದಿ, ರೂಟ್ ಫಾರ್ ಫ್ರೀಡಂ ಜಿಲ್ಲಾ ಸಂಚಾಲಕ ಕುನ್ನಹೊಳಯಯ್ಯ, ಮದ್ದಯ್ಯನಹುಂಡಿ ನಾಗರಾಜ್, ಪರಮೇಶ, ಮದ್ದೂರು ಕಾಲೋನಿ ಕುಮಾರ್, ಶಿವಕುಮಾರ್, ಮುಖ್ಯ ಶಿಕ್ಷಕ ಮಲ್ಲು ಸೇರಿದಂತೆ ಮಹಿಳಾ ಸಂಘದ ಸದಸ್ಯರು ಹಾಗೂ ಶಾಲಾ ಮಕ್ಕಳು ಭಾಗವಹಿಸಿದ್ದರು.

# ಬಂಡೀಪುರ ಸಫಾರಿ ವಾಹನಗಳಿಗೆ ಜಿಪಿಎಸ್, ಡ್ಯಾಶ್ ಕ್ಯಾಮ್ ಅಳವಡಿಕೆ








ಗುಂಡ್ಲುಪೇಟೆ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮೇಲುಕಾಮನಹಳ್ಳಿ ಸಫಾರಿ ಕೇಂದ್ರದ ಸಫಾರಿ ವಾಹನಗಳಿಗೆ ಜಿಪಿಎಸ್ ಹಾಗೂ ಡ್ಯಾಶ್ ಕ್ಯಾಮ್‌ಗಳನ್ನು ಅಳವಡಿಸಲಾಗಿದೆ ಎಂದು ಅರಣ್ಯ ಇಲಾಖೆ ತಿಳಿಸಿದೆ.

ಸಫಾರಿ ವಾಹನಗಳ ಸಂಚಾರದ ಮೇಲೆ ನಿರಂತರ ನಿಗಾ ವಹಿಸುವುದರ ಜತೆಗೆ, ವನ್ಯಜೀವಿಗಳ ಚಲನವಲನದ ಮೇಲೂ ಹೆಚ್ಚಿನ ಗಮನಹರಿಸಲು ಈ ವ್ಯವಸ್ಥೆ ಸಹಕಾರಿಯಾಗಲಿದೆ. ವಾಹನಗಳು ಸಂಚರಿಸುವ ಮಾರ್ಗ, ವೇಗ ಸೇರಿದಂತೆ ವಿವಿಧ ಮಾಹಿತಿಯನ್ನು ಜಿಪಿಎಸ್ ಮೂಲಕ ಮೇಲ್ವಿಚಾರಣೆ ಮಾಡಲು ಸಾಧ್ಯವಾಗಲಿದೆ. ಡ್ಯಾಶ್ ಕ್ಯಾಮ್ ಅಳವಡಿಕೆಯಿಂದ ಸಫಾರಿ ವೇಳೆ ನಡೆಯುವ ವಿವಿಧ ಚಟುವಟಿಕೆಗಳನ್ನು ದಾಖಲಿಸಿಕೊಳ್ಳಲು ಅನುಕೂಲವಾಗಲಿದೆ. ಇದರಿಂದ ಸಫಾರಿ ವ್ಯವಸ್ಥೆಯ ಮೇಲೆ ಹೆಚ್ಚಿನ ನಿಗಾ ವಹಿಸುವುದರ ಜೊತೆಗೆ, ನಿಯಮ ಉಲ್ಲಂಘನೆ ಹಾಗೂ ಅಹಿತಕರ ಘಟನೆಗಳ ಸಂದರ್ಭದಲ್ಲಿ ಅಗತ್ಯ ಮಾಹಿತಿಯನ್ನು ಪಡೆಯಲು ಸಹಕಾರಿಯಾಗಲಿದೆ.

ವನ್ಯಜೀವಿಗಳ ಸುರಕ್ಷತೆ ಹಾಗೂ ಪ್ರವಾಸಿಗರ ಹಿತದೃಷ್ಟಿಯಿಂದ ಸಫಾರಿ ವ್ಯವಸ್ಥೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ನಿರ್ವಹಿಸಲು ಜಿಪಿಎಸ್ ಮತ್ತು ಡ್ಯಾಶ್ ಕ್ಯಾಮ್ ವ್ಯವಸ್ಥೆ ನೆರವಾಗಲಿದೆ ಎಂದು ಅರಣ್ಯ ಇಲಾಖೆ ತಿಳಿಸಿದೆ.

# ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರೈತ ಸಂಘದಿಂದ ರಸ್ತೆ ತಡೆ

## ಜಿಲ್ಲಾಡಳಿತದ ನಿರ್ಲಕ್ಷ್ಯ ಖಂಡಿಸಿ ರಾಷ್ಟ್ರೀಯ ಹೆದ್ದಾರಿ 766ರಲ್ಲಿ ಪ್ರತಿಭಟನೆ



ಗುಂಡ್ಲುಪೇಟೆ: ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ತಾಲೂಕು ಕಚೇರಿ ಎದುರು ಧರಣಿ ನಡೆಸುತ್ತಿರುವ ರೈತ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು, ಜಿಲ್ಲಾಡಳಿತದ ನಿರ್ಲಕ್ಷ್ಯ ಖಂಡಿಸಿ ರಾಷ್ಟ್ರೀಯ ಹೆದ್ದಾರಿ 766ರಲ್ಲಿ ರಸ್ತೆ ತಡೆ ನಡೆಸಿದರು.

ತಾಲೂಕು ಆಡಳಿತವು ಜಿಲ್ಲಾಧಿಕಾರಿ, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಕಾವೇರಿ ನೀರಾವರಿ ನಿಗಮದ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಸಮಸ್ಯೆಗಳಿಗೆ ಸ್ಪಂದಿಸುವುದಾಗಿ ನೀಡಿದ್ದ ಭರವಸೆ ಕುರಿತು ಪ್ರತಿಭಟನಾಕಾರರು ಅಧಿಕಾರಿಗಳಿಂದ ಮಾಹಿತಿ ಪಡೆದರು. ಆದರೆ ಯಾವುದೇ ಸ್ಪಂದನೆ ದೊರೆಯದ ಹಿನ್ನೆಲೆಯಲ್ಲಿ ಸಂಘಟನೆಯ ರಾಜ್ಯ ಕಾರ್ಯಾಧ್ಯಕ್ಷ ಎ.ಎಂ. ಮಹೇಶ್‌ಪ್ರಭು ನೇತೃತ್ವದಲ್ಲಿ ರಸ್ತೆ ತಡೆ ನಡೆಸಲಾಯಿತು. ಈ ವೇಳೆ ಮಾತನಾಡಿದ ಮಹೇಶ್‌ಪ್ರಭು, ಕೆರೆಗಳಿಗೆ ನೀರು ತುಂಬಿಸುವುದು, ಸಾಗುವಳಿ ಚೀಟಿ ವಿತರಣೆ, ಪೋಡಿ ಹಾಗೂ ದುರಸ್ತಿ ಸೇರಿದಂತೆ ರೈತರ ನ್ಯಾಯಯುತ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಧರಣಿ ನಡೆಸಲಾಗುತ್ತಿದೆ. ಹಲವು ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದರೂ ಜಿಲ್ಲಾಡಳಿತ ಸ್ಪಂದಿಸದ ಹಿನ್ನೆಲೆಯಲ್ಲಿ ರಸ್ತೆಗಿಳಿಯುವುದು ಅನಿವಾರ್ಯವಾಗಿದೆ ಎಂದು ಹೇಳಿದರು. ರಸ್ತೆ ತಡೆ ಕೈಬಿಡುವಂತೆ ಪೊಲೀಸರು ಮನವಿ ಮಾಡಿದರೂ ಪ್ರತಿಭಟನಾಕಾರರು ಅದನ್ನು ತಿರಸ್ಕರಿಸಿ, ಅಗತ್ಯವಿದ್ದರೆ ಸಂಘಟನೆಯ ಎಲ್ಲರನ್ನೂ ಬಂಧಿಸುವಂತೆ ಪಟ್ಟು ಹಿಡಿದರು. ನಂತರ ಸೆ. 8ರಂದು ಜಿಲ್ಲಾಧಿಕಾರಿ, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಕಾವೇರಿ ನೀರಾವರಿ ನಿಗಮದ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ರೈತರ ಸಮಸ್ಯೆಗಳನ್ನು ಆಲಿಸುವುದಾಗಿ ತಾಲೂಕು ಆಡಳಿತ ಭರವಸೆ ನೀಡಿದ ಹಿನ್ನೆಲೆಯಲ್ಲಿ ರಸ್ತೆ ತಡೆ ಹಿಂಪಡೆಯಲಾಯಿತು.

ಸಂಘಟನೆಯ ಜಿಲ್ಲಾಧ್ಯಕ್ಷ ಶಿವಪುರ ಮಹದೇವಪ್ಪ ಮಾತನಾಡಿ, ಮಂಗಳವಾರ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಹಾಗೂ ಸಂಘಟನೆಯ ಕಾರ್ಯಕರ್ತರು ಆಗಮಿಸಿ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಬೇಕು ಎಂದು ಮನವಿ ಮಾಡಿದರು. ಮಂಗಳವಾರ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಸ್ಥಳಕ್ಕೆ ಆಗಮಿಸಿ ಸಮಸ್ಯೆಗಳಿಗೆ ಸ್ಪಂದಿಸದಿದ್ದರೆ ಧರಣಿ ಮತ್ತಷ್ಟು ತೀವ್ರ ಸ್ವರೂಪ ಪಡೆದುಕೊಳ್ಳಲಿದೆ ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಗುಂಡ್ಲುಪೇಟೆ ಮತ್ತು ಚಾಮರಾಜನಗರ ತಾಲೂಕು ಅಧ್ಯಕ್ಷರಾದ ಮಲ್ಲಯ್ಯನಪುರ ಶಿವಣ್ಣ, ಮಲ್ಲಣ್ಣ, ಉಪಾಧ್ಯಕ್ಷ ಮೂಡ್ನಾಕೂಡು ಮಹೇಶ್, ಪ್ರಧಾನ ಕಾರ್ಯದರ್ಶಿ ಕೋಡಹಳ್ಳಿ ಪ್ರಸಾದ್, ಕಾರ್ಯಾಧ್ಯಕ್ಷ ಸಿದ್ದಶೆಟ್ಟಿ, ಸಂಘಟನಾ ಕಾರ್ಯದರ್ಶಿ ರವಿಚಂದ್ರ, ಉಪಾಧ್ಯಕ್ಷ ಶಿವಕುಮಾರ್, ಯುವ ಘಟಕದ ಅಧ್ಯಕ್ಷ ಪ್ರವೀಣ್, ಕಾರ್ಯದರ್ಶಿ ರಘು, ಉಪಾಧ್ಯಕ್ಷ ಅಲತ್ತೂರು ರೋಹನ್‌ಗೌಡ, ಸಂಘಟನಾ ಕಾರ್ಯದರ್ಶಿ, ಮಹಿಳಾ ಘಟಕದ ತಾಲೂಕು ಅಧ್ಯಕ್ಷೆ ಬಸಮ್ಮ, ಕಾರ್ಯದರ್ಶಿ ಚಿಕ್ಕಸಿದ್ದಮ್ಮ, ಜಿಲ್ಲಾ ಕಾರ್ಯಾಧ್ಯಕ್ಷ ಕುಮಾರ್, ಕಾಯಂ ಆಹ್ವಾನಿತ ಸೋಮಶೇಖರ್ ಸೇರಿದಂತೆ ಕುಮಾರ್, ರೇವಣ್ಣ, ಮೂರ್ತಿ, ಬಸವಣ್ಣ ಮತ್ತಿತರರು ಉಪಸ್ಥಿತರಿದ್ದರು.

## ಮಾಂಸ ಮಾರಾಟ ನಿಷೇಧ

ಮೈಸೂರು :- ಮೈಸೂರು ಮಹಾನಗರ ಪಾಲಿಕೆಗೆ ಸೇರಿದ ಕುರಿ, ಮೇಕೆಗಳ ಕಸಾಯಿಖಾನೆ ಮತ್ತು ಇತರೆ ಎಲ್ಲಾ ಮಾಂಸದ ಅಂಗಡಿಗಳನ್ನು ಸೆಪ್ಟೆಂಬರ್ 14 ರಂದು ಗಣೇಶ ಚತುರ್ಥಿ ಪ್ರಯುಕ್ತ ಮುಚ್ಚಲಾಗುತ್ತದೆ. ಈ ದಿನ ಕುರಿ/ಮೇಕೆ, ಕೋಳಿ ಮಾಂಸ, ಹಂದಿ ಮಾಂಸ ಮತ್ತು ಮೀನು ವ್ಯಾಪಾರವನ್ನು ಮೈಸೂರು ನಗರದಲ್ಲಿ ಕಡ್ಡಾಯವಾಗಿ ನಿಷೇದಿಸಿದ್ದು, ಮೈಸೂರು ನಗರಪಾಲಿಕೆ ವ್ಯಾಪ್ತಿಯಲ್ಲಿರುವ ವಿವಿಧ ಮಾಂಸದ ಅಂಗಡಿಗಳನ್ನು ಮುಚ್ಚಲು ಆದೇಶ ನೀಡಲಾಗಿದೆ ಮಹಾನಗರ ಪಾಲಿಕೆ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಧಿಕಾರ ಪಡೆಯಲು ಮಾತ್ರ 'ಅಹಿಂದ' ಬಳಕೆ

## ಮಾಜಿ ಸಿಎಂ ಸಿದ್ದರಾಮಯ್ಯ ವಿರುದ್ಧ ಹೆಚ್.ವಿಶ್ವನಾಥ್ ವಾಗ್ದಾಳಿ

ಮೈಸೂರು: ಸಂಕಟ ಬಂದಾಗ ವೆಂಕಟರಮಣ ಎಂಬಂತೆ ತಮಗೆ ಅಧಿಕಾರ ಇಲ್ಲದಿದ್ದಾಗ, ಅಧಿಕಾರ ಪಡೆಯಲು ಹಾಗೂ ಬ್ಲ್ಯಾಕ್ ಮೇಲ್ ಮಾಡಲು ಅಹಿಂದವನ್ನು ಸಿದ್ದರಾಮಯ್ಯ ಉಪಯೋಗ ಮಾಡುತ್ತಾರೆ. ಆದರೆ ಇವರಿಂದ ಅಹಿಂದಕ್ಕೆ ಯಾವುದೇ ಉಪಯೋಗ ಆಗಲಿಲ್ಲ ಎಂದು ಮಾಜಿ ಸಚಿವ ಹೆಚ್. ವಿಶ್ವನಾಥ್ ತೀವ್ರವಾಗಿ ಟೀಕಿಸಿದರು.

ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಮಾಧ್ಯಮಗೋಷ್ಠಿ ನಡೆಸಿ ಮಾತನಾಡಿದ ಅವರು, ಸಿದ್ದರಾಮಯ್ಯ ಮತ್ತೆ ಅಹಿಂದ ಜಪ ಮಾಡುತ್ತಿದ್ದು, ಸಂಕಟ ಬಂದಾಗ ಮಾತ್ರ ಅವರಿಗೆ ಅಹಿಂದ ನೆನಪಾಗುತ್ತದೆ. ಅಧಿಕಾರದಲ್ಲಿ ಇದ್ದಾಗ ಅಹಿಂದ ವರ್ಗಕ್ಕೆ ಏನೂ ಮಾಡಿಲ್ಲ, ಆದರೆ ಅಧಿಕಾರ ಹೋಗುವ ಮುನ್ನ ಜಾತಿಗಣತಿ ವರದಿಯನ್ನು ಬಿಡುಗಡೆ ಮಾಡುವಂತೆ ಬ್ಲ್ಯಾಕ್ ಮೇಲ್ ಮಾಡಿದ್ದಾರೆ. ಈಗ ಮತ್ತೆ ಅಹಿಂದ ಸಮಾವೇಶ ಮಾಡಿದ್ದರೂ, ಅಹಿಂದ ಕಟ್ಟಿದ ಪ್ರಮುಖ ನಾಯಕರನ್ನೇ ಕಡೆಗಣಿಸಿದ್ದಾರೆ. ಹಿಂದೆ ಪರಮೇಶ್ವರ್ ಅವರು ಮುಖ್ಯಮಂತ್ರಿಯಾಗುವ ಅವಕಾಶವಿದ್ದ ಸಂದರ್ಭದಲ್ಲಿ ಅವರನ್ನೇ ಸೋಲಿಸಲಾಗಿತ್ತು, ಆ ಸೋಲಿಗೆ ಸಿದ್ದರಾಮಯ್ಯ ಕಾರಣ. ಆದರೆ ಈಗ ಅದೇ ಪರಮೇಶ್ವರ್ ಅವರ ಕೈಯಲ್ಲಿ ಅಹಿಂದ ಸಮಾವೇಶವನ್ನು ಉದ್ಘಾಟನೆ ಮಾಡಿಸಿದ್ದಾರೆ ಎಂದು ವಾಗ್ದಾಳಿ ನಡೆಸಿದರು.



▶▶ ಸಂಕಟ ಬಂದಾಗ ಅಹಿಂದ ಜಪ ಹಾಗೂ ನಾಯಕರ ಕಡೆಗಣನೆ

### ಮಹದೇವಪ್ಪ ಸರ್ಕಾರಿ ನಿವಾಸದ ವಿವಾದ

ಮಾಜಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ವಾಸವಿರುವ ಬೆಂಗಳೂರಿನ ಸರ್ಕಾರಿ ಮನೆಯನ್ನು ಸಚಿವ ಬೈರತಿ ಸುರೇಶ್ ತನಗೆ ಬೇಕೆಂದು ಅದನ್ನು ರಿಪೇರಿ ಮಾಡಿಸಲು ಹೊರಟಿದ್ದಾರೆ. ಸದ್ಯ ಮಹದೇವಪ್ಪ ಅವರು ಆ ಮನೆಯಲ್ಲಿ ವಾಸವಿದ್ದು, ಈ ರೀತಿ ಬೈರತಿ ಸುರೇಶ್ ನಡೆದುಕೊಳ್ಳಲು ಅದರ ಹಿಂದೆ ಸಿದ್ದರಾಮಯ್ಯ ಅವರ ಕೈವಾಡವಿದೆ. ಜೊತೆಗೆ ಈಗ ಸಿದ್ದರಾಮಯ್ಯ ವಾಸವಿರುವ ಬೆಂಗಳೂರಿನ ನಿವಾಸವನ್ನು ಇನ್ನೂ ಖಾಲಿ ಮಾಡಿಲ್ಲ. ಆದರೂ ಮಹದೇವಪ್ಪ ಅವರಿಗೆ ಯಾಕೆ ಈ ರೀತಿ ಮಾಡುತ್ತಿದ್ದಾರೆ ಎಂಬುದು ಎಲ್ಲರಿಗೂ ಗೊತ್ತು ಎಂದು ಅವರು ಗಂಭೀರ ಆರೋಪ ಮಾಡಿದರು.

### ಹಿರಿಯರಿಗೆ ಸಚಿವ ಸ್ಥಾನ ತಪ್ಪಿಸಿದ ಆರೋಪ

ಜಿಲ್ಲೆಯಲ್ಲಿ ದಲಿತ ನಾಯಕರಾದ ಮಹದೇವಪ್ಪ, ಆರು ಬಾರಿ ಗೆದ್ದಿರುವ ತನ್ವೀರ್ ಸೇಠ್ ಹಾಗೂ ಪಿರಿಯಾಪಟ್ಟಣ ವೆಂಕಟೇಶ್ ಅವರಂತಹ ಹಿರಿಯ ನಾಯಕರಿಗೆ ಸಚಿವ ಸ್ಥಾನ ತಪ್ಪಿಸಿದ್ದೇ ಸಿದ್ದರಾಮಯ್ಯ. ತನ್ನ ಮಗ ಯತೀಂದ್ರ ಮಹಾರಾಜನಾಗಿ ಮೈಸೂರಿನಲ್ಲಿ ಇರಬೇಕು ಎಂಬ ಉದ್ದೇಶದಿಂದಲೇ ಅವರು ಈ ರೀತಿ ಮಾಡಿದ್ದಾರೆ ಎಂದು ವಿಶ್ವನಾಥ್ ಆರೋಪಿಸಿದರು. ಇದೇ ವೇಳೆ, ತಮ್ಮ ವಿರುದ್ಧ ಸಚಿವ ಬೈರತಿ ಸುರೇಶ್ ಹಾಕಿರುವ 50 ಕೋಟಿ ರೂಪಾಯಿ ಮಾನನಷ್ಟ ಮೊಕದ್ದಮೆಯನ್ನು ಕಾನೂನಾತ್ಮಕವಾಗಿ ಎದುರಿಸುವುದಾಗಿ ಅವರು ಸ್ಪಷ್ಟಪಡಿಸಿದರು.

# ಬರ ನಿರ್ವಹಿಸಿದ್ದರೆ ನಿರಂತರ ಹೋರಾಟ: ಬಡಗಲಪುರ ನಾಗೇಂದ್ರ

ಮೈಸೂರು: ಸರ್ಕಾರ ಸಮರ್ಪಕವಾಗಿ ಬರ ಪರಿಸ್ಥಿತಿ ನಿರ್ವಹಿಸದಿದ್ದರೆ, ಆಡಳಿತ ಹಾಗೂ ವಿರೋಧ ಪಕ್ಷಗಳು ಈ ನಿಟ್ಟಿನಲ್ಲಿ ಗಮನ ಹರಿಸದಿದ್ದರೆ ಜನಪ್ರತಿನಿಧಿಗಳನ್ನು ಕಂಡಾಗಲೆಲ್ಲ ರೈತರು ಪ್ರತಿಭಟಿಸಬೇಕಾಗುತ್ತದೆ ಎಂದು ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಎಚ್ಚರಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷಗಳೆರಡಕ್ಕೂ ರೈತರ ಬರ ಪರಿಸ್ಥಿತಿ ಬಗ್ಗೆ ಗಮನ ಅಗತ್ಯವಿಲ್ಲ. ಯರ?ಯಾರದೋ ರಾಜೀನಾಮೆ ಎಂಬ ವಿಷಯದಲ್ಲಿ ಮುಳುಗಿದ್ದಾರೆ. ಆದರೆ ರಾಜ್ಯದ ರೈತರು ಕಂಡು ಕೇಳರಿಯದ ಬರ ಪರಿಸ್ಥಿತಿಗೆ ಸಿಲುಕಿ ಆತ್ಮಹತ್ಯೆ ದಾರಿ ಹಿಡಿಯುವ ಆತಂಕ ಎದುರಾಗಿದೆ. ಹೀಗಾಗಿ ಸರ್ಕಾರ ಕೂಡಲೇ ರೈತರ ನೆರವಿಗೆ ಧಾವಿಸಬೇಕು. ಇಲ್ಲದಿದ್ದರೆ ಜನಪ್ರತಿನಿಧಿಗಳನ್ನು ಕಂಡಲೆಲ್ಲ ರೈತರು ಪ್ರತಿಭಟಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಯಾವ ರೀತಿಯ ಹೋರಾಟ ನಡೆಸಬೇಕೆಂಬ ಬಗ್ಗೆ ರೈತ ಸಂಘ ಬುಧವಾರ ಸಭೆ ನಡೆಸಿ ನಿರ್ಧರಿಸುತ್ತದೆ ಎಂದರು.

ರಾಜ್ಯದ ಎಲ್ಲ ತಾಲ್ಲೂಕು ಬರ ಪೀಡಿತ ಎಂದು ಘೋಷಿಸಬೇಕು, ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ನೀತಿಗಳನ್ನು ಪಕ್ಕಕ್ಕಿಟ್ಟು ತನ್ನದೇ ಆದ ಸಂಪನ್ಮೂಲದಿಂದ ರೈತರು, ದುಡಿಯುವ ಜನರ ನೆರವಿಗೆ ಬರಬೇಕು. ಹಣವಿಲ್ಲ ಎಂದಾದರೆ ಕಾರ್ಪೊರೇಟ್ ವಲಯದ ಮೇಲೆ ವಿಶೇಷ ತೆರಿಗೆ ವಿಧಿಸಲಿ, ಜೊತೆಗೆ ಸಿಎಂ ಜೋಳಿಗೆ ಹಿಡಿದು ಜನರ ಬಳಿಗೆ ಬರಲಿ. ಈ ಹಿಂದೆ ಒಮ್ಮೆ ಆಗಿದ್ದಂತೆ ಜನರು ಉದಾರವಾಗಿ ನೆರವು ನೀಡುತ್ತಾರೆಂದರು.

ಇದಲ್ಲದೆ, ರಾಜ್ಯದ ಸಂಸದರು ಕೇಂದ್ರದ ಮೇಲೆ ಒತ್ತಡ ಹೇರಿ ರೈತರ ಸಾಲಮನ್ನಾಕ್ಕೆ ಆಗ್ರಹಿಸಬೇಕು. ಬ್ಯಾಂಕುಗಳು ಸಾಲದ ನೆಪದಲ್ಲಿ ರೈತರಿಗೆ ನೋಟಿಸ್ ನೀಡುವುದು, ಬೆದರಿಕೆ ಹಾಕುವುದನ್ನು ನಿಲ್ಲಿಸಬೇಕು. ನಗರಕ್ಕೆ ಹೊಂದಿಕೊಂಡಂತಿರುವ ಮರಸೆ, ಮದರಗಳ್ಳಿಗಳ ಫಲವತ್ತಾದ ಜಮೀನು ಸ್ವಾಧೀನ ಕ್ರಮ ಕೆಐಎಡಿಬಿ ಬಿಡಬೇಕು, ತಮಿಳ್ನಾಡಿಗೆ ನೀರು ಹರಿಸುವುದನ್ನು ನಿಲ್ಲಿಸಿ ರಾಜ್ಯದ ರೈತರ ಹಿತ ಕಾಪಾಡಬೇಕು ಎಂದು ಒತ್ತಾಯಿಸಿದರು. ಹೊಸಕೋಟೆ ಬಸವರಾಜು, ನೇತ್ರಾವತಿ, ಪಿ.ಮರಂಕಯ್ಯ, ಮಂಡಕಳ್ಳಿ ಮಹೇಶ್, ಕೆ.ಜಿ.ಮಹೇಶ್ ಇದ್ದರು.



ಮೊದಲ ಪುಟದಿಂದ

## ಮತ್ತೊಂದು ಸಂಕಷ್ಟ

ಆರೋಪ ಶಿವಶಂಕರಪ್ಪ ಸಾಹುಕಾರ್ ವಿರುದ್ಧ ಕೇಳಿಬಂದಿದೆ. ಜಮೀನು ಮಾಲೀಕರಾದ ಬಸಮ್ಮ ಅವರ ಮಗ ಶಂಕರಗೌಡ ಎಂದು ನಕಲಿ ದಾಖಲೆ ಸೃಷ್ಟಿಸಿ, ಜಮೀನನ್ನು ಗಿಫ್ಟ್ ಡೀಡ್ ಮೂಲಕ ಶಂಕರಗೌಡ ಹೆಸರಿಗೆ ನೋಂದಣಿ ಮಾಡಲಾಗಿದೆ ಎಂದು ಆರೋಪಿಸಲಾಗಿದೆ. ಬಳಿಕ ಶಂಕರಗೌಡ ಹೆಸರಿಗೆ ಬಂದಿದ್ದ ಜಮೀನನ್ನು ಶಿವಶಂಕರಪ್ಪ ಸಾಹುಕಾರ್ ತಮ್ಮ ಹೆಸರಿಗೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ. ಬಸಮ್ಮ ಅವರ ಮಗ ಶಂಕರಗೌಡ ಎಂಬುದಾಗಿ ನಕಲಿ ದಾಖಲೆ ಸೃಷ್ಟಿಸಲು ಶಿವಶಂಕರಪ್ಪ ತಮ್ಮ ಪ್ರಭಾವ ಬಳಸಿದ್ದಾರೆ ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ. ಈ ಮೂಲಕ ಅನಧಿಕೃತವಾಗಿ ಜಮೀನು ತಮ್ಮ ಹೆಸರಿಗೆ ಮಾಡಿಕೊಂಡಿದ್ದಾರೆ ಎಂದು ಜಮೀನು ಕಳೆದುಕೊಂಡ ಕುಟುಂಬಸ್ಥರು ಸಾಹುಕಾರ್ ವಿರುದ್ಧ ದೂರು ನೀಡಿದ್ದಾರೆ. ಯಾದಗಿರಿ ಜಿಲ್ಲೆಯ ಶಹಾಪುರ ಪೊಲೀಸ್ ಠಾಣೆಯಲ್ಲಿ ಈ ಸಂಬಂಧ ದೂರು ದಾಖಲಾಗಿದೆ.

## ಅಧ್ಯಕ್ಷ ಸ್ಥಾನ ಉಳಿಸಿಕೊಳ್ಳಲು ಪಾದಯಾತ್ರೆ: ಯತ್ನಾಳ್ ಲೇವಡಿ

ಪಾದಯಾತ್ರೆ ಯಾರಿಗೆ ಮೈನಸ್ ಆಗುತ್ತೋ, ಪ್ಲಸ್ ಆಗುತ್ತೋ ಬಿಡುತ್ತೆ ಗೊತ್ತಿಲ್ಲ. ರಾಜ್ಯಾಧ್ಯಕ್ಷ ಸ್ಥಾನದಿಂದ ತೆಗೆಯುತ್ತಾರೆ ಎಂಬ ಭಯ ಬಂದಿದೆ. ಹೀಗಾಗಿ ಪಾದಯಾತ್ರೆಯಿಂದ ತಾವು ಹೀರೋ ಆಗಬೇಕು ಎಂದು ಇದೆಲ್ಲ ಮಾಡ್ತಿದ್ದಾರೆ. ಹೋರಾಟ, ಪಾದಯಾತ್ರೆ ಮಾಡುವುದಾದರೆ ಕೆಪಿಎಸ್‌ಸಿ ಹಗರಣದ ವಿರುದ್ಧ ಹೋರಾಟ ಮಾಡಲಿ ಎಂದು ಸವಾಲು ಹಾಕಿದರು.

## ತಿಕ್ಕಾಟ ಇಲ್ಲ

ಮುಖ್ಯಮಂತ್ರಿಗಳ ವಿವೇಚನೆಗೆ ಬಿಟ್ಟ ವಿಚಾರ. ಖಾಲಿ ಇದ್ದ ಕಾರಣ ಆ ಮನೆಯನ್ನು ನನಗೆ ಹಂಚಿಕೆ ಮಾಡಲಾಗಿದೆ. ಇದರಲ್ಲಿ ವಿವಾದವೇನಿದೆ ಎಂಬುದು ನನಗೆ ಗೊತ್ತಿಲ್ಲ ಎಂದು ಅವರು ಹೇಳಿದರು. ಮಹದೇವಪ್ಪ ಅವರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದೇನೆ. ನಾನು ಮಹದೇವಪ್ಪಣ್ಣ ಅವರ ಮನೆಗೆ ನೂರು ಸಲ ಹೋಗಿ ಊಟ ಮಾಡಿದ್ದೇನೆ. ಅವರು ನನಗಿಂತ ದೊಡ್ಡವರು, ಅವರ ಮುಂದೆ ನಾನು ಮಗನ ಸಮಾನ ಎಂದರು.

ಅಹಿಂದ ಸಮಾವೇಶಕ್ಕೆ ಸತೀಶ್ ಜಾರಕಿಹೊಳಿ ಹಾಗೂ ಡಾ.ಎಚ್.ಸಿ. ಮಹದೇವಪ್ಪ ಅವರಿಗೆ ಆಹ್ವಾನ ನೀಡದಿರುವ ಕುರಿತು ಪ್ರತಿಕ್ರಿಯಿಸಿದ ಅವರು, ಅದು ಹಿಂದುಳಿದ ವರ್ಗಗಳ ಒಕ್ಕೂಟದ ಕಾರ್ಯಕ್ರಮ. ಯಾರನ್ನು ಕರೆಯಬೇಕು ಎಂಬುದನ್ನು ಸಂಘಟಕರೇ ನಿರ್ಧರಿಸುತ್ತಾರೆ. ಜಿ. ಪರಮೇಶ್ವರ್ ಅವರು ಉಪಮುಖ್ಯಮಂತ್ರಿಯಾಗಿದ್ದ ಕಾರಣ ಅವರನ್ನು ಉದ್ಘಾಟನೆಗೆ ಕರೆದಿರಬಹುದು. ಸತೀಶ್ ಜಾರಕಿಹೊಳಿ ಹಾಗೂ ಮಹದೇವಪ್ಪ ಅವರನ್ನೂ ಕರೆಯಬೇಕಿತ್ತು. ಯಾಕೆ ಕರೆದಿಲ್ಲವೋ ಗೊತ್ತಿಲ್ಲ ಎಂದು ತಿಳಿಸಿದರು.

## ಕೆಪಿಎಸ್‌ಸಿ ಹಗರಣ: ಪರೀಕ್ಷೆಗೂ ಮುನ್ನವೇ 12 ಕೋಟಿ ವಸೂಲಿ

ಸಂಗ್ರಹಿಸಿರುವುದು ತನಿಖೆಯಲ್ಲಿ ದೃಢಪಟ್ಟಿದೆ.

ಸಂಗ್ರಹಿಸಲಾದ ಬಹುತೇಕ ಹಣವನ್ನು ನಗದು ರೂಪದಲ್ಲೇ ಪಡೆಯಲಾಗಿತ್ತು. ಆರೋಪಿ ಬಸವರಾಜ್ ಎಂಬಾತನ ಬ್ಯಾಂಕ್ ಖಾತೆಗೆ ಅಭ್ಯರ್ಥಿಗಳು ಸುಮಾರು 75 ಲಕ್ಷ ರೂ. ಹಣವನ್ನು ನೇರವಾಗಿ ಸಂದಾಯ ಮಾಡಿದ್ದರು. ಈ ಹಣವನ್ನು ಬೀದರ್‌ನ ಕೋ-ಆಪರೇಟಿವ್ ಬ್ಯಾಂಕ್ ಖಾತೆಯಲ್ಲಿ ಇರಿಸಲಾಗಿತ್ತು.

ಪ್ರಕರಣದ ಬೆನ್ನುಬಿದ್ದ ಸಿಐಡಿ ಅಧಿಕಾರಿಗಳು, ಬ್ಯಾಂಕ್ ಖಾತೆಯಲ್ಲಿದ್ದ 75 ಲಕ್ಷ ರೂ. ನಗದು ಸೇರಿದಂತೆ ಅಕ್ರಮಕ್ಕೆ ಸಂಬಂಧಿಸಿದ ಮಹತ್ವದ ದಾಖಲೆಗಳನ್ನು ವಶಪಡಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

## ಇನ್ನೂ 25 ಕ್ಷೇತ್ರ ಬರಪೀಡಿತ

ಮಾಡಿಲ್ಲ ಎಂದು ಯಾರೂ ಆತಂಕಪಡುವ ಅಗತ್ಯವಿಲ್ಲ. ಇಡೀ ರಾಜ್ಯವೇ ಬರಗಾಲವನ್ನು ಎದುರಿಸುತ್ತಿದೆ. ಬರಪೀಡಿತ ಪ್ರದೇಶಗಳೆಂದು ಘೋಷಿಸುವ ವಿಚಾರದಲ್ಲಿ ರಾಜ್ಯ ಸರ್ಕಾರದ ಯಾರೊಬ್ಬರ ಪಾತ್ರವೂ ಇಲ್ಲ. ಪಕ್ಷ ನೋಡಿಕೊಂಡು ಬರ ಸಂಭವಿಸಿಲ್ಲ. ಈಗಾಗಲೇ ಘೋಷಿತ ಪಟ್ಟಿಯಲ್ಲಿ ವಿರೋಧ ಪಕ್ಷದ ಶಾಸಕರಿರುವ ತಾಲ್ಲೂಕುಗಳೂ ಇವೆಯಲ್ಲವೇ? ಎಂದು ಪ್ರಶ್ನಿಸಿದರು.

### ಇಂದಿನಿಂದ ಪ್ರಚಾರ ರಥಗಳ ಸಂಚಾರ : ಎ.ಆರ್. ಕೃಷ್ಣಮೂರ್ತಿ | ಸಮ್ಮೇಳನದಲ್ಲಿ ಒಂದು ಲಕ್ಷಕ್ಕು ಹೆಚ್ಚು ಜನರು ಭಾಗವಹಿಸುವ ನಿರೀಕ್ಷೆ

# ಅ.24 ಮತ್ತು 25ರಂದು ಚಾ.ನಗರದಲ್ಲಿ ಅಂತರರಾಷ್ಟ್ರೀಯ ಬೌದ್ಧ ಮಹಾಸಮ್ಮೇಳನ

ಚಾಮರಾಜನಗರ, ಅಂತರರಾಷ್ಟ್ರೀಯ ಬೌದ್ಧ ಮಹಾಸಮ್ಮೇಳನ-2026 ಚಾಮರಾಜನಗರದಲ್ಲಿ ಅ. 24 ಮತ್ತು 25 ರಂದು ಎರಡು ದಿನಗಳ ಅದ್ದೂರಿಯಾಗಿ ನಡೆಯಲಿದ್ದು, ಇಂದಿನಿಂದ ಜಿಲ್ಲೆಯಾದ್ಯಂತ ಪ್ರಚಾರ ರಥಗಳು ಚಾಲನೆ ಗೊಳ್ಳಲಿದೆ ಎಂದು ಅಂತರರಾಷ್ಟ್ರೀಯ ಬೌದ್ಧ ಮಹಾಸಮ್ಮೇಳನ ಅಚರಣಾ ಸಮಿತಿಯ ಅಧ್ಯಕ್ಷರು ಅದ ಕೊಳ್ಳೇಗಾಲ ಕ್ಷೇತ್ರದ ಶಾಸಕ ಎ.ಆರ್. ಕೃಷ್ಣಮೂರ್ತಿ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಥಮ ಸಮ್ಮೇಳನವು ಮೈಸೂರಿನಲ್ಲಿ ಬಹಳ ಯಶಸ್ವಿಯಾಗಿ ನಡೆಯಿತು. ಎರಡನೇ ಸಮ್ಮೇಳವವನ್ನು ಚಾಮರಾಜನಗರದಲ್ಲಿ ಮಾಡುವಂತೆ ಅಂದು ನಾನು ಸೇರಿದಂತೆ ಸಚಿವರಾದ ಸಿ. ಪುಟ್ಟರಂಗಶೆಟ್ಟಿ, ಮುಖಂಡರಾದ ವೆಂಕಟರಮಣಸ್ವಾಮಿ ಅವರಿಗೆ ಬುದ್ದ ಧ್ವಜವನ್ನು ಹಸ್ತಾಂತರ ಮಾಡಲಾಯಿತು. ಅಂದಿನಿಂದ ಸಮ್ಮೇಳನ ಪೂರ್ವ ಸಿದ್ದತೆಗಾಗಿ ಸಭೆಗಳನ್ನು ಆಯೋಜನೆ ಮಾಡಿ, ಸಮಿತಿ, ಉಪ ಸಮಿತಿ ಹಾಗೂ ತಾಲೂಕು ಸಮಿತಿಗಳನ್ನು ರಚನೆ ಮಾಡಿಕೊಂಡು ಕಾರ್ಯಕ್ರಮದ ಯಶಸ್ವಿಗಾಗಿ ಪಕ್ಷಾತೀತವಾಗಿ ಎಲ್ಲ ಮುಖಂಡರು ಶ್ರಮಿಸುತ್ತಿದ್ದೇವೆ ಎಂದರು.



ಸಮ್ಮೇಳನವು ನಗರದ ಡಾ. ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ನಡೆಯಲಿದ್ದು, ಅಂತರರಾಷ್ಟ್ರೀಯ ಭೌದ್ದ ಬಿಕ್ಕು, ರಾಷ್ಟ್ರೀಯ ಬೌದ್ದ ಧರ್ಮ ಪ್ರಚಾರಕರು, ಡಾ.ಬಿ.ಆರ್. ಅಂಬೇಡ್ಕರ್ ಅವರು ಮೊಮ್ಮಗ ಯಶವಂತ್‌ರಾವ್ ಅಂಬೇಡ್ಕರ್ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ. ಎರಡು ದಿನಗಳ ಕಾಲ ನಡೆಯುವ ಸಮ್ಮೇಳನದಲ್ಲಿ ಬುದ್ದ ನವಮಿ, ಧಮ್ಮ ನವಮಿ, ಸಂಘಂ ನವಮಿ ಎಂದು ವಿಂಗಡಣೆ ಮಾಡಿಕೊಳ್ಳಲಾಗುತ್ತದೆ. ಸಂಪೂರ್ಣವಾಗಿ ಬುದ್ದನ ವಿಚಾರಧಾರೆಗಳು ಹಾಗೂ ಬುದ್ದ ಪಂಚ ಶೀಲ ತತ್ವಗಳ ಪಾಲನೆ ಅಂಬೇಡ್ಕರ್ ಅವರು ಬುದ್ದನಡೆಗೆ ಕುರಿತು ಕಾರ್ಯಕ್ರಮಗಳು ಅರ್ಥಪೂರ್ಣವಾಗಿ ನಡೆಯಲಿದೆ. ಎಂದರು.

ಇಂದಿನಿಂದ ಬುದ್ದ ಪ್ರಚಾರ ರಥಗಳ ಚಾಲನೆ : ಜಿಲ್ಲೆಯ ಐದು ತಾಲೂಕು ಕೇಂದ್ರಗಳಲ್ಲಿ ಇಂದಿನಿಂದ ಬುದ್ದ ರಥ ಚಾಲನೆಗೊಳ್ಳಲಿದೆ ಜಿಲ್ಲೆಯ ವ್ಯಾಪ್ತಿಯ 403 ಗ್ರಾಮಗಳನ್ನು ಸಂಪರ್ಕ ಮಾಡಲಿದ್ದು, ನಾಲ್ಕು ರಥಗಳಲ್ಲಿ ಭೌದ್ದ ಭಿಕ್ಕು, ಉಪಾಸಕರು, ಸಂಚಾಲಕರು ಸಕ್ರಿಯವಾಗಿ ಭಾಗವಹಿಸಲಿದ್ದಾರೆ. ಆಯಾ ಗ್ರಾಮಗಳಿಗೆ ರಥಗಳು ಆಗಮಿಸುತ್ತಿದ್ದಂತೆ, ಸ್ವಾಗತಿಸಿ, ಕಾರ್ಯಕ್ರಮದ ಬಗ್ಗೆ ಮಾಹಿತಿ ಹಾಗೂ ಬುದ್ದ ಧಮ್ಮ ದೀಕ್ಷೆ ಪಡೆದು ಗೌರವಯುತವಾಗಿ ಅಯಾ ಗ್ರಾಮಗಳ ಮುಖಂಡರು, ಸಂಘ ಸಂಸ್ಥೆಗಳ ಮುಖಂಡರು ಬಿಳ್ಕೊಡಲಿದ್ದಾರೆ.

ಚಾ.ನಗರ ತಾಲೂಕಿನಲ್ಲಿ 130 ಹಳ್ಳಿಗಳನ್ನು 32 ದಿನಗಳು ಸಂಚಾರ, ಗುಂಡ್ಲುಪೇಟೆ ತಾಲೂಕಿನಲ್ಲಿ 109 ಹಳ್ಳಿಗಳನ್ನು 26 ದಿನಗಳು, ಕೊಳ್ಳೇಗಾಲ ತಾಲೂಕಿನ 89 ಹಳ್ಳಿಗಳಲ್ಲಿ 15 ದಿನಗಳು, ಯಳಂದೂರು ತಾಲೂಕಿನ 30 ಹಳ್ಳಿಗಳಿಗೆ 8 ದಿನಗಳು ಹಾಗೂ ಹನೂರು ತಾಲೂಕಿನಲ್ಲಿ 55 ಗ್ರಾಮಗಳಲ್ಲಿ 13 ದಿನಗಳ ಕಾಲ ಬುದ್ದ ರಥ ಪ್ರಚಾರ ಮಾಡಲಿದೆ. ಆಯಾ ಕ್ಷೇತ್ರಗಳ ಶಾಸಕರು, ಮುಖಂಡರು ಚಾಲನೆ ನೀಡಲಿದ್ದು, ಜಿಲ್ಲೆಯಾದ್ಯಂತ ಬುದ್ದ ರಥ ಆಗಮಿಸಿದಾಗ ಎಲ್ಲಾ ವರ್ಗದವರು, ಸರ್ವ ಧರ್ಮದವರು ಭಾಗವಹಿಸುವುದರ ಜೊತೆಗೆ ಸಮ್ಮೇಳನ ಯಶಸ್ವಿಗೆ ಧಮ್ಮ ದಾನ ಮಾಡಬೇ ಕೆಂದು ಎ.ಆರ್. ಕೃಷ್ಣಮೂರ್ತಿ ಮನವಿ ಮಾಡಿದರು. ಪತ್ರಿಕಾಗೋಷ್ಠಿಯಲ್ಲಿ ಸಮಿತಿಯ ಸಂಚಾಲಕರಾದ ವೆಂಕಟರಮಣಸ್ವಾಮಿ (ಪಾಪು) ಮುಳ್ಳೂರು ಶಿವಮಲ್ಲು, ಕೋಡಿಉಗನೆ ಮಂಜುನಾಥ್, ಸಿದ್ದರಾಜು, ಯಳಂದೂರು ಸಿದ್ದರಾಜು, ಎನ್. ನಾಗಯ್ಯ, ಸುಭಾಶ್ ಮಾಡ್ರಹಳ್ಳಿ ಇದ್ದರು.

# ಅಂತಾರಾಷ್ಟ್ರೀಯ ಬೌದ್ಧ ಸಮ್ಮೇಳನಕ್ಕೆ ಸಂಪೂರ್ಣ ಸಹಕಾರ: ಶಾಸಕ ಗಣೇಶ್‌ಪ್ರಸಾದ್

ಚಾಮರಾಜನಗರ: ಅಂತಾರಾಷ್ಟ್ರೀಯ ಬೌದ್ಧ ಸಮ್ಮೇಳನ ಒಂದು ಐತಿಹಾಸಿಕ ಸಮಾವೇಶವಾಗಿದ್ದು, ಅದರ ಯಶಸ್ವಿಗೆ ಸಂಪೂರ್ಣ ಸಹಕಾರ ನೀಡುವುದಾಗಿ ಗುಂಡ್ಲುಪೇಟೆ ಕ್ಷೇತ್ರದ ಶಾಸಕ ಹೆಚ್.ಎಂ. ಗಣೇಶ್‌ಪ್ರಸಾದ್ ಹೇಳಿದರು. ಅಂತರಾಷ್ಟ್ರೀಯ ಬೌದ್ಧ ಮಹಾಸಮ್ಮೇಳನ ಆಚರಣಾ ಸಮಿತಿ, ಭಿಕ್ಕು ಸಂಘ ಹಾಗೂ ಭಾರತೀಯ ಬೌದ್ಧ ಮಹಾಸಭಾ ವತಿಯಿಂದ ಅಂತರಾಷ್ಟ್ರೀಯ ಬೌದ್ಧ ಮಹಾಸಮ್ಮೇಳನದ ಅಂಗವಾಗಿ ಆಯೋಜಿಸಿರುವ ಧಮ್ಮ ಪಯಣ ಜಾಗೃತಿ ಜಾಥಾ ಟ್ಯಾಬ್ಲೊಗೆ ಪುಷ್ಪಾರ್ಚನೆ ಮಾಡಿ ಚಾಲನೆ ನೀಡಿ ಅವರು ಮಾತನಾಡಿದರು. ಅಕ್ಟೋಬರ್ 24 ಮತ್ತು 25 ರಂದು ಚಾಮರಾಜನಗರದ ಡಾ. ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಅಂತಾರಾಷ್ಟ್ರೀಯ ಬೌದ್ಧ ಸಮ್ಮೇಳನ ನಡೆಯಲಿದ್ದು, ಇದೊಂದು ಐತಿಹಾಸಿಕ ಸಮ್ಮೇಳನ ವಾಗಲಿದೆ ಹಾಗೂ ಅಂತಾರಾಷ್ಟ್ರೀಯ ಮಟ್ಟದಿಂದ ಗಣ್ಯರು ಭಾಗವಹಿಸಲಿದ್ದಾರೆ. ರಾಜ್ಯದಿಂದ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು, ಸಚಿವರು, ಹಾಗೂ ಬೌದ್ಧ ಭಿಕ್ಕುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವುದರಿಂದ ಈ ಸಮ್ಮೇಳನಕ್ಕೆ ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ಶಾಸಕರು ತಿಳಿಸಿದರು.



### ಹಳ್ಳಿಹಳ್ಳಿಗಳಲ್ಲಿ ಜಾಗೃತಿ ಮೂಡಿಸುತ್ತಿರುವ ಧಮ್ಮ ಪಯಣ: ಎ.ಆರ್. ಕೃಷ್ಣಮೂರ್ತಿ

ಕೊಳ್ಳೇಗಾಲ ಕ್ಷೇತ್ರದ ಶಾಸಕರು ಹಾಗೂ ಅಂತರಾಷ್ಟ್ರೀಯ ಬೌದ್ಧ ಮಹಾಸಮ್ಮೇಳನ ಆಚರಣಾ ಸಮಿತಿ ಅಧ್ಯಕ್ಷರಾದ ಎ.ಆರ್. ಕೃಷ್ಣಮೂರ್ತಿ ಮಾತನಾಡಿ, ಕಳೆದ ವರ್ಷ ಮೈಸೂರಿನಲ್ಲಿ ಅಂತಾರಾಷ್ಟ್ರೀಯ ಬೌದ್ಧ ಸಮ್ಮೇಳನ ಬಹಳ ಯಶಸ್ವಿಯಾಗಿತ್ತು. ಅಂದಿನ ಆಯೋಜಕರು ತೀರ್ಮಾನಿಸಿ ನಮ್ಮ ಜಿಲ್ಲೆಗೆ ಹಸ್ತಾಂತರ ಮಾಡಿದರು. ಅದರಂತೆ ಅಕ್ಟೋಬರ್ 24 ಮತ್ತು 25 ರಂದು ಎರಡು ದಿನಗಳ ಕಾಲ ಚಾಮರಾಜನಗರದ ಡಾ. ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಈ ಸಮ್ಮೇಳನ ನಡೆಯಲಿದೆ. ಈ ಸಂಬಂಧವಾಗಿ ಜಿಲ್ಲೆಯ ಪ್ರತಿ ಹಳ್ಳಿಹಳ್ಳಿಯಲ್ಲೂ ಧಮ್ಮ ಪಯಣ ಸಂಚರಿಸಿ ಅರಿವು ಮೂಡಿಸುತ್ತಿದೆ ಎಂದರು. ಈ ಐತಿಹಾಸಿಕ ಬೌದ್ಧ ಸಮ್ಮೇಳನದ ಯಶಸ್ವಿಗೆ ಹರವೆ ಹೋಬಳಿ ಗ್ರಾಮಸ್ಥರು ತಮ್ಮ ತನು, ಮನ, ಧನವನ್ನು ಅರ್ಪಿಸುವ ಮೂಲಕ ಕುಟುಂಬ ಸಮೇತರಾಗಿ ಭಾಗವಹಿಸಿ ಧಮ್ಮರಥವನ್ನು ಮುನ್ನಡೆಸಲು ಹಾಗೂ ಪ್ರಬುದ್ಧ ಭಾರತವನ್ನು ನಿರ್ಮಿಸಲು ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

### ನಳಂದ ವಿಶ್ವವಿದ್ಯಾನಿಲಯದ ಅಭಿವೃದ್ಧಿಗೆ ಅನುದಾನದ ನಿರೀಕ್ಷೆ: ಶಾಸಕ ದರ್ಶನ್ ಧ್ರುವನಾರಾಯಣ್

ನಂಜನಗೂಡು ಶಾಸಕ ದರ್ಶನ್ ಧ್ರುವನಾರಾಯಣ್ ಮಾತನಾಡಿ, ನಮ್ಮ ತಂದೆ ಧ್ರುವನಾರಾಯಣ್ ಅವರು ಚಾಮರಾಜನಗರ ಜಿಲ್ಲೆಯಲ್ಲಿ ನಳಂದ ವಿಶ್ವವಿದ್ಯಾನಿಲಯ ನಿರ್ಮಾಣ ಮಾಡಿದ್ದು ಅದು ಕಾರ್ಯರೂಪಕ್ಕೆ ಬಂದಿದೆ. ಆದರೆ, ಸುತ್ತುಗೋಡೆ ಹಾಗೂ ಇನ್ನೂ ಹೆಚ್ಚಿನ ಅಭಿವೃದ್ಧಿ ಕೆಲಸಗಳು ಆಗಬೇಕಿದೆ. ಇದಕ್ಕೆ ಅನುದಾನ ಬಿಡುಗಡೆ ಮಾಡಿಕೊಡಬೇಕು ಎಂದು ಸಮ್ಮೇಳನದಲ್ಲಿ ಭಾಗವಹಿಸುವ ರಾಜ್ಯದ ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗಳು ಮತ್ತು ಸಚಿವರಲ್ಲಿ ಮನವಿ ಮಾಡಿಕೊಳ್ಳಲಾಗುವುದು.

**▸▸ ಹೆಗ್ಗವಾಡಿಯಲ್ಲಿ ಹರವೆ ಹೋಬಳಿ ಮಟ್ಟದ ಧಮ್ಮ ಪಯಣ ಜಾಥಾಕ್ಕೆ ಚಾಲನೆ**

ಸಮ್ಮೇಳನದ ಯಶಸ್ವಿಗೆ ಎಲ್ಲಾ ರೀತಿಯ ಸಹಕಾರ ನೀಡಲಾಗುವುದು ಎಂದರು.

ಈ ಕಾರ್ಯಕ್ರಮದಲ್ಲಿ ಬಂತೇಜಿ ಅವರು ಸಾನಿಧ್ಯ ವಹಿಸಿದ್ದರು. ಈ ಸಂದರ್ಭದಲ್ಲಿ ಸ್ವಾಗತ ಸಮಿತಿಯ ಜಿಲ್ಲಾ ಸಂಚಾಲಕ ವೆಂಕಟರಮಣಸ್ವಾಮಿ ಪಾಪು, ಪ್ರಚಾರ ಸಮಿತಿ ಜಿಲ್ಲಾ ಸಂಚಾಲಕ ಸಿ.ಎಂ. ಕೃಷ್ಣಮೂರ್ತಿ ಮಾತನಾಡಿದರು. ಬಿಎಸ್‌ಐ ಜಿಲ್ಲಾಧ್ಯಕ್ಷ ಬಸವರಾಜು, ಮಾಜಿ ತಾಲೂಕು ಪಂಚಾಯತಿ ಸದಸ್ಯ ಮುಕ್ಕಡಹಳ್ಳಿ ರವಿಕುಮಾರ್, ಜಿ.ಪಂ. ಮಾಜಿ ಸದಸ್ಯ ಕೆರೆಹಳ್ಳಿ ನವೀನ್, ಮುಖಂಡರಾದ ಮೂಡ್ನಾಕೂಡು ಪ್ರಕಾಶ್, ಹೊಸಳ್ಳಿ ಮಧುಸೂದನ್, ಹೆಗ್ಗವಾಡಿ ಕೆಂಪರಾಜು, ಕೆರೆಹಳ್ಳಿ ಮಹದೇವಸ್ವಾಮಿ, ಸಾಹಿತಿಗಳಾದ ಮಂಜು ಕೋಡಿಉಗನೆ, ಸೋಮಶೇಖರ್ ಬಿಸಲವಾಡಿ ಉಪಸ್ಥಿತರಿದ್ದರು. ಇವರೊಂದಿಗೆ ಮುಖಂಡರಾದ ಅಜಯ್ ಶಂಭು, ಯಜಮಾನ ಚಿನ್ನಸ್ವಾಮಿ, ರಾಜಕುಮಾರ್, ಕೆರೆಹಳ್ಳಿ ರೇವಣ್ಣ, ಕುಲಗಾಣ ಸ್ವಾಮಿ, ಹೆಗ್ಗವಾಡಿ ನಂದೀಶ್, ಜಯಪ್ರಕಾಶ್, ಲಾಲಿಂಗಸ್ವಾಮಿ, ನಾಗರತ್ನ ಕೆಂಗಾಕಿ, ಶಂಕರ್ ಸೇರಿದಂತೆ ಇತರರು ಭಾಗವಹಿಸಿದ್ದರು.

# ಯುವಜನರ ಆರೋಗ್ಯವೇ ರಾಷ್ಟ್ರದ ಸಂಪತ್ತು

**ಪದ್ಮಶ್ರೀ ಡಾ.ವಿ.ಪ್ರಕಾಶ್**



ಮೈಸೂರು: ಯುವಜನರ ಆರೋಗ್ಯವೇ ರಾಷ್ಟ್ರದ ಸಂಪತ್ತು ಎಂದು ಸಿಎಫ್‌ಟಿಆರ್‌ಐ ವಿಶ್ರಾಂತ ನಿರ್ದೇಶಕ, ಸಿಎಸ್‌ಐಆರ್ ವಿಶಿಷ್ಟ ವಿಜ್ಞಾನಿ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ.ವಿ.ಪ್ರಕಾಶ್ ಹೇಳಿದರು.

ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರವು ಯುವರಾಜ ಕಾಲೇಜಿನ ಅಮೃತ ಮಹೋತ್ಸವ ಸಭಾಂಗಣದಲ್ಲಿ ಆಹಾರ ವಿಜ್ಞಾನ ಮತ್ತು ಪೌಷ್ಟಿಕತೆ ವಿಭಾಗ, ನ್ಯೂಟ್ರಿಷಿಯನ್ ಸೊಸೈಟಿ ಆಫ್ ಇಂಡಿಯಾ ಮೈಸೂರು ಚಾಪ್ಟರ್ ಸಹಯೋಗದಲ್ಲಿ ಮಂಗಳವಾರ ಏರ್ಪಡಿಸಿದ್ದ ಯೋಗ, ಆಯುರ್ವೇದ, ಆಹಾರ ಪೋಷಣಾ ತ್ರಯೋತ್ಸವನ್ನು ಉದ್ಘಾಟಿಸಿ ಮಾತನಾಡಿದರು. ಯೋಗ, ಆಯುರ್ವೇದ, ಪೋಷಣಾ ಈ ಸಮಗ್ರ ಹಾಗೂ ಸಮ್ಮಿಳಿತ ವಿಧಾನವನ್ನು ಅಳವಡಿಸಿಕೊಳ್ಳುವುದು ಮುಂದಿನ ಪೀಳಿಗೆಗೆ ಆಜೀವ ಸೌಖ್ಯ, ಬೌದ್ಧಿಕ ಯಶಸ್ಸು ಮತ್ತು ಸಮತೋಲಿತ ಹಾಗೂ ಆರೋಗ್ಯಕರ ಆಹಾರಕ್ಕಾಗಿ ಬಲವಾದ ಬುನಾದಿಯನ್ನು ಒದಗಿಸುತ್ತದೆ ಎಂದರು.

ವೇಗವಾಗಿ ಓಡುತ್ತಿರುವ ಶೈಕ್ಷಣಿಕ ಒತ್ತಡಗಳ ಇಂದಿನ ಜಗತ್ತಿನಲ್ಲಿ, ಆಧುನಿಕ ವೈಜ್ಞಾನಿಕ ಉಪಕರಣಗಳು ಮತ್ತು ಜ್ಞಾನವನ್ನು ಬಳಸಿಕೊಂಡು ವೈಯಕ್ತಿಕಗೊಳಿಸಿದ ಪೋಷಕಾಂಶಯುಕ್ತ ಆಹಾರ, ಕಾಲದಿಂದ ಪರೀಕ್ಷಿಸಲ್ಪಟ್ಟ ಆಯುರ್ವೇದದ ಪ್ರಜ್ಞೆ ಮತ್ತು ನಿಯಮಿತ ಯೋಗ ಅಭ್ಯಾಸಗಳನ್ನು ಸಂಯೋಜಿಸುವುದು ವಿದ್ಯಾರ್ಥಿಗಳಿಗೆ ಸುಸ್ಥಿರ ಆರೋಗ್ಯ, ತೀಕ್ಷ್ಣ ಗಮನ ಮತ್ತು ಸೂಕ್ತವಾದ ದೈನಂದಿನ ಶಕ್ತಿಯನ್ನು ಪಡೆಯಲು ಅತ್ಯಗತ್ಯವಾದ ನಕ್ಷೆಯನ್ನು ಒದಗಿಸುತ್ತದೆ ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲ ಡಾ.ಕೆ.ಅಜಯ್‌ಕುಮಾರ್, ನಿವೃತ್ತ ಪ್ರಾಧ್ಯಾಪಕಿ ಡಾ.ಜಮುನಾ ಪ್ರಕಾಶ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕಾಲೇಜಿನ ಆಡಳಿತಾಧಿಕಾರಿ ಡಾ.ಕೆ.ಬಿ.ಉಮೇಶ್, ನ್ಯೂಟ್ರೀಷಿಯನ್ ಸೊಸೈಟಿಯ ಸಂಯೋಜಕಿ ಡಾ.ಸಿ.ಅನಿತಾ, ಕಾರ್ಯದರ್ಶಿ ಮಹೇಶ್, ಆಹಾರ ವಿಜ್ಞಾನ ವಿಭಾಗದ ಮುಖ್ಯಸ್ಥ ಪ್ರೊ. ಆರ್. ಶೇಖರನಾಯಕ, ನಟರಾಜ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲ ಡಾ.ರಾಜೇಶ್, ಆಯುರ್ವೇದ ತಜ್ಞ ಡಾ..ಎ.ಎಸ್. ಚಂದ್ರಶೇಖರ್, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ.ಬಿ.ಲಕ್ಷ್ಮೀನಾರಾಯಣ ಶೆಣೈ, ಶ್ರೀ ಛಾಯಾದೇವಿ ಬಿ. ಇಡಿ ಕಾಲೇಜಿನ ಪ್ರಾಂಶುಪಾಲ ಡಾ.ಅಥೋಣಿ ಪೌಲ್ ರಾಜ್ ಇದ್ದರು.

# ಸಹಕಾರದಿಂದ ಸಹಕಾರ ಬ್ಯಾಂಕ್ ಬೆಳವಣಿಗೆ

## ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ಹೇಳಿಕೆ | ವಾರ್ಷಿಕ ಸಭೆ ಹಾಗೂ ಸಾಲ ವಿತರಣೆ

ಗುಂಡ್ಲುಪೇಟೆ: ಟೌನ್ ಕೃಷಿ ಪತ್ತಿನ ಸಹಕಾರ ಸಂಘದ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯನ್ನು ಹಾಗೂ ರೈತರಿಗೆ ಸಾಲದ ಚೆಕ್ ವಿತರಿಸುವ ಕಾರ್ಯಕ್ರಮವನ್ನು ಪಟ್ಟಣದ ಬಸವೇಶ್ವರ ಕಮ್ಯುನಿಟಿ ಹಾಲ್ನಲ್ಲಿ ಸಂಘದ ಅಧ್ಯಕ್ಷ ರಮೇಶ್ ಅವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿತ್ತು.

ಮೈಸೂರು-ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ನ ನಿರ್ದೇಶಕರು ಹಾಗೂ ಶಾಸಕರಾದ ಎಚ್.ಎಂ. ಗಣೇಶ್ ಪ್ರಸಾದ್ ಅವರು ರೈತರಿಗೆ ಚೆಕ್ ವಿತರಿಸುವ ಮೂಲಕ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ರಮೇಶ್, ಉಪಾಧ್ಯಕ್ಷ ಹೊನ್ನಪ್ಪ, ನಿರ್ದೇಶಕರುಗಳಾದ ಮಂಜುನಾಥ್, ಶಿವನಾಗಪ್ಪ, ಚಂದ್ರಶೇಖರ್, ಶಿವಣ್ಣ, ರಘು ಎಸ್, ಮಧು, ರಾಧಾಮಣಿ, ವೆಂಕಟೇಶ್, ಭಾಗ್ಯಮ್ಮ, ಚಿಕ್ಕಣ್ಣ, ಬ್ಯಾಂಕ್ ಪ್ರತಿನಿಧಿ ಕಾರ್ತಿಕ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ವನಿತಾ ಪಿ., ಹಾಗೂ ಸಿಬ್ಬಂದಿಗಳಾದ ಮೋಹನಕುಮಾರಿ ಎಸ್., ಪುಷ್ಪಾವತಿ, ಸಿ.ಎನ್. ಪೂರ್ಣಿಮಾ, ರವಿ, ಸುನೀಲ್ ಮತ್ತಿತರರು ಉಪಸ್ಥಿತರಿದ್ದರು.



### ಸಾಲ ಮರುಪಾವತಿ, ಕಟ್ಟಡ ನಿರ್ಮಾಣಕ್ಕೆ ಅನುದಾನ

ಕಾರ್ಯಕ್ರಮದಲ್ಲಿ ಮಾತನಾಡಿದ ಶಾಸಕ ಗಣೇಶ್ ಪ್ರಸಾದ್, ತಾವು ಮೈಸೂರು-ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿರ್ದೇಶಕನಾಗಿ ಒಂದೂವರೆ ವರ್ಷವಾಗಿದೆ. ಸಹಕಾರ ಬ್ಯಾಂಕ್ನಿಂದ ಪಡೆದ ಸಾಲವನ್ನು ರೈತರು ಸಮರ್ಪಕವಾಗಿ ಮರುಪಾವತಿ ಮಾಡದಿದ್ದರೆ ಸಮಸ್ಯೆಯಾಗುತ್ತದೆ. ಬ್ಯಾಂಕ್ನಲ್ಲಿ ವಹಿವಾಟು ಆಗದಿದ್ದರೆ ಕೇಂದ್ರ ಬ್ಯಾಂಕ್ ಸಾಲ ನೀಡುವುದಿಲ್ಲ ಎಂದು ಎಚ್ಚರಿಸಿದರು. ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆ ಸಹಕಾರ ಸಂಘಗಳ ಅಭಿವೃದ್ಧಿಗೆ ನೆರವಾಗುವಂತೆ ಮನವಿ ಮಾಡಲಾಗಿತ್ತು. ಇವಾಗಿನ ಸಹಕಾರ ಸಚಿವರಾದ ಲಕ್ಷ್ಮಣ್ ಸವದಿ ಅವರು ಸಹಕಾರ ಕ್ಷೇತ್ರದ ಬಗ್ಗೆ ಅಪಾರ ಜ್ಞಾನ ಹೊಂದಿದ್ದು, ಹೆಚ್ಚಿನ ರೀತಿಯಲ್ಲಿ ಸಹಕಾರ ನೀಡುತ್ತಾರೆ ಎಂದು ತಾವು ಭಾವಿಸಿರುವುದಾಗಿ ಹೇಳಿದರು. ತಾಲೂಕಿನ ಕೆಲವು ಸೊಸೈಟಿಗಳಿಗೆ ಸ್ವಂತ ಕಟ್ಟಡವಿಲ್ಲ, ಇನ್ನು ಕೆಲವು ಸೊಸೈಟಿಗಳಿಗೆ ಜಾಗವೇ ಇಲ್ಲ. ಹಾಗಾಗಿ ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ ಎರಡು ಕೋಟಿ ರೂ. ಹಣವನ್ನು ಹತ್ತು-ಹನ್ನೆರಡು ಸೊಸೈಟಿಗಳಿಗೆ ಬಳಸಿಕೊಂಡು, ಮೊದಲ ಹಂತದಲ್ಲಿ ತಲಾ ಇಪ್ಪತ್ತು ಲಕ್ಷ ರೂ. ವೆಚ್ಚದಲ್ಲಿ ಕಟ್ಟಡ ನಿರ್ಮಾಣ ಮಾಡಬೇಕು ಎಂದು ನಿರ್ಧರಿಸಿದ್ದೇನೆ ಎಂದು ತಿಳಿಸಿದರು.

### ದಿ. ಮಹದೇವಪ್ರಸಾದ್ ಅವರ ಕೊಡುಗೆ ಸ್ಮರಣೆ

ಬಾಡಿಗೆ ಕಟ್ಟುವುದರಲ್ಲಿಯೇ ಸೊಸೈಟಿಗೆ ಬರುವ ಲಾಭವೆಲ್ಲಾ ಪೋಲಾಗುತ್ತಿದೆ. ಹಿಂದೆ ದಿವಂಗತ ಮಹದೇವಪ್ರಸಾದ್ ಅವರು ಸಹಕಾರ ಸಚಿವರಾಗಿದ್ದಾಗ ಸಾಕಷ್ಟು ಬದಲಾವಣೆ ತಂದಿದ್ದರು. ಅವರು ಇದ್ದ ಸಂದರ್ಭದಲ್ಲಿ ಸಹಕಾರ ಇಲಾಖೆಯಿಂದ ಕಟ್ಟಡ ನಿರ್ಮಾಣಕ್ಕೆ ಅನುದಾನ ನೀಡಲಾಗುತ್ತಿತ್ತು. ಆದರೆ ಇವಾಗ ಆ ಅನುದಾನ ಕೊಡುತ್ತಿಲ್ಲವಾದ್ದರಿಂದ ಶಾಸಕರ ಅನುದಾನದಲ್ಲಿಯೇ ಈ ಕೆಲಸ ಮಾಡುತ್ತೇನೆ. ರೈತರು ಬ್ಯಾಂಕ್ ಸೌಲಭ್ಯವನ್ನು ಸದುಪಯೋಗಪಡಿಸಿಕೊಂಡು ಸಹಕಾರ ಬ್ಯಾಂಕ್ಗಳ ಬೆಳವಣಿಗೆಗೆ ಸಹಕರಿಸುವಂತೆ ಅವರು ಸಲಹೆ ನೀಡಿದರು.

### ಟೌನ್ ಸೊಸೈಟಿಯ ಆರ್ಥಿಕ ಸ್ಥಿತಿ, ಆಸ್ತಿ ವಿವರ

ನಂತರ ಮಾತನಾಡಿದ ಸಂಘದ ಅಧ್ಯಕ್ಷ ರಮೇಶ್, ನಮ್ಮ ಸಂಘದಲ್ಲಿ 136 ಜನರು ಸಾಲಕ್ಕೆ ಅರ್ಜಿ ಹಾಕಿದ್ದರು. ಅದರಲ್ಲಿ 96 ರೈತರಿಗೆ ಸಾಲ ನೀಡಲಾಗುತ್ತಿದ್ದು, ಉಳಿದ ರೈತರು ಸರಿಯಾದ ದಾಖಲಾತಿ ನೀಡದ ಕಾರಣ ಅವರ ಅರ್ಜಿಗಳು ತಿರಸ್ಕೃತಗೊಂಡಿವೆ. ಪ್ರಸ್ತುತ ಒಟ್ಟು 1 ಕೋಟಿ 16 ಲಕ್ಷ ರೂ. ಸಾಲ ನೀಡಲಾಗುತ್ತಿದ್ದು, ರೈತರು ಸರಿಯಾದ ದಾಖಲಾತಿ ಒದಗಿಸಿದರೆ ಸಾಲ ನೀಡುವಷ್ಟು ಆರ್ಥಿಕ ಶಕ್ತಿ ನಮ್ಮ ಟೌನ್ ಸೊಸೈಟಿಗೆ ಇದೆ. ನಮ್ಮ ಸೊಸೈಟಿಯು ಐದು ಕೋಟಿಗೂ ಹೆಚ್ಚು ಹಣವನ್ನು ಎಂಡಿಸಿಸಿ ಬ್ಯಾಂಕ್ನಲ್ಲಿ ಎಫ್.ಡಿ ಇಟ್ಟಿದೆ ಹಾಗೂ ಸುಮಾರು ಐದು ಕೋಟಿಯಷ್ಟು ಹಣವನ್ನು ಚಿನ್ನದ ಮೇಲೆ ಸಾಲವಾಗಿ ನೀಡಲಾಗಿದೆ. ವೀರನಪುರ ಹಾಗೂ ಹೊಸೂರಿನಲ್ಲಿ ಸಂಘದ ಸ್ವಂತ ಆಸ್ತಿ ಇದೆ. ಟೌನ್ನಲ್ಲಿ ಸಂಘದ ಕಟ್ಟಡ ಸ್ಥಾಪನೆ ಬಗ್ಗೆ ರೂಪುರೇಷೆಗಳಿದ್ದು, ಜಾಗ ಸಿಕ್ಕರೆ ಶಾಸಕರ ಸಹಕಾರದಿಂದ ಮುಂದಿನ ಯೋಜನೆಗಳನ್ನು ನಡೆಸಲಾಗುವುದು. ಒಟ್ಟಾರೆಯಾಗಿ ನಮ್ಮ ಟೌನ್ ಸಂಘವು ಅತ್ಯುತ್ತಮ ಸ್ಥಿತಿಯಲ್ಲಿದೆ ಎಂದು ಮಾಹಿತಿ ನೀಡಿದರು.

# ಬದಲಿ ಕಾರ್ಮಿಕರಿಗೆ ಅನ್ಯಾಯ: ಖಂಡಿಸಿ ಪ್ರತಿಭಟನೆ

ಮೈಸೂರು: 2ನೇ ಪಾಳಿಯಲ್ಲಿ ಬದಲಿ ಕಾರ್ಮಿಕರಿಗೆ ಕೆಲಸ ನಿರಾಕರಣ ಮಾಡಿರುವುದು ಸೇರಿದಂತೆ ತಮ್ಮ ಹಲವು ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಜೆ.ಕೆ.ಟೈರ್ಸ್ ಲಿಮಿಟೆಡ್(ವಿಕ್ರಾಂತ್)ನ ಬದಲಿ ಮತ್ತು ದಿನಗೂಲಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ನೌಕರರು ಕಾರ್ಖಾನೆ ಎದುರು ಪ್ರತಿಭಟಿಸಿದರು.

ನಗರದ ಕೆ.ಆರ್.ಎಸ್ ಮುಖ್ಯರಸ್ತೆಯಲ್ಲಿ ಪ್ರತಿಭಟಿಸಿದರು. ಈ ವೇಳೆ ಮಾತನಾಡಿದ ಕಾರ್ಮಿಕ ಹೋರಾಟಗಾರರಾದ ಪ್ರಮೋದ್ ಚಿಕ್ಕಮಣ್ಣೂರ್ ಮಾತನಾಡಿ, ಕಾರ್ಮಿಕರು ಕಾರ್ಖಾನೆಯೂ ಸ್ಥಾಯಿ ಆದೇಶ 3ಎ ಪ್ರಕಾರ ಬದಲಿ ಕಾರ್ಮಿಕರನ್ನು ಕಖಾಯಂ ನೌಕರರು ಮತ್ತು ಪರೀಕ್ಷಾರ್ತಿ ಕಾರ್ಮಿಕರು ರಜಹಾಕಿದ ಸ್ಥಾನಗಳಿಗೆ ಬದಲಿ ಕಾರ್ಮಿಕರನ್ನು ನೇಮ ಮಾಡಿಕೊಳ್ಳಲಾಗಿದೆ. ಆದರೆ, ಬದಲಿ ಕಾರ್ಮಿಕರು 20 ವರ್ಷಗಳಿಂದಲೂ ಖಾಲಿ ಇರುವ ಜಾಗದಲ್ಲೇ ಕಾರ್ಯನಿರ್ವಹಿಸುತ್ತಿದ್ದಾರೆ. ಸೆ.7ರಂದು 2ನೇ ಪಾಳಿಯಲ್ಲಿ ಬದಲಿ ಕಾರ್ಮಿಕರ ಕಾರ್ಯದ ಜಾಗಕ್ಕೆ ಮಹಿಳೆಯರು ಹಾಗೂ ಹೊರರಾಜ್ಯದ ಕಾರ್ಮಿಕರಿಗೆ ಅವಕಾಶ ನೀಡಿ ಬದಲಿಕಾರ್ಮಿಕರನ್ನು ಹೊರಕ್ಕೆ ಕಳುಹಿಸಿರುವುದು ಸ್ಪಷ್ಟ ಕಾನೂನು ಉಲ್ಲಂಘನೆ ಆಗಿದೆ ಎಂದರು.

ಮಹಿಳಾ ಹಾಗೂ ಹೊರಗುತ್ತಿಗೆ ನೌಕರರನ್ನು ಮಿಷನ್ ಯಂತ್ರಗಳ ಮೇಲೆ ಕೆಲಸ ನಿರ್ವಹಿಸಲು ಅವಕಾಶ ಕಲ್ಪಿಸಿರುವುದು. ಬದಲಿ ಕಾರ್ಮಿಕರಿಗೆ ಮಾಡಿರುವ ಅನ್ಯಾಯವಾಗಿದೆ. ಈ ಹಿನ್ನೆಲೆಯಲ್ಲಿ ಬುಧವಾರ ಕಾರ್ಮಿಕ ಆಯುಕ್ತರು, ಗುರುವಾರ ಕಾರ್ಮಿಕ ಇಲಾಖೆ ಪ್ರಾದೇಶಿಕ ಆಯುಕ್ತರ ಸಮ್ಮುಖದ ಸಭೆಯಲ್ಲೂ ತಮಗೆ ನ್ಯಾಯ ಸಿಗದಿದ್ದರೆ ಕುಟುಂಬದವರ ಸಮೇತ ಕಾರ್ಮಿಕರು ಉಗ್ರ ಹೋರಾಟ ರೂಪಿಸಲಾಗುವುದು ಎಂದು ಹೇಳಿದರು. ಪ್ರತಿಭಟನೆಯಲ್ಲಿ ಕಾರ್ಮಿಕ ಸಂಘದ ಅಧ್ಯಕ್ಷ ಎನ್.ಚಂದ್ರ, ಪ್ರಧಾನ ಕಾರ್ಯದರ್ಶಿ ವಿಜಯಕುಮಾರ್, ಖಜಾಂಚಿ ಗಿರೀಶ್ ಇನ್ನಿತರರು ಉಪಸ್ಥಿತರಿದ್ದರು.



# ಕಾಡಾನೆ ದಾಳಿಗೆ ಕಬ್ಬಿನ ಬೆಳೆ ನಾಶ

ಗುಂಡ್ಲುಪೇಟೆ: ತಾಲ್ಲೂಕಿನ ಚನ್ನವಡಯ್ಯನಪುರ ಗ್ರಾಮದ ರೈತ ಮಹದೇವಪ್ಪ ಅವರ ಜಮೀನಿನಲ್ಲಿ ಬೆಳೆದಿದ್ದ ಕಬ್ಬಿನ ಬೆಳೆಗೆ ಕಾಡಾನೆಗಳು ದಾಳಿ ನಡೆಸಿ ಸಂಪೂರ್ಣ ಬೆಳೆ ನಾಶಪಡಿಸಿರುವ ಘಟನೆ ಸೋಮವಾರ ರಾತ್ರಿ ನಡೆದಿದೆ.

ಬರದ ಪರಿಸ್ಥಿತಿಯ ನಡುವೆಯೂ ಸಾಲ ಮಾಡಿ ಹಾಗೂ ಲಭ್ಯವಿದ್ದ ಅಲ್ಪ ಪ್ರಮಾಣದ ನೀರನ್ನು ಬಳಸಿಕೊಂಡು ಮಹದೇವಪ್ಪ ಅವರು ಕಬ್ಬು ಬೆಳೆದಿದ್ದರು. ಆದರೆ ಕಾಡಾನೆಗಳ ಹಿಂಡು ಜಮೀನಿಗೆ ನುಗ್ಗಿ ಕಬ್ಬಿನ ಬೆಳೆಯನ್ನು ತುಳಿದು, ತಿಂದು ನಾಶಪಡಿಸಿದ್ದು, ರೈತನಿಗೆ ಅಪಾರ ಪ್ರಮಾಣದ ನಷ್ಟ ಉಂಟಾಗಿದೆ. ರೈತ ಮಹದೇವಪ್ಪ ಮಾತನಾಡಿ, "ಬರದ ನಡುವೆಯೂ ಅಲ್ಪಸ್ವಲ್ಪ ನೀರು ಲಭ್ಯವಾಗುತ್ತಿದ್ದ ಹಿನ್ನೆಲೆಯಲ್ಲಿ ಸಾಲ ಮಾಡಿ ಕಬ್ಬು ಬೆಳೆದಿದ್ದೆ. ಉತ್ತಮ ಫಸಲು ನಿರೀಕ್ಷೆಯಲ್ಲಿದ್ದಾಗ ಕಾಡಾನೆಗಳು ದಾಳಿ ನಡೆಸಿ ಸಂಪೂರ್ಣ ಬೆಳೆ ನಾಶಪಡಿಸಿವೆ. ಇದರಿಂದ ಸಾಕಷ್ಟು ನಷ್ಟವಾಗಿದೆ. ಅರಣ್ಯ ಇಲಾಖೆ ಸ್ಥಳಕ್ಕೆ ಭೇಟಿ ನೀಡಿ ಬೆಳೆ ಹಾನಿ ಪರಿಶೀಲಿಸಿ ಸೂಕ್ತ ಪರಿಹಾರ ನೀಡಬೇಕು" ಎಂದು ಒತ್ತಾಯಿಸಿದರು. ಕಾಡಾನೆಗಳ ಹಾವಳಿಯಿಂದ ರೈತರು ಸಂಕಷ್ಟಕ್ಕೀಡಾಗಿದ್ದು, ಅರಣ್ಯ ಇಲಾಖೆ ಶಾಶ್ವತ ಪರಿಹಾರ ಕ್ರಮ ಕೈಗೊಳ್ಳಬೇಕು ಎಂದು ರೈತರು ಆಗ್ರಹಿಸಿದ್ದಾರೆ.




## ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಕಾರ್ಯಪಾಲಕ ಅಭಿಯಂತರವರ ಕಛೇರಿ, ವಿದ್ಯುತ್ ವಿಭಾಗ, ವಾವಿನೀಸ ಆವರಣ, ಕೆ.ಆರ್.ಎಸ್ ಮುಖ್ಯ ರಸ್ತೆ, ಯಾದವಗಿರಿ, ಮೈಸೂರು-570020

ಟೆಂಡರ್ ಪ್ರಕಟಣೆ ಸಂಖ್ಯೆ:ಮೈನಪಾ/ಕಾಅ(ವಿ)/ಟಿಎನ್-13/101/2026-27 ದಿನಾಂಕ: 07.09.2026

**ಟೆಂಡರ್ ಪ್ರಕಟಣೆ ಸಂಖ್ಯೆ-13**

**ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ**

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಅನುದಾನಗಳಲ್ಲಿ ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

| ಕ್ರ ಸಂ | ವಿವರ | ಕಾಮಗಾರಿಗಳ ವಿವರ | ಟೆಂಡರ್ ಮೊತ್ತ (ರೂ. ಲಕ್ಷಗಳಲ್ಲಿ) | ಕೆಪಿಪಿ ಪೋರ್ಟಲ್ ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ | ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ | ಟೆಂಡರ್/ ಆರ್ಥಿಕ ಬಿಡ್ ತೆರೆಯುವ ದಿನಾಂಕ |
|---|---|---|---|---|---|---|
| 1 | Tender Works (KW-1) | DMA/2026-27/OW/WORK_INDENT 62045 | 3.15 | 07.09.2026 | 22.09.2026 | 23.09.2026 |
| 2 | | DMA/2026-27/EL/WORK_INDENT62049 | 8.25 | | | |
| 3 | Re-Tender Works (KW-1) | DMA/2024-25/EL/WORK_INDENT34258 | 15.00 | | 15.09.2026 | 16.09.2026 |

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ ಬದಲಾವಣೆ / ತಿದ್ದುಪಡಿಗಳಿದ್ದಲ್ಲಿ (https://kppp.karnataka.gov.in) ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/- ಕಾರ್ಯಪಾಲಕ ಅಭಿಯಂತರರು (ವಿ)
ಮೈಸೂರು ಮಹಾನಗರ ಪಾಲಿಕೆ, ಮೈಸೂರು.

ವಾಸಾಸಂಇ/ಮೈಸೂರು/685/ಶಿರಡಿ ಸಾಯಿ/2026-27


**ನ್ಯಾ.ನಾಗರಾಜ್ ಸಿದ್ದಪ್ಪ ಅಂಕಸದೊಡ್ಡಿ**

# ಪರಿಸರ ಸಂರಕ್ಷಣೆ ನಮ್ಮ-ನಮ್ಮೆಲ್ಲರ ಕರ್ತವ್ಯ

ಮೈಸೂರು: ನಮ್ಮ ಸುತ್ತಮುತ್ತಲಿರುವ ಅರಣ್ಯ, ನೈಸರ್ಗಿಕ ಸಂಪತ್ತು, ವನ್ಯಜೀವಿ ಒಟ್ಟಾರೆ ಪರಿಸರವನ್ನು ಕಾಪಾಡುವುದು ದೇಶದ ಪ್ರತಿಯೊಬ್ಬ ನಾಗರೀಕನ ಕರ್ತವ್ಯ ಎಂಬ ಕಾನೂನು ಅರಿವು ಎಲ್ಲರಿಗೂ ತಿಳಿಯಬೇಕಿದೆ ಎಂದು ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಹಾಗೂ ಹಿರಿಯ ನ್ಯಾಯಾಧೀಶ ನಾಗರಾಜ್ ಸಿದ್ದಪ್ಪ ಅಂಕಸದೊಡ್ಡಿ ಹೇಳಿದರು.

ಮೈಸೂರು ಗ್ರಾಹಕರ ಪರಿಷತ್ತು ಹಾಗೂ ಹಾರ್ಟ್‌ಫುಲ್ ನೆಸ್ ಸಾಮಾಜಿಕ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ನಗರದ ಶ್ರೀ ಚಾಮರಾಜೇಂದ್ರ ಮೃಗಾಲಯದಲ್ಲಿ ಆಯೋಜಿಸಿದ್ದ ಕಾಡು ಹಬ್ಬ ಕಾರ್ಯಕ್ರಮವನ್ನು ಗಿಡ ನೆಡುವ ಮೂಲಕ ಉದ್ಘಾಟಿಸಿ ಮಾತನಾಡಿದರು. ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಪರಿಸರ, ವನ್ಯಸಂಪತ್ತು, ಜಲ ಸಂಪತ್ತುಗಳಿಗೆ ಗೌರವಿಸಬೇಕು. ಅರಣ್ಯ ಸಂಪತ್ತು, ವನ್ಯಜೀವಿ, ಪ್ರಾಣಿ ಸಂಪತ್ತು, ಕಾಡು ಸಂಪತ್ತು ಉಳಿಸುವುದು. ಅವುಗಳು ನಾಶ ಆಗಲು ಬಿಡದ ಹಾಗೇ ಉಳಿಸಲು ಏನೆಲ್ಲಾ ಕಾರ್ಯಕ್ರಮ ಇದೆ ಅದನ್ನು ಜಾರಿಗೊಳಿಸಲು ಪ್ರಾಧಿಕಾರದಿಂದ ಪ್ರಯತ್ನಿಸುತ್ತಿದ್ದೇವೆ. ಇದಕ್ಕೆ ಎಲ್ಲರ ಸಹಕಾರ ಮುಖ್ಯ. ದೇಶದ ಸಂವಿಧಾನದ 42ನೇ ತಿದ್ದುಪಡಿ 48ಎ ನಿರ್ದೇಶಕ ತತ್ವದಡಿಯಲ್ಲಿ ರಾಜ್ಯದ ಪ್ರತಿಯೊಬ್ಬರು ಪರಿಸರ, ವನ್ಯಜೀವಿ, ಸಂಪತ್ತನ್ನು ರಕ್ಷಿಸುವ ಕೆಲಸವನ್ನು ಮಾಡಬೇಕೆಂದು ಹೇಳುತ್ತದೆ. ಜತೆಗೆ ಆರ್ಟಿಕಲ್ 51ಎಜಿ ಅಡಿಯಲ್ಲಿ ಅರಣ್ಯ, ನೈಸರ್ಗಿಕ ಪ್ರತಿಯೊಬ್ಬ ನಾಯಕನ ಕರ್ತವ್ಯ ಎಂದು ಹೇಳಿದೆ. ಅದನ್ನು ಪಾಲಿಸುವ ಕೆಲಸ ಪ್ರತಿಯೊಬ್ಬರು ಮಾಡಬೇಕಿದೆ. ಕಾಡು ಹಬ್ಬ ಎಂಬ ಪರಿಸರ ಸಂರಕ್ಷಣೆ ಕಾರ್ಯಕ್ರಮ ನಿಜಕ್ಕೂ ಶ್ಲಾಘನೀಯ ಎಂದರು.



ಹಾರ್ಟ್‌ಫುಲ್ ನೆಸ್ ರೀಜನಲ್ ಫೆಸಿಲೆಟಟರ್ ಮಧುಸೂದನ್ ಮಾತನಾಡಿ, ಹಾರ್ಟ್ ಫುಲ್ ಲೆಸ್ ಕೇಂದ್ರ ವಿಶ್ವದ 160 ದೇಶದಲ್ಲಿ 22ಸಾವಿರ ಕೇಂದ್ರ ರಾಜ್ಯದಲ್ಲಿ 42ಲಕ್ಷ ಮಂದಿ ಇದರ ಪ್ರಯೋಜನ ಪಡೆದುಕೊಂಡಿದ್ದಾರೆ. ಸೇವೆಯೊಂದಿಗೆ ಪರಿಸರ ಉಳಿಸುವ ಒಂದಂಶ ಕಾರ್ಯಕ್ರಮ ಮಾಡಿದ್ದೇವೆ. ರಾಜ್ಯದಲ್ಲಿ ಹೈ ಕೋರ್ಟ್ 6ಕೋಟಿ ಗಿಡ ಮರ ನೆಡಲು ನಮ್ಮ ಸಹಭಾಗಿತ್ವ ಪಡೆದುಕೊಂಡಿರುವುದು ಹೆಮ್ಮೆಯ ಸಂಗತಿಯಾಗಿದೆ. ರಾಜ್ಯದಾದ್ಯಂತ 7.5ಲಕ್ಷ ಭೂಮಿ ನೀಡಿ 4 ವರ್ಷದಲ್ಲಿ ಸದರಿ ಭೂಮಿಯಲ್ಲಿ ಪ್ಲಾನೆಟ್ ನಿರ್ಮಿಸುವ ಜವಾಬ್ದಾರಿ ನೀಡಿದ್ದಾರೆ. ಬೇರೆ ಬೇರೆ ಗಡಿ ಗಡಿ ಜಿಲ್ಲೆಯಲ್ಲಿ ನಿಮ್ಮ ಹಳ್ಳಿ ಭಾಗದಲ್ಲಿ ಪರಿಸರ ಉಳಿಸಲು ಹಾಗೂ ಬಯೋಗ್ಯಾಸ್ ನಿರ್ಮಾಣಕ್ಕೆ ಅಗತ್ಯ ಸಹಕಾರ ನೀಡಲಾಗುವುದು. ಯಾವುದೇ ಕೆರೆಗಳಿಗೆ ಸಿವೇಜ್ ನೀರು ಹರಿಯುತ್ತಿದ್ದರೆ ನಮಗೆ ತಿಳಿಸಿ ನಾವೇ ಅದನ್ನು ಸರಿಪಡಿಸಲು ಉಚಿತವಾಗಿ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇವೆ. ಆರ್ಗಾನಿಕ್ ಬಯೋ ಕಲ್ಚರ್ ಕಲಿಸಿಕೊಡುತ್ತೇವೆ. ಬಯೋ ಕಲ್ಚರ್ ಗೆ ಸಂಬಂಧಿಸಿದ ಅಗತ್ಯ ಉಪಕರಣಗಳನ್ನು ನೀಡಲಾಗುವುದು ಎಂದರು. ಶ್ರೀ ಚಾಮರಾಜೇಂದ್ರ ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕಿ ಪಿ.ಅನುಷ, ಮೈಸೂರು ಗ್ರಾಹಕರ ಪರಿಷತ್ತಿನ ಸಂಸ್ಥಾಪಕ ಭಾಮಿ ವಿ ಶೆಣೈ ಮಾತನಾಡಿದರು. ಶ್ರೀ ಚಾಮರಾಜೇಂದ್ರ ಮೃಗಾಲಯದ ಉಪನಿರ್ದೇಶಕ ಲಕ್ಷ್ಮಿಕಾಂತ, ಮೈಸೂರು ಗ್ರಾಹಕರ ಪರಿಷತ್ತಿನ ಸಂಸ್ಥಾಪಕ ಡಿ.ವಿ.ದಯಾನಂದ ಸಾಗರ್ ಇನ್ನಿತರರು ಇದ್ದರು.

# ಆರ್.ಟಿ.ಒ ಕಚೇರಿ ಆವರಣದಲ್ಲಿ 2.5 ಕೋಟಿ ರೂ ವೆಚ್ಚದಲ್ಲಿ ಅಭಿವೃದ್ಧಿ

ರಾಮನಗರ: ನಗರದಲ್ಲಿರುವ ಆರ್.ಟಿ.ಒ ಕಚೇರಿಯ ವಿಶಾಲವಾದ ಆವರಣಕ್ಕೆ ಕಾಂಪೌಂಡ್ ನಿರ್ಮಾಣ, ಉದ್ಯಾನವನ ನಿರ್ಮಾಣ ಸೇರಿದಂತೆ ಮೂಲ ಸೌಕರ್ಯಗಳ ವೃದ್ಧಿಗೆ ಸರ್ಕಾರ 2.5 ಕೋಟಿ ರೂ ಮಂಜೂರು ಮಾಡಿದೆ ಎಂದು ಶಾಸಕ ಇಕ್ಬಾಲ್ ಹುಸೇನ್ ತಿಳಿಸಿದರು.

ನಗರದ ಆರ್.ಟಿ.ಒ ಕಚೇರಿ ಆವರಣದಲ್ಲಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು. ಮಂಜೂರಾಗಿರುವ ಮೊತ್ತದ ಪೈಕಿ ಈಗಾಗಲೆ 2 ಕೋಟಿ ರೂ ಕಾಮಗಾರಿಗಾಗಿ ಬಿಡುಗಡೆ ಮಾಡಲಾಗಿದೆ. ಕಟ್ಟಡ ನಿರ್ಮಾಣವಾಗಿದೆ, ಉದ್ಯಾನವನ ಮತ್ತು ಕಾಂಪೌಂಡ್ ನಿರ್ಮಾಣವಾಗಬೇಕಾಗಿದೆ. ಇದರೊಟ್ಟಿಗೆ ಕಚೇರಿಗೆ ಆಗಮಿಸುವ ನಾಗರೀಕರು ನೆರಳಿನಡಿಯಲ್ಲಿ ಆಸನ ವ್ಯವಸ್ಥೆ ಕಲ್ಪಿಸುವಂತೆ ಸೂಚಿಸಲಾಗಿದೆ ಎಂದರು. ಮಹಿಳೆಯರು ಮತ್ತು ಪುರುಷರಿಗೆ ಪ್ರತ್ಯೇಕ ಶೌಚಾಲಯಗಳನ್ನು ನಿರ್ಮಿಸಲಾಗುವುದು ಎಂದರು. ಸಾರಿಗೆ ಇಲಾಖೆ (ಆರ್.ಟಿ.ಒ) ಸಾರ್ವಜನಿಕರು ಭೇಟಿ ಕೊಡುವ ಇಲಾಖೆಯಾಗಿದೆ. ಇಲ್ಲಿ ಮೂಲಸೌಕರ್ಯಗಳನ್ನು ವೃದ್ಧಿಸುವುದು ಅವಶ್ಯಕವಾಗಿತ್ತು. ಇದರ ಅವಶ್ಯಕತೆ ಅರಿತು ಹಣ ಮಂಜೂರು ಮಾಡಿಸಿರುವುದಾಗಿ ತಿಳಿಸಿದರು.



### ಮಧ್ಯವರ್ತಿಗಳಿಗೆ ಅವಕಾಶ ಬೇಡ

ಸಾರಿಗೆ ಕಚೇರಿಯಲ್ಲಿ ಮಧ್ಯವರ್ತಿಗಳ ಹಾವಳಿ ಬಗ್ಗೆ ತನಗೆ ದೂರಯಗಳು ಕೇಳಿ ಬಂದಿವೆ. ಈ ವಿಚಾರವನ್ನು ತಾವು ಆರ್.ಟಿ.ಒ ಅಧಿಕಾರಿಗಳ ಗಮನಕ್ಕೂ ತಂದಿದ್ದೇನೆ. ಅಧಿಕಾರಿಗಳು ಮಧ್ಯವರ್ತಿಗಳಿಗೆ ಅವಕಾಶ ಮಾಡಿಕೊಡಬಾರದು. ಇಲಾಖೆಯ ಸೇವೆಯನ್ನು ಅಧಿಕಾರಿಗಳು ಮತ್ತು ಸಿಬ್ಬಂದಿಗಳು ನೇರವಾಗಿ ನಾಗರೀಕರಿಗೆ ತಲುಪಿಸಬೇಕು ಎಂದರು. ದಂಧೆಗೆ ಅವಕಾಶ ಕೊಡಬೇಡಿ ಎಂದು ಸೂಚಿಸಿರುವುದಾಗಿ ತಿಳಿಸಿದರು.

### ಹಳೆ ವಾಹನಗಳ ತೆರವಿಗೆ ಸೂಚನೆ

ವಿವಿಧ ಪ್ರಕರಣಗಳಲ್ಲಿ ಅಧಿಕಾರಿಗಳು ವಾಹನಗಳನ್ನು ಇಲಾಖೆಯ ವಶಕ್ಕೆ ಪಡೆದುಕೊಂಡಿದ್ದಾರೆ. ಕಾರು, ಬಸ್ಸು, ಬೈಕ್‌ಗಳು ಆವರಣದಲ್ಲಿವೆ. ಇವುಗಳನ್ನು ಕಾನೂನಿಡಿಯಲ್ಲಿ ವಿಲೇವಾರಿ ಮಾಡಲು ಅಗತ್ಯ ಕ್ರಮವಹಿಸಬೇಕು ಎಂದು ಶಾಸಕರು ಅಧಿಕಾರಿಗಳಿಗೆ ಸೂಚನೆ ಕೊಟ್ಟರು. ಹೀಗೆ ವಾಹನಗಳನ್ನು ಸೀಜ್ ಮಾಡಿದರೆ ಅವುಗಳನ್ನು ಇಡಲು ಸುಮಾರು 6 ಎಕರೆ ಭೂಮಿಯನ್ನು ಗುರುತಿಸುವಂತೆ ತಾವು ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಿರುವುದಾಗಿ ಶಾಸಕ ಇಕ್ಬಾಲ್ ಹುಸೇನ್ ತಿಳಿಸಿದರು.

### ರಸ್ತೆಗಳ ಅಭಿವೃದ್ಧಿಗೆ ಆದ್ಯತೆ

ಜಿಲ್ಲಾ ಕೇಂದ್ರ ರಾಮನಗರದಲ್ಲಿನ ಹಲವಾರು ರಸ್ತೆಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. ಕೆಂಪೇಗೌಡ ಸರ್ಕಲ್‌ನಿಂದ ಐಜೂರು ಸರ್ಕಲ್‌ವರೆಗೂ ಫುಟ್‌ಪಾತ್ ವ್ಯವಸ್ಥೆಯಾಗುತ್ತಿದೆ. ರೈಲ್ವೆ ಸ್ಟೇಷನ್ ರಸ್ತೆ ಅಭಿವೃದ್ಧಿ ಪಡಿಸಲಾಗುತ್ತಿದೆ. ಕನಕಪುರ ಸರ್ಕಲ್ ಮತ್ತು ಕೆಂಪೇಗೌಡ ಸರ್ಕಲ್‌ಗಳ ಸುಂದರೀಕರಣಕ್ಕೆ ಮುಂದಾಗಿದ್ದೇವೆ. ಐಜೂರು ವೃತ್ತವನ್ನು ಅಭಿವೃದ್ಧಿ ಪಡಿಸುವ ಅಗತ್ಯವಿದೆ. ವೃತ್ತದ ಮಧ್ಯೆ ಅಶೋಕ ಸ್ತಂಭವನ್ನು ಸ್ಥಾಪಿಸುವ ಉದ್ದೇಶವದೆ. ಇವೆಲ್ಲ ಕಾಮಗಾರಿಗಳಿಗೆ ಸುಮಾರು 10 ಕೋಟಿ ರೂ ಅಗತ್ಯವಿದೆ. ಮುಂದಿನ ದಿನಗಳಲ್ಲಿ ಎಲ್ಲವೂ ಸಾಧ್ಯವಾಗಲಿದೆ ಎಂದರು. ಮಾಜಿ ಶಾಸಕ ಕೆ. ರಾಜು, ಪ್ರಾಧಿಕಾರ ಅಧ್ಯಕ್ಷ ಚೇತನ್‌ಕುಮಾರ್, ಪ್ರಾದೇಶಿಕ ಸಾರಿಗೆ ಅದಿಕಾರಿ ಸಿ.ಎಂ.ಕೃಷ್ಣೇಗೌಡ, ಮೋಟಾರು ವಾಹನ ನಿರೀಕ್ಷಕರುಗಳಾದ ಕುಮಾರಸ್ವಾಮಿ, ರಘುನಂದನ್, ವಿದ್ಯಾ, ಅಧೀಕ್ಷಕರಾದ ಯಮರಾಜಪವರ್, ಸಂತೋಷ್ ಮುಖಂಡರುಗಳಾದ ಗುರುಪ್ರಸಾದ್, ಬೈರೇಗೌಡ, ಅಜ್ಮತ್, ನಿಜಾಂ, ಅಣ್ಣು, ರಾಮಣ್ಣ, ಧನರಾಜ್, ರಮೇಶ್, ಗುರುವೇಗೌಡ, ವಾಸು, ಅತಾವುಲ್ಲಾ, ಐಹಿಷಾಭಾನು, ಜಯಲಕ್ಷ್ಮಮ್ಮ ಇದ್ದರು.

## ಬಸ್ ನಿಲ್ದಾಣದಲ್ಲಿ ಸಧ್ಯಕ್ಕೆ ವಾಹನ ಪಾರ್ಕಿಂಗ್ ಇಲ್ಲ!

ನಗರದ ಐಜೂರು ವೃತ್ತದಲ್ಲಿರುವ ಕೆ.ರಾ.ರ.ಸಾ.ಸಂಸ್ಥೆಯ ಬಸ್ ನಿಲ್ದಾಣದಲ್ಲಿ ಪಾರ್ಕಿಂಗ್ ವ್ಯವಸ್ಥೆಗೆ ಟೆಂಡರ್ ಪ್ರಕ್ರಿಯೆ ಯಾವಾಗ ಎಂದು ಮಾಧ್ಯಮ ಪ್ರತಿನಿಧಿಗಳು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಶಾಸಕರು, ನಗರದಲ್ಲಿ ಹೈಟೆಕ್ ಬಸ್ ನಿಲ್ದಾಣ ನಿರ್ಮಾಣಕ್ಕೆ ರೂಪು ರೇಷೆ ಸಿದ್ದವಾಗುತ್ತಿದೆ. ಈ ವಿಚಾರದಲ್ಲಿ ಸಿಎಂ ಡಿ.ಕೆ.ಶಿವಕುಮಾರ್ ಅವರು ಆಸಕ್ತಿವಹಿಸಿದ್ದಾರೆ. ಅಲ್ಲಿಯವರೆಗೂ ಪ್ರಯಾಣಿಕರು ತಮ್ಮ ವಾಹನಗಳನ್ನು ಬೇರೆ ಸ್ಥಳಗಳಲ್ಲಿ ಪಾರ್ಕ್ ಮಾಡಬೇಕಾಗಿದೆ. ಸಧ್ಯಕ್ಕೆ ಬಸ್ ನಿಲ್ದಾಣದಲ್ಲಿ ಇದಕ್ಕೆ ಅವಕಾಶವಿಲ್ಲ ಎಂದು ಶಾಸಕ ಇಕ್ಬಾಲ್ ಹುಸೇನ್ ತಿಳಿಸಿದ್ದಾರೆ.

## ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನಕ್ಕೆ ಯೋಜನೆ ರೂಪಿಸಿ

ಲಕ್ಷ್ಮೀಕಾಂತ ರೆಡ್ಡಿ



ಮೈಸೂರು: ಮಹಾನಗರಪಾಲಿಕೆಯಲ್ಲಿ ಎಸ್.ಸಿ.ಎಸ್.ಪಿ ಹಾಗೂ ಟಿ.ಎಸ್.ಪಿ ಅನುದಾನದಡಿ ಉಳಿದಿರುವ ಅನುದಾನದಲ್ಲಿ ವಸತಿ ಶಾಲೆಗಳಿಗೆ ಮೂಲಭೂತ ವಸ್ತುಗಳ ಖರೀದಿ, ಲ್ಯಾಪ್ ಟಾಪ್ ಖರೀದಿ, ಮನೆ ನಿರ್ಮಾಣ, ಸೈಕಲ ಖರೀದಿ ಸೇರಿ ವಿವಿಧ ಕೆಲಸಗಳನ್ನು ಕೈಗೊಳ್ಳಲು ಯೋಜನೆ ರೂಪಿಸಲಾಗಿದೆ ಎಂದು ಲಕ್ಷ್ಮಿಕಾಂತ ರೆಡ್ಡಿ ತಿಳಿಸಿದರು.

ಡಾ.ಬಾಬು ಜಗಜೀವನರಾಂ ಭವನದಲ್ಲಿ ಆಯೋಜಿಸಲಾಗಿದ್ದ ಜಿಲ್ಲಾ ಜಾಗೃತ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.ಪರಿಶಿಷ್ಟ ಜಾತಿ ದೌರ್ಜನ್ಯ ಕುರಿತು ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದಾಗ ದೂರು ಸ್ವೀಕರಿಸಿ ಅನಂತರ ಜಾರಿ ನಿರ್ದೇಶನಾಲಯಕ್ಕೆ ವರ್ಗಾಯಿಸಬೇಕು. ದೂರು ಸಲ್ಲಿಸಲು ಪೊಲೀಸ್ ಠಾಣೆಗೆ ಬಂದಾಗ ಜಾರಿ ನಿರ್ದೇಶನಾಲಯಕ್ಕೆ ನೇರವಾಗಿ ಸಲ್ಲಿಸಿ ಎಂದು ಹೇಳುವಂತಿಲ್ಲ. ಪರಿಶಿಷ್ಟ ಜಾತಿ ಎಂದು ಬೇರೆಯವರು ಸುಳ್ಳು ಜಾತಿ ಪ್ರಮಾಣ ಪತ್ರ ನೀಡಿ ಕೆಲಸ ಪಡೆದುಕೊಂಡವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಸಮಿತಿ ಸದಸ್ಯ ಜವರಪ್ಪ ಎಂದಾಗ ಜಿಲ್ಲಾಧಿಕಾರಿಗಳು ಸುಳ್ಳು ಜಾತಿ ಪ್ರಮಾಣ ಪತ್ರಕ್ಕೆ ಸಂಬಂಧಿಸಿದಂತೆ ನೇಮಾಕಾತಿ ಪ್ರಾಧಿಕಾರದವರು ಜಿಲ್ಲಾಡಳಿತಕ್ಕೆ ದೂರು ಸಲ್ಲಿಸಿದರೆ ನಂತರ ಪರಿಶೀಲಿಸಿ ವರದಿ ನೀಡುವುದು ಸರಿಯಾದ ಕ್ರಮವಾಗಿರುತ್ತದೆ ಎಂದರು.

ತಾಲ್ಲೂಕಿನ ನಾಡನಹಳ್ಳಿ ಗ್ರಾಮದ ಬಳಿ ಇರುವ ಟಿ.ನರಸಿಪುರ ಮುಖ್ಯ ರಸ್ತೆಯ ವೃತ್ತಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಯಲ್ಲಿ ಸಭೆ ನಡೆಸಿ ಸಾರ್ವಜನಿಕರಿಂದ ಆಕ್ಷೇಪಣೆ ಸ್ವೀಕರಿಸಿ ನಂತರ ಕ್ರಮ ಕೈಗೊಳ್ಳಿ. ಹುಣಸೂರು ತಾಲ್ಲೂಕಿನ ಚಿಕ್ಕಹುಣಸೂರು ಗ್ರಮದ ಬಾಚಳ್ಳಿ ಗ್ರಾಮದ ಡಾ.ಬಿ.ಆರ್.ಅಂಬೇಡ್ಕರ್ ನಗರದ 30 ಕುಟುಂಬದವರಿಗೆ ಗಿರಿಜನ ಕಲ್ಯಾಣ ಇಲಾಖೆಯಿಂದ ಆದಿವಾಸಿಗಳು ಎಂದು ಪೌಷ್ಟಿಕ ಆಹಾರ ನೀಡಲಾಗುತ್ತಿದೆ. 30 ಕುಟುಂಬದವರ ಆದಿವಾಸಿ ಜೇನುಕುರುಬ ಜಾತಿಗೆ ಸೇರಿದವರಲ್ಲ ಎಂದು ದೂರು ದಾಖಲಾಗಿದ್ದು, ಜಾತಿ ಪ್ರಮಾಣ ಪತ್ರ ರದ್ದು ಆಗುವವರೆಗೂ ಪೌಷ್ಠಿಕ ಆಹಾರ ನೀಡುವಂತೆ ತಿಳಿಸಿದರು. ಪರಿಶಿಷ್ಟ ಜಾತಿ ಒಳ ಮೀಸಲಾತಿ ಕುರಿತು ಜಾತಿ ಪ್ರಮಾಣ ಪತ್ರ ನೀಡಲು ತಡವಾಗುತ್ತಿದ್ದು, ಸಮಸ್ಯೆ ಪರಿಹರಿಸುವಂತೆ ಚರ್ಚಿಸಿದ ಸಂದರ್ಭದಲ್ಲಿ ಸಣ್ಣ ಪುಟ್ಟ ತೊಂದರೆಗಳನ್ನು ಸರಿಪಡಿಸಿ ಜಾತಿ ಪ್ರಮಾಣ ಪತ್ರ ನೀಡಲು ವೇಗ ನೀಡಲಾಗುವುದು ಎಂದರು. ಪಿರಿಯಾಪಟ್ಟಣ ತಾಲ್ಲೂಕಿನ ರಾಣಿ ಗೇಟ್ ಹಾಡಿಯಲ್ಲಿ ಜೇನು ಕುರುಬರಿಗೆ ಮನೆಗಳಿಗೆ ನಿರ್ಮಾಣ ಮಾಡಿಕೊಡಲು ತಡವಾಗುತ್ತಿದೆ ಎಂದು ಸಮಿತಿ ಸದಸ್ಯ ಜವರಪ್ಪ ಸಭೆಗೆ ಮಾಹಿತಿ ನೀಡಿದಾಗ ಜಿಲ್ಲಾಧಿಕಾರಿಗಳು ಪ್ರತಿಕ್ರಿಯಿಸಿ ಅನುದಾನ ಬಿಡುಗಡೆಯಾಗಿದ್ದು, ಒಂದು ತಿಂಗಳೊಳಗೆ ಪೂರ್ಣಗೊಳಿಸಿ ಹಾಡಿ ಅವರಿಗೆ ಮನೆ ನಿರ್ಮಾಣ ಮಾಡಿಕೊಡುವಂತೆ ತಿಳಿಸಿದರು. ಸಭೆಯಲ್ಲಿ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸದಸ್ಯ ಎನ್.ಟಿ.ರವಿಕುಮಾರ್, ಪಾರ್ವತಮ್ಮ, ವೇಣುಗೋಪಾಲ್, ಎಸ್.ಬಸವರಾಜು, ಮಹದೇವ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಯುಕೇಶ್ ಕುಮಾರ್, ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಉಪ ಪೊಲೀಸ್ ಆಯುಕ್ತೆ ಡಾ.ಹರ್ಷ ಪ್ರಿಯಂವದ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸಿ.ಮಲ್ಲಿಕ್, ಅಪರ ಪೊಲೀಸ್ ಅಧೀಕ್ಷಕ ಎಲ್ ನಾಗೇಶ್, ಪಾಲಿಕೆಯ ಆಯುಕ್ತೆ ಎಂ.ಕೆ.ಸವಿತಾ ಹಾಗೂ ಹೆಚ್ಚುವರಿ ಆಯುಕ್ತೆ ವೀಣಾ, ಸಮಾಜ ಕಲ್ಯಾಣ ಇಲಾಖೆ ಜಂಟಿನಿರ್ದೇಶಕ ಬಿ.ರಂಗೇಗೌಡ ಮತ್ತಿತರರು ಉಪಸ್ಥಿತರಿದ್ದರು.

# ಅಂಬೇಡ್ಕರ್ ಕುರಿತು ಅವಹೇಳನ

## ದಲಿತ ಸಂಘಟನೆಗಳಿಂದ ಪ್ರತಿಭಟನೆ । ವ್ಯಕ್ತಿಯ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹ

ರಾಮನಗರ: ಸಾಮಾಜಿಕ ಜಾಲತಾಣದಲ್ಲಿ ವೇದ ಮೂರ್ತಿ ಎಂಬ ವ್ಯಕ್ತಿಯೊಬ್ಬ ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್, ಸಂವಿಧಾನ ಹಾಗೂ ಎಸ್ಸಿಎಸ್ಟಿ ಸಮುದಾಯಗಳ ಕುರಿತು ಅವಹೇಳನಕಾರಿ ಹೇಳಿಕೆಗಳನ್ನು ನೀಡಿದ್ದು ಆತನ ವಿರುದ್ಧ ಕಠೀಣ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾ ದಲಿತ ಸಂಘಟನೆಗಳ ಒಕ್ಕೂಟದ ವಿವಿಧ ಸಂಘಟನೆಗಳ ಮುಖಂಡರು, ಪದಾಧಿಕಾರಿಗಳು ಜಿಲ್ಲಾ ಎಸ್ಪಿ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಎಸ್ಪಿಯವರಿಗೆ ಮನವಿ ಸಲ್ಲಿಸುವ ಮುನ್ನ ಪೊಲೀಸ್ ಭವನದ ಆವರಣದಲ್ಲಿ ಪ್ರತಿಭಟನೆ ನಡೆಸಿದ ಮುಖಂಡರು ಮತ್ತು ಪದಾಧಿಕಾರಿಗಳು ಅಂಬೇಡ್ಕರ್ ಅವರ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿರುವ ವ್ಯಕ್ತಿಯನ್ನು ದೇಶದಿಂದಲೇ ಗಡಿಪಾರು ಮಾಡಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಸಮತಾ ಸೈನಿಕ ದಳದ ಯುವ ಘಟಕದ ರಾಜ್ಯಾಧ್ಯಕ್ಷ ಡಾ.ಜಿ.ಗೋವಿಂದಯ್ಯ ಮಾತನಾಡಿ, ಈ ದೇಶದ ಅಸ್ಮಿತೆಗಳಾದ ಡಾ.ಬಿ.ಆರ್. ಅಂಬೇಡ್ಕರ್, ಬುದ್ಧ, ಬಸವಣ್ಣ ಹಾಗೂ ಈ ದೇಶದ ಬಹುದೊಡ್ಡ ಗ್ರಂಥವಾದ ಸಂವಿಧಾನ ಕುರಿತು ಸಾಮಾಜಿಕ ಜಾಲತಾಣದಲ್ಲಿ ಅವಹೇಳಕಾರಿ ಮತ್ತು ನಿಂದನಾತ್ಮಕ ಹೇಳಿಕೆಗಳನ್ನು ನೀಡಿರುವ ವೇದಮೂರ್ತಿ ಎಂಬ ವ್ಯಕ್ತಿಯ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಂಡು ದೇಶದಿಂದ ಗಡಿಪಾರು ಮಾಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ದಲಿತ ಪರ ಸಂಘಟನೆಗಳ ಮುಖಂಡರಾದ ಕೂಡ್ಲೂರು ಕಾಂತರಾಜು, ಕೇಶವ, ಎಸ್.ಗವಿಯಯ್ಯ, ಬಿವಿಎಸ್ ವೆಂಕಟೇಶ, ಕೋಟೆ ಕುಮಾರ್, ಕೋಟಿ ಪ್ರಕಾಶ್, ಬಿವಿಎಸ್ ಕುಮಾರ್, ಶಿವಲಿಂಗಯ್ಯ ಕನಕಪುರ, ಕೇತೋಹಳ್ಳಿ ಶಿವಲಿಂಗಯ್ಯ, ಮತ್ತೀಕೆರೆ ಹನುಮಂತಯ್ಯ, ಅಪ್ಪಗೆರೆ ಶ್ರೀನಿವಾಸ್, ಡಿಎಸ್‌ಎಸ್ ಶಿವಶಂಕರ್ ಕೆ., ಎಸ್‌ಎಸ್‌ಡಿ ಸುರೇಶ್, ಅಂಬೇಡ್ಕರ್ ಸೇನೆ ಕಿರಣ್ ಸಾಗರ್, ಕರ್ನಾಟಕ ಭೀಮ ಸೇನೆ ದಿನೇಶ್, ಕಾಂತರಾಜು ಇಗ್ಗಲೂರು, ಬಸವರಾಜು, ಶ್ರೀನಿವಾಸ್, ಲೋಕೇಶ್, ವೃತ್ಯುಂಜಯ, ಮಹೇಶ್, ಸಿದ್ದರಾಜು, ಚಕ್ಕಲೂರು ಚೌಡಯ್ಯ, ನವೀನ್, ನಿವೃತ್ತ ಯೋಧರಾದ ವೆಂಕಟೇಶ್, ರಾಜಶೇಖರ್, ಸಾಹಿತಿಗಳಾದ ಆನಂದ್, ಬ್ಯಾಡರಹಳ್ಳಿ ಶಿವಕು ಮಾರ್, ನಗರಸಭಾ ಸದಸ್ಯರಾದ ಬ್ರಿಯಲ್, ವಕೀಲರಾದ ವರದರಾಜು, ರಾಮಕೃಷ್ಣ, ಇನ್ನಿತರರು ಭಾಗವಹಿಸಿದ್ದರು.



### ಬೆಂಬಲಿತರ ವಿರುದ್ಧವೂ ಕ್ರಮಕ್ಕೆ ಒತ್ತಾಯ

ವೇದಮೂರ್ತಿಗೆ ಸಾಮಾಜಿಕ ಜಾಲತಾಣದಲ್ಲಿ ಕರೆ ಮತ್ತು ಕಾಮೆಂಟ್ಸ್‌ಳ ಮೂಲಕ ಬೆಂಬಲಿಸುತ್ತಿರುವವರಿಗೆ ಕಾನೂನಿನ ಎಚ್ಚರಿಕೆ ನೀಡಬೇಕು ಮತ್ತು ಇಂತಹ ವ್ಯಕ್ತಿಗಳಿಂದ ಪ್ರೇರೇಪಿತಗೊಂಡು ಮುಂದಿನ ದಿನಗಳಲ್ಲಿ ಈ ದೇಶದ ಮಹಾನ್ ವ್ಯಕ್ತಿಗಳಿಗೆ ಅವಮಾನ ಮಾಡುವುದು ನಿಂದನಾತ್ಮಕ ಹೇಳಿಕೆಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡುವುದು ಕಂಡುಬಂದಲ್ಲಿ ಈತನಿಗೆ ಕೊಡುವ ಶಿಕ್ಷೆಯು ಒಂದು ಎಚ್ಚರಿಕೆಯ ಗಂಟೆಯಾಗಬೇಕು. ಇಂತಹ ದುಸ್ಸಾಹಸಗಳಿಗೆ ಕೈಹಾಕುವ ಇಂತಹವರಿಗೆ ಕಾನೂನಿನ ಕ್ರಮ ಜರುಗಿಸಬೇಕೆಂದು ಆಗ್ರಹಿಸಿದರು.

### ಮೀಸಲಾತಿ ಬಗ್ಗೆಯೂ ಆಕ್ಷೇಪಾರ್ಹ ಹೇಳಿಕೆ

ಉಪ ವಿಭಾಗ ಮಟ್ಟದ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸದಸ್ಯರಾದ ಹರೀಶ್ ಬಾಲು ಮಾತನಾಡಿ, ಮೀಸಲಾತಿ ಸೇರಿದಂತೆ ಸಂವಿಧಾನಾತ್ಮಕ ವಿಚಾರಗಳ ಬಗ್ಗೆಯೂ ಆಕ್ಷೇಪಾರ್ಹ ರೀತಿಯಲ್ಲಿ ಹೇಳಿಕೆ ನೀಡಿರುವುದು ಕಂಡುಬಂದಿದೆ. ಇಂತಹ ಹೇಳಿಕೆಗಳಿಂದ ಸಾರ್ವಜನಿಕ ಶಾಂತಿ, ಸಾಮಾಜಿಕ ಸೌಹಾರ್ದತೆ ಹಾಗೂ ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗುವ ಸಾಧ್ಯತೆಯಿರುವ ಹಿನ್ನೆಲೆಯಲ್ಲಿ ವೇದಮೂರ್ತಿಯನ್ನು ಭಾರತದಿಂದ ಗಡಿಪಾರು ಮಾಡಬೇಕು ಮತ್ತು ಮುಂದಿನ ದಿನಗಳಲ್ಲಿ ಇಂತಹ ಹೇಳಿಕೆಗಳನ್ನು ನೀಡದಂತೆ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

### ಕಠೀಣ ಶಿಕ್ಷೆ ವಿಧಿಸಿ – ಅಪ್ಪಗೆರೆ ಪ್ರದೀಪ್

ಸಾಮಾಜಿಕ ಹೋರಾಟಗಾರ ಅಪ್ಪಗೆರೆ ಪ್ರದೀಪ್ ಮಾತನಾಡಿ, ಅಂಬೇಡ್ಕರ್ ಅವರು ಸಾಮಾಜಿಕ ನ್ಯಾಯಕ್ಕೆ ಬುನಾದಿ ಹಾಕಿದ ಸಂವಿಧಾನವನ್ನು ರಚಿಸಿದ್ದು, ಅವರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವುದು ಖಂಡನೀಯ. ವೇದಮೂರ್ತಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಆಗ್ರಹಿಸಿದರು.

## ಪಿಎಂ ಕಿಸಾನ್ ಫಲಾನುಭವಿ ರೈತರಿಗೆ ಇ–ಕೆವೈಸಿ ಕಡ್ಡಾಯ

ಗುಂಡ್ಲುಪೇಟೆ: ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ಆರ್ಥಿಕ ನೆರವು ಪಡೆಯುತ್ತಿರುವ ರೈತರು ಕಡ್ಡಾಯವಾಗಿ ಮತ್ತೊಮ್ಮೆ ಇ–ಕೆವೈಸಿ ಮಾಡಿಸಿಕೊಳ್ಳುವಂತೆ ಸಹಾಯಕ ಕೃಷಿ ನಿರ್ದೇಶಕರು ಮನವಿ ಮಾಡಿದ್ದಾರೆ. ಗುಂಡ್ಲುಪೇಟೆ ತಾಲೂಕಿನಲ್ಲಿ ಒಟ್ಟು 18,818 ರೈತರ ಇ–ಕೆವೈಸಿ ಮಾಡಿಸುವುದು ಬಾಕಿ ಇದ್ದು, ಫಲಾನುಭವಿ ರೈತರು ಬಯೋಮೆಟ್ರಿಕ್ ಅಥವಾ ಫೇಸ್ ಅಥೆಂಟಿಕೇಶನ್ ಮೂಲಕ ಇ–ಕೆವೈಸಿ ಪೂರ್ಣಗೊಳಿಸಬಹುದಾಗಿದೆ.

**ಮೊಬೈಲ್ ಮೂಲಕವೂ ಇ–ಕೆವೈಸಿ** ಫಲಾನುಭವಿಗಳು ಪಿಎಂ ಕಿಸಾನ್ ಮೊಬೈಲ್ ಅಪ್ಲಿಕೇಶನ್ ಡೌನ್‌ಲೋಡ್ ಮಾಡಿಕೊಂಡು ಆಧಾರ್ ಸಂಖ್ಯೆ ನಮೂದಿಸಿ, ಒಟಿಪಿ ಪಡೆದು ಆ?ಯಪ್ ಸಕ್ರಿಯಗೊಳಿಸಬೇಕು. ನಂತರ ಫೇಸ್ ಅಥೆಂಟಿಕೇಶನ್ ಮೂಲಕ ಸ್ವತಃ ಹಾಗೂ ಇತರ ಫಲಾನುಭವಿಗಳ ಇ–ಕೆವೈಸಿಯನ್ನೂ ಪೂರ್ಣಗೊಳಿಸಬಹುದಾಗಿದೆ. ಅಥವಾ ಸಮೀಪದ ಸಾಮಾನ್ಯ ನಾಗರಿಕ ಸೇವಾ ಕೇಂದ್ರ, ಗ್ರಾಮ ಒನ್ ಕೇಂದ್ರ ಅಥವಾ ರೈತ ಸಂಪರ್ಕ ಕೇಂದ್ರಕ್ಕೆ ಭೇಟಿ ನೀಡಿ ಇ–ಕೆವೈಸಿ ಮಾಡಿಸಿಕೊಳ್ಳಬಹುದು. ಮುಂದಿನ ದಿನಗಳಲ್ಲಿ ಪ್ರಧಾನಮಂತ್ರಿ ಕಿಸಾನ್ ಯೋಜನೆಯ ಆರ್ಥಿಕ ನೆರವು ಪಡೆಯಲು ಇ–ಕೆವೈಸಿ ಕಡ್ಡಾಯವಾಗಿದ್ದು, ಬಾಕಿ ಇರುವ ರೈತರು ಕೂಡಲೇ ಇ–ಕೆವೈಸಿ ಪೂರ್ಣಗೊಳಿಸಿಕೊಳ್ಳಬೇಕು ಎಂದು ಸಹಾಯಕ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

## ಶಾರದ ವಿಲಾಸ ಕಾಲೇಜಿನ ಶಾರದೆ ಅನಾವರಣ

**ಮೈಸೂರು:** ಶಾರದಾ ವಿಲಾಸ ಕಾಲೇಜಿನಲ್ಲಿ ವಾರ್ಷಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭ 2026–27 ಹಾಗೂ ಶಾರದೆ ವಾರ್ಷಿಕ ಸಂಚಿಕೆಯನ್ನು ಮಂಗಳವಾರ ಬಿಡುಗಡೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಶಾರದೆ ವಾರ್ಷಿಕ ಸಂಚಿಕೆ ಬಿಡುಗಡೆ ಮಾಡಿ ಮಾತನಾಡಿದ ಮೈಸೂರು ವಿವಿ ನಿವೃತ್ತ ಪ್ರೊ.ನಿರಂಜನ, ಕಾಲೇಜು ದಿನಗಳಲ್ಲಿ ಕೇವಲ ಪದವಿ ಪಡೆಯುವುದು ಮಾತ್ರ ಮುಖ್ಯವಲ್ಲ. ತರಗತಿ ಕೇಳುವುದರೊಂದಿಗೆ ಹೊರಗಿನ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವುದು ಕೂಡ ಅಷ್ಟೇ ಮುಖ್ಯ. ನಿಮ್ಮ ಓದು ಪರೀಕ್ಷೆಗೆ ಸೀಮಿತವಾಗಿರಬಾರದು. ಸಾಮಾನ್ಯವಾಗಿ ವಿಶ್ವವಿದ್ಯಾನಿಲಯದಿಂದ ಪಡೆದ ಜ್ಞಾನ ವಿಶ್ವ ಮಟ್ಟದಲ್ಲಿರುತ್ತದೆ. ವಿಷಯಗಳನ್ನು ಆಮೂಲಾಗ್ರವಾಗಿ ಆಸಕ್ತಿ, ಕುತೂಹಲದಿಂದ ತಿಳಿದು ಓದಬೇಕು. ವಿಶ್ಲೇಷಣೆ ಮಾಡುವ ಆಸಕ್ತಿ ವಿದ್ಯಾರ್ಥಿಗಳಲ್ಲಿ ಮುಖ್ಯ. ನಾನು ಸಾಕಷ್ಟು ಸಂದರ್ಭಗಳಲ್ಲಿ ವಾರ್ಷಿಕ ಸಂಚಿಕೆಯಲ್ಲಿ ನಿರ್ವಾಯಕನಾಗಿ ಕೆಲಸ ಮಾಡಿದ್ದೇನೆಂದು ಸ್ಮರಿಸಿದರು.




ವಾರ್ಷಿಕ ಸಂಚಿಕೆಯ ಸಂಪಾದಕ ಡಾ. ಜಿ.ಆನಂದ ಮಾತನಾಡಿ, ಶಾರದೆ ವಾರ್ಷಿಕ ಕುಸುಮ. ವರ್ಷಪೂರ್ತಿ ಸುಗಂಧ ಸಂಗ್ರಹವಾಗಿದ್ದು, ಶಾರದೆ ಅನ್ನೋದು ಒಂದು ಸಾಂಕೇತಿಕ ಅಷ್ಟೇ. ವಿದ್ಯಾರ್ಥಿ ಬರಹಗಾರರು ಇದಕ್ಕೂ ಮೀರಿ ಓದು ಬರೆಯುವ ಆಸಕ್ತಿಯನ್ನು ಬೆಳೆಸಿಕೊಂಡರೆ ನಮ್ಮ ಮುಂದಿನ ಸಂಚಿಕೆಗಳು ಮತ್ತಷ್ಟು ಗುಣಮಟ್ಟ ಹಾಗೂ ಪ್ರಯೋಗಶೀಲವಾಗಿ ರೂಪಗೊಳ್ಳುತ್ತವೆ. ಬರವಣಿಗೆಯ ರಹಸ್ಯ ಇರುವುದೇ ಮತ್ತೆ ಮತ್ತೆ ತಿದ್ದಿ ಬರೆಯುವುದರಲ್ಲಿ. ವಿದ್ಯಾರ್ಥಿ ಬರಹಗಾರರು ಓದು ಬರಹವನ್ನು ನಿರಂತರವಾಗಿ ಜಾರಿಯಲ್ಲಿಟ್ಟುಕೊಂಡಿರಬೇಕು" ಎಂದರು. ಶಾರದಾ ವಿಲಾಸ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಯ ಹಿರಿಯ ಸದಸ್ಯ ಎಸ್.ಎಲ್.ರಾಮಚಂದ್ರ, ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ.ದೇವಿಕಾ ಮಾತನಾಡಿದರು. ಸಾಂಸ್ಕೃತಿಕ ಸಮಿತಿಯ ಸಂಚಾಲಕಿ ಶಕುಂತಲಾ, ವಿದ್ಯಾರ್ಥಿಗಳಾದ ಪುರುಷೋತ್ತಮ್, ಮಹಾಲಕ್ಷ್ಮಿ, ಪ್ರಿಯಾಂಕ, ಸೋನಿತಾ ಇತರರು ಇದ್ದರು.

## ಸ್ವಚ್ಛತೆಯಲ್ಲಿ ಉತ್ತಮ ಸೇವೆ ಸಲ್ಲಿಸಿದವರಿಗೆ ಸನ್ಮಾನ

ಮೈಸೂರು: ಮಹಾನಗರ ಪಾಲಿಕೆಯವತಿಯಿಂದ 80ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ನಗರದ 9 ವಲಯಗಳಲ್ಲಿ ಗುರುತಿಸಲಾದ 80 ಕಸ ಸುರಿಯುವ ಅತಿಸೂಕ್ಷ್ಮ ಸ್ಥಳಗಳನ್ನು ಸ್ವಚ್ಛಗೊಳಿಸಿ ಸುಂದರ ತಾಣಗಳಾಗಿ ಪರಿವರ್ತಿಸಲಾಗಿದೆ. ಈ ಅಭಿಯಾನದಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸಿದ ಅಧಿಕಾರಿಗಳು, ಪರಿಸರ ಅಭಿಯಂತರರು, ಆರೋಗ್ಯ ನಿರೀಕ್ಷಕರು, ಮೇಲ್ವಿಚಾರಕರು, ಪೌರಕಾರ್ಮಿಕರು ಹಾಗೂ ಚಾಲಕರನ್ನು ಪಾಲಿಕೆ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ಅಧಿಕಾರಿ ವರ್ಗದಲ್ಲಿ ವಲಯ ಕಚೇರಿ?4ರ ಗೋಕುಲಂ ಸ್ಮಶಾನ ಜಿವಿಪಿಗೆ ವಲಯ ಕಚೇರಿ?7ಕ್ಕೆ ಪ್ರಥಮ ಬಹುಮಾನ ಹಾಗೂ ವಲಯ ಕಚೇರಿ 9ಕ್ಕೆ ದ್ವಿತೀಯ ಬಹುಮಾನ ನೀಡಲಾಯಿತು. ವಲಯ ಕಚೇರಿ6 ಹಾಗೂ ವಲಯ ಕಚೇರಿ?3ಗೆ ತೃತೀಯ ಬಹುಮಾನ ನೀಡಲಾಯಿತು. ವಲಯ ಕಚೇರಿ 7 ತಂಡಕ್ಕೆ ರೋಲಿಂಗ್ ಟ್ರೋಫಿ ಪ್ರದಾನ ಮಾಡಲಾಯಿತು. ಅತ್ಯುತ್ತಮ ಪೌರಕಾರ್ಮಿಕರಾಗಿ ಅನಿತಾ(ವಾರ್ಡ್55), ಸತ್ಯ (ವಾರ್ಡ್ 55), ನವೀನ್ (ವಾರ್ಡ್28), ಅಂಜಯ್ಯ (ವಾರ್ಡ್ 17), ನರಸಿಂಹ (ವಾರ್ಡ್ 25) ಹಾಗೂ ವಿಜಯ್ (ವಾರ್ಡ್40) ರನ್ನು ಸನ್ಮಾನಿಸಲಾಯಿತು. 80 ಸ್ಥಳ ಪರಿವರ್ತನೆಯೊಂದಿಗೆ ಅಭಿಯಾನವನ್ನು ಮುಕ್ತಾಯಗೊಳಿಸದೆ, ನಗರದ ಎಲ್ಲ ಕಸ ಸುರಿಯುವ ಅತಿಸೂಕ್ಷ್ಮ ಸ್ಥಳಗಳನ್ನು ಹಂತ ಹಂತವಾಗಿ ಪರಿವರ್ತಿಸಿ ಮೈಸೂರನ್ನು ಕಸ ಮುಕ್ತ ಹಾಗೂ ದೇಶದ ನಂ.1 ಸ್ವಚ್ಛ ನಗರವನ್ನಾಗಿಸುವ ನಿಟ್ಟಿನಲ್ಲಿ ನಿರಂತರ ಕಾರ್ಯಾಚರಣೆ ಕೈಗೊಳ್ಳಲಾಗಿದೆ.




**ಮಾವು, ತೆಂಗಿನಮರ, ನೀರಾವರಿ ಪೈಪ್‌ಗಳು ನಾಶ**

# ಆನೆಗಳ ದಾಳಿ: ಅರಣ್ಯ ಇಲಾಖೆ ವಿರುದ್ಧ ರೈತರ ಆಕ್ರೋಶ

ರಾಮನಗರ: ತಾಲ್ಲೂಕಿನ ಗುನ್ನೂರು ಗ್ರಾಮದಲ್ಲಿ ಕಾಡಾನೆಗಳು ದಾಂಧಲೆ ನಡೆಸಿದ ಪರಿಣಾಮ ಮಾವು, ತೆಂಗಿನಮರ, ನೀರಾವರಿ ಪೈಪ್‌ಗಳು ನಾಶವಾಗಿವೆ. ನಷ್ಟಕ್ಕೆ ಒಳಗಾದ ರೈತ ಕುಟುಂಬಗಳು ಅರಣ್ಯ ಇಲಾಖೆಯ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಭಾನುವಾರ ರಾತ್ರಿ ಮೂರು ಆನೆಗಳ ಗುಂಪೊಂದು ಗುನ್ನೂರು ಗ್ರಾಮದ ಮಂಟೇದಯ್ಯ, ರಾಮಸ್ವಾಮಯ್ಯ, ರಾಮಶೆಟ್ಟಿ, ದೇವೇಗೌಡ, ಮಧು, ಕೃಷ್ಣಶೆಟ್ಟಿ ಎಂಬ ರೈತರ ತೆಂಗು, ಮಾವಿನ ಮರಗಳು, ನೀರಾವರಿ ಪರಿಕರ ಮತ್ತಿತರ ಫಸಲು ನಾಶಪಡಿಸಿವೆ. ಆನೆಗಳು ತೆಂಗಿನಕಲ್ಲು ಅರಣ್ಯ ಮತ್ತು ಹಂದಿಗೊಂದಿ ಅರಣ್ಯದ ಮೂಲಕ ತಮ್ಮ ತೋಟ, ಜಮೀನುಗಳಿಗೆ ಲಗ್ಗೆ ಇಡುತ್ತಿವೆ. ಅರಣ್ಯ ಇಲಾಖೆಯ ಅಧಿಕಾರಿಗಳು ಆನೆಗಳನ್ನು ತಡೆಯುವಲ್ಲಿ ವಿಫಲರಾಗಿದ್ದಾರೆ. ಹಲವಾರು ವರ್ಷಗಳ ಕಾಲ ಬೆವರು ಸುರಿಸಿ ಬೆಳೆಸಿದ ಮರ,ಗಿಡ, ಬೆಳೆಯನ್ನು ಆನೆಗಳು ನಾಶಪಡಿಸುತ್ತಿವೆ. ನಮಗಾಗಿರುವ ನಷ್ಟವನ್ನು ಅರಣ್ಯ ಇಲಾಖೆ ಭರಿಸಿಕೊಡಬೇಕು ಎಂದು ರೈತರು ಮತ್ತು ಗ್ರಾಮಸ್ಥರು ಒತ್ತಾಯಿಸಿದ್ದಾರೆ.



ಅಧಿಕಾರಿಗಳು ಸ್ಥಳಕ್ಕೆ ಬಂದು ರೈತರ ಕಷ್ಟ ಕೇಳುತ್ತಿಲ್ಲ, ದೂರು ಕೊಟ್ಟರೆ ಕೇವಲ ಹಾರಿಕೆ ಉತ್ತರ ನೀಡುತ್ತಿದ್ದಾರೆ. ಕಳೆದ ವರ್ಷ ಆಗಿರುವ ನಷ್ಟಕ್ಕೆ ಪರಿಹಾರ ಇನ್ನೂ ಕೊಟ್ಟಿಲ್ಲ. ವೈಜ್ಞಾನಿಕ ಪರಿಹಾರವೂ ಇಲಾಖೆಯಿಂದ ದೊರೆಯುತ್ತಿಲ್ಲ ಎಂದು ರೈತರು ದೂರಿದ್ದಾರೆ. ಆನೆಗಳನ್ನು ತಮ್ಮ ಮೂಲ ಸ್ಥಾನಕ್ಕೆ ಓಡಿಸಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ನಷ್ಟವೊಂದಿದ ರೈತ ಮಂಟೇದಯ್ಯ ಮಾತನಾಡಿ, ಆನೆಗಳನ್ನು ತಡೆಗಟ್ಟುತ್ತೇವೆ ಎಂಬ ಅರಣ್ಯ ಇಲಾಖೆ ಅಧಿಕಾರಿಗಳ ಹೇಳಿಕೆ ಹುಸಿಯಾಗಿದೆ. ಮೇಲಧಿಕಾರಿಗಳೂ ಕೂಡಲೇ ನಮ್ಮ ಕಷ್ಟ ಕೇಳಬೇಕು ಇಲ್ಲದಿದ್ದರೆ ಬಡ ರೈತರಾದ ನಮಗೆ ಯಾವುದೇ ಪ್ರಯೋಜನವಾಗುವುದಿಲ್ಲ. ಆನೆ ನಾಶ ಮಾಡಿದ ಮರಮುಟ್ಟು ಫಸಲು, ಪರಿಕರ ತಂದು ನಾವುಗಳು ಅರಣ್ಯ ಇಲಾಖೆ ಕಛೇರಿ ಮುಂದೆ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

### ಮೂಲ ಸ್ಥಾನಕ್ಕೆ ಕಳುಹಿಸಲು ಕಾರ್ಯಾಚರಣೆ

ಹಂದಿಗೊಂದಿ ಅರಣ್ಯಕ್ಕೆ ಕಳೆದ ಮೂರು ದಿನಗಳ ಹಿಂದೆ ಎರಡು, ಭಾನುವಾರ ರಾತ್ರಿ ಮೂರು ಆನೆಗಳು ಬಂದಿವೆ. ತೆಂಗಿನಕಲ್ಲು ಅರಣ್ಯದಿಂದ ಬರುವ ಸಮಯದಲ್ಲಿ ಗುನ್ನೂರು ಗ್ರಾಮದ ರೈತರ ಫಸಲು ನಾಶ ಮಾಡಿ ಅರಣ್ಯ ಸೇರಿವೆ. ಈಗಾಗಲೇ ಅವುಗಳ ಇರುವಿಕೆಯನ್ನು ಗುರುತಿಸಿದ್ದು ಇಂದು ರಾತ್ರಿಯೇ ಅವುಗಳ ಕಾರ್ಯಾಚರಣೆ ಮಾಡಲಾಗುತ್ತದೆ. ರೈತರ ಫಸಲು ನಷ್ಟಕ್ಕೆ ಇಲಾಖೆ ವೈಜ್ಞಾನಿಕ ಪರಿಹಾರ ನೀಡಲಿದೆ.

▸▸ **ಮಹಮ್ಮದ್ ಮನ್ಸೂರ್** ವಲಯ ಅರಣ್ಯಾಧಿಕಾರಿ, ರಾಮನಗರ.

## ತುರ್ತು ಚಿಕಿತ್ಸಾ ನಿರ್ವಹಣೆ ಕುರಿತು ವಿಶೇಷ ಉಪನ್ಯಾಸ

**ಮಡಿಕೇರಿ :** ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಆಸ್ಪತ್ರೆಯ ಸಭಾಂಗಣದಲ್ಲಿ ತಲೆ ಮತ್ತು ಬೆನ್ನುಮೂಳೆಯ ಗಾಯಗಳು, ಪಾರ್ಶ್ವವಾಯು ಹಾಗೂ ಅಪಸ್ಮಾರದ ತುರ್ತು ನಿರ್ವಹಣೆ ಕುರಿತು ವಿಶೇಷ ಅತಿಥಿ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಸಂಸ್ಥೆಯ ಡೀನ್ ಹಾಗೂ ನಿರ್ದೇಶಕರಾದ ಡಾ.ಲೋಕೇಶ್ ಎ.ಜೆ., ಆರ್‌ಎಂಒ ಡಾ.ಅಭಿನಂದನ್ ಬಿ.ವಿ. ಹಾಗೂ ಸಾಮಾನ್ಯ ಶಸ್ತ್ರಚಿಕಿತ್ಸಾ ವಿಭಾಗದ ಮುಖ್ಯಸ್ಥರಾದ ಡಾ. ಪ್ರವೀಣ್ ಕುಮಾರ್ ಕೆ. ಅವರ ಸಮ್ಮುಖದಲ್ಲಿ ಕಾರ್ಯಕ್ರಮ ಜರುಗಿತು.

ಬೆಂಗಳೂರಿನ ಸರ್ಜಾಪುರ ರಸ್ತೆಯ ಸ್ಪರ್ಶ್ ಆಸ್ಪತ್ರೆಯ ಕನ್ಸಲ್ಟೆಂಟ್ ನ್ಯೂರೋಸರ್ಜನ್ ಡಾ. ನಿಹಾಲ್ ಅಹಮದ್ ಅವರು ಉಪನ್ಯಾಸ ನೀಡಿದರು.

ತಲೆ ಮತ್ತು ಬೆನ್ನುಮೂಳೆಯ ಗಾಯಗಳ ಸಂದರ್ಭದಲ್ಲಿ ತಕ್ಷಣ ಕೈಗೊಳ್ಳಬೇಕಾದ ಕ್ರಮಗಳು, ನರವೈಜ್ಞಾನಿಕ ಮೌಲ್ಯಮಾಪನ, ಅಗತ್ಯವಿರುವ ಸಂದರ್ಭಗಳಲ್ಲಿ ಅಖಿ/ಒಖಋ ಪರೀಕ್ಷೆ, ಹೆಚ್ಚಿದ ಒಳಕಪಾಲದ ಒತ್ತಡದ ನಿರ್ವಹಣೆ, ಪಾರ್ಶ್ವವಾಯುವಿನಲ್ಲಿ ?Time is Brain? ಎಂಬ ಮಹತ್ವ, ತ್ವರಿತ ಥ್ರಾಂಬೋಲಿಸಿಸ್ ಹಾಗೂ ಮೆಕ್ಯಾನಿಕಲ್ ಥ್ರಾಂಬೆಕ್ಟಮಿ ಮತ್ತು ಅಪಸ್ಮಾರದ ತುರ್ತು ನಿರ್ವಹಣೆ ಕುರಿತು ಪ್ರಾಯೋಗಿಕವಾಗಿ ವಿವರಿಸಲಾಯಿತು.

ಉಪನ್ಯಾಸವು ಅತ್ಯಂತ ಮಾಹಿತಿ ಪೂರ್ಣವಾಗಿದ್ದು, ಸಂವಾದಾತ್ಮಕ ರೀತಿಯಲ್ಲಿ ನಡೆದ ಕಾರಣ ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳು ಹಾಗೂ ಇಂಟರ್ನ್‌ಗಳಿಗೆ ತುರ್ತು ಪರಿಸ್ಥಿತಿಗಳಲ್ಲಿ ತ್ವರಿತ ಮತ್ತು ಸೂಕ್ತ ನಿರ್ಧಾರ ಕೈಗೊಳ್ಳಲು ಬಹಳ ಉಪಯುಕ್ತವಾಯಿತು.

ಕಾರ್ಯಕ್ರಮವು ವೈದ್ಯಕೀಯ ವಿದ್ಯಾರ್ಥಿಗಳು ಹಾಗೂ ವೈದ್ಯರಿಗೆ ತುರ್ತು ನರರೋಗ ಪ್ರಕರಣಗಳ ನಿರ್ವಹಣೆಯಲ್ಲಿ ಆತ್ಮವಿಶ್ವಾಸ ಹೆಚ್ಚಿಸುವಂತಹ ಮಹತ್ವದ ಶೈಕ್ಷಣಿಕ ಅನುಭವವಾಗಿ ಮೂಡಿಬಂದಿತು.

## 21 ನೇ ಕೊಡವ ಪುಸ್ತಕ ಪತ್ತಾಯ

**ಮಡಿಕೇರಿ:** ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ವತಿಯಿಂದ ಅನಾವರಣಗೊಳ್ಳುತ್ತಿರುವ ?ಕೊಡವ ಪುಸ್ತಕ ಪತ್ತಾಯ?ದ 21 ನೇ ಆವೃತ್ತಿ ಗೋಣಿಕೊಪ್ಪ ಶ್ರೀ ಇಗ್ಗುತಪ್ಪ ಕೊಡವ ಸಂಘದಲ್ಲಿ ಸೆಪ್ಟೆಂಬರ್, 13 ರಂದು ಬೆಳಗ್ಗೆ 11 ಗಂಟೆಗೆ ಸ್ಥಾಪನೆಗೊಳ್ಳುತ್ತಿದೆ.

ಅಕಾಡೆಮಿ ಅಧ್ಯಕ್ಷರಾದ ಅಜ್ಜಿನಿಕಂಡ ಸಿ.ಮಹೇಶ್ ನಾಚಯ್ಯ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಗೋಣಿಕೊಪ್ಪ ಶ್ರೀ ಇಗ್ಗುತಪ್ಪ ಕೊಡವ ಸಂಘದ ಅಧ್ಯಕ್ಷರಾಗಿರುವ ಅಜ್ಜಿಕುಟ್ಟಿರ ಸಿ.ದೇವಯ್ಯನವರು ಪುಸ್ತಕ ಪತ್ತಾಯ ಅನಾವರಣ ಗೊಳಿಸಲಿದ್ದಾರೆ.

ಈ ಸಂದರ್ಭದಲ್ಲಿ ಇಗ್ಗುತಪ್ಪ ಸಂಘದ ವತಿಯಿಂದ ಹಲವು ಕೊಡವ ಕಾರ್ಯಕ್ರಮಗಳು ನಡೆಯಲಿದೆ. ಅಂತೆಯೇ, ಅಕಾಡೆಮಿ ವತಿಯಿಂದ ಇಗ್ಗುತಪ್ಪ ಸಂಘಕ್ಕೆ ಹಾಗೂ ಚೋಡುಮಡ ಕುಟುಂಬದ ಐನ್‌ಮನೆಗೆ ದುಡಿ ವಿತರಿಸಲಾಗುವುದು. ಇಗ್ಗುತಪ್ಪ ಕೊಡವ ಸಂಘದ ಆಡಳಿತ ಮಂಡಳಿ ಸರ್ವಸದಸ್ಯರು, ಅಕಾಡೆಮಿ ಸದಸ್ಯರು ಪಾಲ್ಗೊಳ್ಳಲಿದ್ದಾರೆಂದು ರಿಜಿಸ್ಟ್ರಾರ್ ಅವರು ತಿಳಿಸಿದ್ದಾರೆ.

## ಸೆ.09 ರಂದು ಲೋಕಾಯುಕ್ತದಿಂದ ದೂರು ಅರ್ಜಿ ಸ್ವೀಕಾರ

**ಮಡಿಕೇರಿ:** ಕರ್ನಾಟಕ ಲೋಕಾಯುಕ್ತ ಮಡಿಕೇರಿಯ ಲೋಕಾಯುಕ್ತ ಅಧಿಕಾರಿಗಳು ಸೆಪ್ಟೆಂಬರ್, 09 ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಮಡಿಕೇರಿ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಕರ್ನಾಟಕ ಲೋಕಾಯುಕ್ತ ಕಾಯಿದೆಯಡಿ ದೂರು ಅರ್ಜಿ ಸ್ವೀಕರಿಸಲಿದ್ದಾರೆ. ಭರ್ತಿ ಮಾಡಿದ ಮತ್ತು ನೋಟರಿಯಿಂದ ಅಫಿಡವಿಟ್ ಮಾಡಿಸಿದ ಅರ್ಜಿ ಸ್ವೀಕರಿಸಲಿದ್ದಾರೆ.

ಸರ್ಕಾರಿ ಕಚೇರಿಗಳಲ್ಲಿ ಅಧಿಕೃತ ಕೆಲಸಗಳಲ್ಲಿ ವಿಳಂಬ ಹಾಗೂ ಇನ್ನಿತರ ತೊಂದರೆ ನೀಡುತ್ತಿರುವ ಸರ್ಕಾರಿ ಅಧಿಕಾರಿ/ ನೌಕರರ ವಿರುದ್ಧ ಸಾರ್ವಜನಿಕರು ದೂರುಗಳನ್ನು ನಿಗದಿತ ಪತ್ರದಲ್ಲಿ ನೀಡಬಹುದಾಗಿದೆ. ಸಾರ್ವಜನಿಕರು ಈ ಅವಕಾಶ ಸದುಪಯೋಗಪಡಿಸಿಕೊಳ್ಳಲು ಕೋರಿದೆ. ಹೆಚ್ಚಿನ ವಿವರಗಳಿಗೆ ಮಡಿಕೇರಿ ಲೋಕಾಯುಕ್ತ ಪೊಲೀಸ್ ಕಚೇರಿ, ಗೌಳಿಬೀದಿ, ಮಡಿಕೇರಿ ದೂ.ಸಂ.08272-295297 ನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ತಿಳಿಸಿದ್ದಾರೆ.

## ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದಿಂದ ಅರ್ಜಿ ಆಹ್ವಾನ

**ಮಡಿಕೇರಿ:** 2026-27ನೇ ಸಾಲಿಗೆ ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದ ವಿವಿಧ ಯೋಜನೆಗಳಲ್ಲಿ ಸೌಲಭ್ಯ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ.

ಬೆಸ್ತ, ಅಂಬಿಗ/ಅಂಬಿ, ಗಂಗಾಮತ, ಕಬ್ಬಲಿಗ, ಕೋಲಿ, ಮತ್ತು ಇದರ ಉಪಜಾತಿಗಳ ಅಭಿವೃದ್ಧಿಗಾಗಿ 2026-27ನೇ ಸಾಲಿನಲ್ಲಿ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳ ಸೌಲಭ್ಯ ಪಡೆಯ ಬಯಸುವವರಿಗೆ ಆನ್‌ಲೈನ್ ಮೂಲಕ (ಸೇವಾ ಸಿಂಧೂ) ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಸೆಪ್ಟೆಂಬರ್, 30 ಕೊನೆಯ ದಿನವಾಗಿದೆ. (ಅರಿವು ಶೈಕ್ಷಣಿಕ ಸಾಲ ಯೋಜನೆಗಳಿಗೆ ಕೊನೆಯ ದಿನಾಂಕ ಇರುವುದಿಲ್ಲ)

ಅರಿವು ಶೈಕ್ಷಣಿಕ ಸಾಲ ಯೋಜನೆ: ಕರ್ನಾಟಕ ರಾಜ್ಯದಲ್ಲಿ ವೃತ್ತಿಪರ, ತಾಂತ್ರಿಕ ಇತ್ಯಾದಿ ಉನ್ನತ ಕೋರ್ಸ್‌ಗಳ ವ್ಯಾಸಂಗಕ್ಕೆ ಪ್ರವೇಶ ಪರೀಕ್ಷಾ ಪ್ರಾಧಿಕಾರದಿಂದ (ಸಿ.ಇ.ಟಿ/ಎನ್.ಇ.ಇ.ಟಿ) ಸೀಟು ಪಡೆದು ಕಾಲೇಜಿಗೆ ಸೇರ್ಪಡೆಯಾದವರಿಗೆ ವ್ಯಾಸಂಗಕ್ಕೆ ಶೈಕ್ಷಣಿಕ ಸಾಲದ ಮೊತ್ತಕ್ಕೆ ವಾರ್ಷಿಕವಾಗಿ ಗರಿಷ್ಠ ರೂ.1 ಲಕ್ಷಗಳಂತೆ ಕೋರ್ಸ್ ಅವಧಿಗೆ ಶೇ.2ರ ಬಡ್ಡಿ ದರದಲ್ಲಿ ಸಾಲ ನೀಡುವುದು.

ಕುಟುಂಬದ ವಾರ್ಷಿಕ ವರಮಾನವು ಎಲ್ಲಾ ಮೂಲಗಳಿಂದ ರೂ.3.50 ಲಕ್ಷಗಳನ್ನು ಮೀರಿರಬಾರದು. ವಿದ್ಯಾರ್ಥಿಯ ವಯಸ್ಸು 35 ವರ್?ಿ ಮೀರಿರಬಾರದು. ವಿದ್ಯಾರ್ಥಿಯು ಸರ್ಕಾರಿ ಕಾಲೇಜು/ಮಾನ್ಯತೆ ಪಡೆದ ಅನುದಾನಿತ ಮತ್ತು ಅನುದಾನ ರಹಿತ, ಖಾಸಗಿ ಕಾಲೇಜುಗಳಲ್ಲಿ ವೃತ್ತಿಪರ/ತಾಂತ್ರಿಕ/ಉನ್ನತ ವ್ಯಾಸಂಗದ ಕೋರ್ಸ್ ಗಳಲ್ಲಿ ಸಿ.ಇ.ಟಿ/ ಎನ್.ಇ.ಇ.ಟಿ ಮೂಲಕ ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿರಬೇಕು. ವಿದ್ಯಾರ್ಥಿಯು ಶೈಕ್ಷಣಿ ಕ ಉದ್ದೇಶಕ್ಕೆ ಇತರೆ ಯಾವುದೇ ಬ್ಯಾಂಕ್/ ಆರ್ಥಿಕ ಸಂಸ್ಥೆಗಳಿಂದ ಸಾಲ ಪಡೆದಿರಬಾರದು.

ಅರಿವು ಶೈಕ್ಷಣಿಕ ಸಾಲ ಯೋಜನೆಯಡಿ 2022-23, 2023-24, 2024-25 ಮತ್ತು 2025-26ನೇ ಸಾಲಿನಲ್ಲಿ ಸಾಲ ಪಡೆದ ಅರ್ಹ ವಿದ್ಯಾರ್ಥಿಗಳು 2026-27ನೇ ಸಾಲಿನಲ್ಲಿ ಮುಂದುವರಿದ ಕಂತುಗಳ 2,3,4 ಮತ್ತು5ನೇ ಕಂತಿನ(ನವೀಕರಣ)ಸಾಲ ಪಡೆಯಲು ವರ್?ಿದ ವ್ಯಾಸಂಗ ದೃಢೀಕರಣ ಮತ್ತು ಅಂಕಪಟ್ಟಿಯೊಂದಿಗೆ ಅರ್ಜಿ ಸಲ್ಲಿಸುವುದು.

ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ವ್ಯಾಸಂಗಕ್ಕೆ ಆರ್ಥಿಕ ನೆರವು 2025-26ನೇ ಸಾಲಿನಲ್ಲಿ ಸಾಲ ಪಡೆದ ಅರ್ಹ ವಿದ್ಯಾರ್ಥಿಗಳು 2026-27ನೇ ಸಾಲಿನಲ್ಲಿ ವಿದೇಶಿವಿಶ್ವವಿದ್ಯಾಲಯಗಳಲ್ಲಿಉನ್ನತ ಶಿಕ್ಷಣವ್ಯಾಸಂಗಕ್ಕೆ ಮುಂದುವರಿದ ಕಂತು 2ನೇ ಕಂತಿನ (ನವೀಕರಣ)ಸಾಲ ಪಡೆಯಲು ವರ್?ಿದ ವ್ಯಾಸಂಗ ದೃಢೀಕರಣ, ಅಂಕಪಟ್ಟಿ ಹಾಗೂ ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸುವುದು. ಸ್ವಯಂ ಉದ್ಯೋಗ ನೇರ ಸಾಲ ಮತ್ತು ಸಹಾಯ ಧನ ಯೋಜನೆ: ಅರ್ಜಿದಾರರ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ ರೂ.98 ಸಾವಿರ ಮತ್ತು ನಗರ ಪ್ರದೇಶದವರಿಗೆ ರೂ.1.20 ಲಕ್ಷಗಳ ಮಿತಿಯೊಳಗಿರಬೇಕು. ಅರ್ಜಿದಾರರು 18 ವರ್ಷ ಮೇಲ್ಪಟ್ಟು 55 ವರ್ಷದ ಒಳಗಿನವರಾಗಿರಬೇಕು. ಈ ಯೋಜನೆಯಲ್ಲಿ ಸಮುದಾಯದವರು ಸ್ವಯಂ ಉದ್ಯೋಗ ಕೈಗೊಳ್ಳಲು ಆರ್ಥಿಕ ಚಟುವಟಿಕೆಗಳಿಗನುಸಾರ ಸಾಲ ಸೌಲಭ್ಯ ಒದಗಿಸಲಾಗುವುದು. ಘಟಕ ವೆಚ್ಚ ರೂ.1 ಲಕ್ಷಗಳಿಗೆ ಶೇ.20ರಷ್ಟು ಗರಿಷ್ಠರೂ.20 ಸಾವಿರ ಸಹಾಯಧನ ಉಳಿಕೆ ಶೇ.80ರಷ್ಟು ಗರಿಷ್ಠ ರೂ.80 ಸಾವಿರಗಳ ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಸಾಲ ಮಂಜೂರು ಮಾಡಲಾಗುವುದು. ಘಟಕ ವೆಚ್ಚ ರೂ.1,00,001 ರಿಂದ ರೂ.2 ಲಕ್ಷಗಳವರೆಗೆ ಶೇ.15ರಷ್ಟು ಗರಿಷ್ಠ ರೂ.30 ಸಾವಿರಗಳ ಸಹಾಯಧನ ಉಳಿಕೆ ಶೇ.85 ರಷ್ಟು ರೂ 1.70 ಲಕ್ಷಗಳಿಗೆ ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಸೂಕ್ತ ಅಡಮಾನ ಮಾಡಿದ್ದಲ್ಲಿ ಸಾಲ ಮಂಜೂರು ಮಾಡಲಾಗುವುದು.

### ಅವಧಿ ಮೀರಿದ ಆಹಾರ, ಕೃತಕ ಬಣ್ಣ ಬಳಕೆ ಪತ್ತೆ; ಎರಡು ಹೋಟೆಲ್‌ಗಳಿಗೆ ತಾತ್ಕಾಲಿಕ ಬೀಗ

# ಹೋಟೆಲ್, ರೆಸ್ಟೋರೆಂಟ್‌ಗಳ ಮೇಲೆ ಅಧಿಕಾರಿಗಳ ದಾಳಿ

**ಚಾಮರಾಜನಗರ:** ಜಿಲ್ಲಾಧಿಕಾರಿಗಳಾದ ಶ್ರೀರೂಪ ಹಾಗೂ ಉಪವಿಭಾಗಾಧಿಕಾರಿ ಹಾಗೂ ಆಹಾರ ಸುರಕ್ಷತಾ ಅಧಿಕಾರಿಗಳು ಆಗಿರುವ ದಿನೇಶ್ ಕುಮಾರ್ ಮೀನಾ ಅವರು ನಗರದ ಹೊರವಲಯದಲ್ಲಿರುವ ಹೋಟೆಲ್, ರೆಸ್ಟೋರೆಂಟ್ ಹಾಗೂ ಆಹಾರ ಉತ್ಪಾದನಾ ಘಟಕಗಳಿಗೆ ಇಂದು ಮಧ್ಯಾಹ್ನ ದಿಢೀರ್ ಭೇಟಿ ನೀಡಿ ಪರಿಶೀಲಿಸಿದರು.

ಹೋಟೆಲ್ ಮಕಾವ್ ಹಾಗೂ ಉಡುಪಿ ಗ್ರಾಂಡ್ ರೆಸ್ಟೋರೆಂಟ್ ನಲ್ಲಿ ದಾಸ್ತಾನು ಮಾಡಲಾಗಿದ್ದ ದಿನಸಿ ಪದಾರ್ಥಗಳು, ತರಕಾರಿ, ಇನ್ನಿತರ ಸಾಮಾಗ್ರಿಗಳನ್ನು ವೀಕ್ಷಿಸಿದರು. ಈ ವೇಳೆ ಆಹಾರದಲ್ಲಿ ಕೃತಕ ಬಣ್ಣ ಮಿಶ್ರ ಮಾಡಿರುವುದು, ಅಡುಗೆ ಮನೆಯಲ್ಲಿ ಸ್ವಚ್ಚತೆ ಇಲ್ಲದಿರುವುದು ಹಾಗೂ ಅವಧಿ ಮೀರಿದ ಆಹಾರ ಪದಾರ್ಥಗಳ ಬಳಕೆ, ಗುಣಮಟ್ಟವಿಲ್ಲದ ದಿನಸಿ ಸಾಮಗ್ರಿಗಳು ಕಂಡುಬಂದಿತು. ಹೋಟೆಲ್ ಮಕಾವ್ ನಲ್ಲಿ ತಾಜಾ ಇಲ್ಲದ ಮಾಂಸ, ಮಶ್ರೂಮ್ ಅನ್ನು ರೆಫ್ರಿಜರೇಟರ್ ನಲ್ಲಿ ಇಡಲಾಗಿತ್ತು. ಈ ಹಿನ್ನಲೆಯಲ್ಲಿ ಎರಡೂ ಹೋಟೆಲ್ ಗಳನ್ನು ತಾತ್ಕಾಲಿಕವಾಗಿ ಮುಚ್ಚುವಂತೆ ಆದೇಶಿಸಿದರು.

ಬದನಗುಪ್ಪೆ-ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ



ಕೇನ್ಸ್ ಕಾರ್ಖಾನೆ ಹಾಗೂ ಕಲರ್ ಟೋನ್ ಉದ್ಯಮ ಸಂಸ್ಥೆಯಲ್ಲಿ ಕಾರ್ಮಿಕರು ಮತ್ತು ಸಿಬ್ಬಂದಿಗಾಗಿ ತಯಾರಿಸಲಾದ ಆಹಾರ ಮತ್ತು ಗುಣಮಟ್ಟವನ್ನು ವೀಕ್ಷಿಸಿದರು. ಇಲ್ಲಿಯೂ ಊಟ ಉಪಹಾರ ಇನ್ನಿತರ ತಿನಿಸುಗಳ ತಯಾರಿಕೆಗಾಗಿ ಸಂಗ್ರಹಿಸಲಾಗಿದ್ದ ದಿನಸಿ ಪದಾರ್ಥಗಳನ್ನು ಪರಿಶೀಲಿಸಿದರು. ಉತ್ತಮ ಗುಣಮಟ್ಟ ಕಾಪಾಡಿಕೊಳ್ಳಬೇಕು. ಸ್ವಚ್ಚತೆ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಜಿಲ್ಲಾಧಿಕಾರಿಗಳು ಹಾಗೂ ಉಪವಿಭಾಗಾಧಿಕಾರಿಗಳು ನಿರ್ದೇಶನ ನೀಡಿದರು.

ಬದನಗುಪ್ಪೆ ಮುಖ್ಯ ರಸ್ತೆಯಲ್ಲಿರುವ ರಾಜಸ್ಥಾನಿ ಹೋಟೆಲ್ಗೆ ಭೇಟಿ ನೀಡಿ ಅಡುಗೆ ಮನೆ ಆಹಾರ ಧಾನ್ಯಗಳ ಸಂಗ್ರಹಣೆ ಹಾಗೂ ಆಹಾರ ಸುರಕ್ಷತೆಗೆ ವಹಿಸಿರುವ ಕ್ರಮಗಳನ್ನು ಪರಿಶೀಲಿಸಿದರು. ಹೋಟೆಲ್ನಲ್ಲಿ ಸ್ವಚ್ಚತೆ ಇರಬೇಕು. ಗ್ರಾಹಕರಿಗೆ ಉತ್ತಮ ಗುಣಮಟ್ಟದ ಪದಾರ್ಥಗಳನ್ನು ಬಳಸಿ ಶುದ್ದ ಆಹಾರ ತಯಾರಿಸಬೇಕು. ಬೇಕರಿಗಳಲ್ಲಿ ತಾಜಾ ಹಾಗೂ ಬಿಸಿಯಾಗಿ ತಯಾರಿಸಿದ ತಿನಿಸುಗಳನ್ನು ಮಾರಾಟ ಮಾಡಬೇಕು ಎಂದು ಜಿಲ್ಲಾಧಿಕಾರಿ ಶ್ರೀರೂಪ ಅವರು ತಾಕೀತು ಮಾಡಿದರು.

ಜಿಲ್ಲಾ ವ್ಯಾಪ್ತಿಗೆ ಬರುವ ಚಾಮರಾಜನಗರ-ನಂಜನಗೂಡು ಹೆದ್ದಾರಿಯಲ್ಲಿರುವ ವಿವಿಧ ರೆಸ್ಟೋರೆಂಟ್ ಹೋಟೆಲ್ಗಳಿಗೂ ಸಹ ಭೇಟಿ ಕೊಟ್ಟು ವ್ಯಾಪಕವಾಗಿ ಪರಿಶೀಲಿಸಿ ಅಗತ್ಯ ಸೂಚನೆಗಳನ್ನು ನೀಡಿದರು.

ಭೇಟಿಯ ವೇಳೆ ಕಂದಾಯ ಇಲಾಖೆ ಅಧಿಕಾರಿಗಳು ಇದ್ದರು.

### ಕೋಡಿಉಗನೆ ಹಾಲು ಉತ್ಪಾದಕರ ಸಹಕಾರ ಸಂಘದ ಪ್ರಥಮ ವಾರ್ಷಿಕ ಸಭೆ:

# ಒಂದು ವರ್ಷದಲ್ಲೇ 62.08 ಲಕ್ಷ ವಹಿವಾಟು, 4.76 ಲಕ್ಷ ನಿವ್ವಳ ಲಾಭ

**ಚಾಮರಾಜನಗರ:** ಹಸುಗಳಿಗೆ ಮೇವು ನೀಡುವ ಮೂಲಕ ಕೋಡಿಉಗನೆ ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತದ 2025-26ನೇ ಸಾಲಿನ ಪ್ರಥಮ ವಾರ್ಷಿಕ ಸಾಮಾನ್ಯ ಸಭೆಯನ್ನು ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಉದ್ಘಾಟಿಸಲಾಯಿತು.

ಸಂಘದ ಮುಖ್ಯ ಕಾರ್ಯನಿರ್ವಾಹಕ ವಿನೋದನ್ ಪ್ರಶಾಂತ್ ಅವರು 2025-26ನೇ ಸಾಲಿನ ಆಡಿಟ್ ವರದಿ ಮಂಡಿಸಿ, ಅನುಮೋದನೆ ಪಡೆದರು.

**ಒಂದು ವರ್ಷದ ಸಾಧನೆ:** ಕೇವಲ ಒಂದು ವರ್ಷದಲ್ಲಿ ಸಂಘವು 62.08 ಲಕ್ಷ ರೂ.ಗಳ ಹಾಲು ಖರೀದಿ ಮಾಡಿದೆ. 4.76 ಲಕ್ಷ ರೂ. ನಿವ್ವಳ ಲಾಭ ಗಳಿಸಿದ್ದು, ಸದಸ್ಯರಿಗೆ 2.24 ಲಕ್ಷ ರೂ. ಬೋನಸ್ ವಿತರಿಸಲಾಗುತ್ತದೆ. ಇದು ನಿಮ್ಮ ಒಗ್ಗಟ್ಟು ಮತ್ತು ಪಾರದರ್ಶಕತೆಯನ್ನು ತೋರಿಸುತ್ತದೆ ಎಂದು ಅವರು ತಿಳಿಸಿದರು.

ನಿರ್ದೇಶಕ ಎಚ್.ಎಸ್. ಬಸವರಾಜು (ಚಾಮುಲ್ ಕುದೇರು) ಮಾತನಾಡಿ ಕೇವಲ ಒಂದೇ ವರ್ಷದಲ್ಲಿ ಇಷ್ಟು ಲಾಭ ಪಡೆದಿರುವ ಈ ಉತ್ಪಾದಕರ ಸಂಘ ಸಂಘಟಿಸಿರುವುದು ಹೆಮ್ಮೆ ಪಡುವಂತಹ ವಿಷಯ. ಈ ಹಿಂದೆ ಈ ಗ್ರಾಮದ ರೈತರು ನೆರೆ ಗ್ರಾಮಕ್ಕೆ ಹೋಗಿ ಹಾಲು ಹಾಕಬೇಕಾಗಿತ್ತು. ಆದರೆ ಇದೀಗ ನಿಮ್ಮ ಗ್ರಾಮದಲ್ಲೇ ಸಂಘ ಇರುವುದರಿಂದ ಇನ್ನು ಹೆಚ್ಚಿನ ಉತ್ಪಾದನೆಗೆ ಅವಕಾಶವಾಗಿದೆ. ರಾಜ್ಯದಲ್ಲಿ 16 ಒಕ್ಕೂಟಗಳಿವೆ. ರೈತರಿಗೆ ಅನುಕೂಲವಾಗುವ ಉಪಕರಣಗಳನ್ನು ಸಹಾಯಧನದಲ್ಲಿ ನೀಡಲಾಗುತ್ತಿದೆ. ಹಾಲಿಗೆ ಪ್ರೋತ್ಸಾಹಧನ ಮತ್ತು ಹೆಚ್ಚಿನ ದರ ನೀಡಲು ಕ್ರಮ ವಹಿಸಲಾಗುವುದು. ಗುಣಮಟ್ಟದ ಹಾಲನ್ನು ಪೂರೈಸಿ ಎಂದರು.

ನಾಮನಿರ್ದೇಶಕ ಕೆ.ಕೆ.ರೇವಣ್ಣ ಮಾತನಾಡಿ, ಗುಣಮಟ್ಟದ ಹಾಲು ಪೂರೈಸಿ, ನಿರುದ್ಯೋಗ ಸಮಸ್ಯೆ ನಿವಾರಿಸಲು ಹೈನುಗಾರಿಕೆಯನ್ನು ಅವಲಂಬಿಸಬೇಕು. ವಿಮೆ ಮಾಡಿಸಬೇಕು. ಈ ಸಂಘಕ್ಕೆ ಇನ್ನು ಹೆಚ್ಚಿನ ಲಾಭ ಬರಲಿ. ನನ್ನ ಅನುದಾನದಲ್ಲಿ ಸ್ವಂತ ಕಟ್ಟಡಕ್ಕೆ ಹಣ ನೀಡುತ್ತೇನೆ ಎಂದು ಭರವಸೆ ನೀಡಿದರು.

ವ್ಯವಸ್ಥಾಪಕ ನಿರ್ದೇಶಕ ರಾಜಕುಮಾರ್ ಕೆ ಮಾತನಾಡಿ, ಸಂಘಗಳು ಲಾಭದಾಯಕವಾಗಿ ಸಾಗಲು ಪಾರದರ್ಶಕತೆ ಮತ್ತು ಒಗ್ಗಟ್ಟು ಮುಖ್ಯ.



ಮುಂದೆ ಒಕ್ಕೂಟದಿಂದ ರಬ್ಬರ್ ಮ್ಯಾಟ್, ಹಾಲು ಕರೆಯುವ ಯಂತ್ರ, ಮೇವು ಕಟಾವು ಯಂತ್ರ ಎಲ್ಲವನ್ನೂ ಸಹಾಯಧನದಲ್ಲಿ ನೀಡಲಾಗುವುದು. ನಮ್ಮ ಜಿಲ್ಲೆಯ ಹಾಲು ಹೊರ ರಾಜ್ಯ ಮತ್ತು ಸೈನಿಕರಿಗೂ ಸರಬರಾಜಾಗುತ್ತಿದೆ. ಆದ್ದರಿಂದ ಚಾಮುಲ್ ಒಕ್ಕೂಟ ಲಾಭದಾಯಕವಾಗಿ ನಡೆಯುತ್ತಿದೆ. ಜೊತೆಗೆ ಇಲಾಖೆಯಿಂದ ಬರುವ ಸವಲತ್ತುಗಳು ಮತ್ತು ಹಸುಗಳ ಆರೋಗ್ಯದ ಬಗ್ಗೆ ಮಾಹಿತಿ ನೀಡಿದರು. ಜಿಲ್ಲಾಡಳಿತದೊಂದಿಗೆ ಚರ್ಚಿಸಿ ಸ್ವಂತ ಕಟ್ಟಡಕ್ಕೆ ಜಾಗ ಕೊಡಿಸಲು ಪ್ರಯತ್ನಿಸಲಾಗುವುದು ಎಂದರು.

ಸಾಹಿತಿ ಮಂಜು ಕೋಡಿಉಗನೆ ಮಾತನಾಡಿ, ಸಹಕಾರ ಸಂಘ ಮಾಡಿರುವುದು ರೈತರ ಉಪಯೋಗಕ್ಕೆ ಮಾತ್ರ. ಸರ್ಕಾರದ ಸವಲತ್ತುಗಳನ್ನು ಬಳಸಿಕೊಳ್ಳಿ. ಈ ಹಿಂದೆ ಸಾಂಪ್ರದಾಯಿಕವಾಗಿ ಹಸುಗಳನ್ನು ಸಾಕುತ್ತಿದ್ದೆವು. ಆದರೆ ಈಗ ವೈಜ್ಞಾನಿಕವಾಗಿ ವಿಷಯ ತಿಳಿದು ಹೈನುಗಾರಿಕೆಗೆ ಬೇಕಾಗುವ ಎಲ್ಲಾ ಸವಲತ್ತುಗಳನ್ನು ಪಡೆದು ಆರ್ಥಿಕವಾಗಿ ಸದೃಢರಾಗಬೇಕು ಎಂದರು.

ಅಧ್ಯಕ್ಷ ಶ್ರೀಕಂಠಸ್ವಾಮಿ ಮಾತನಾಡಿ, 48 ವರ್ಷಗಳ ಕಾಲ ನಾವು ನೆರೆ ಗ್ರಾಮಕ್ಕೆ ಹೋಗಬೇಕಿತ್ತು. ಮಾಹಿತಿ ಕೊರತೆಯಿಂದ ಇಲ್ಲಿಯವರೆಗೆ ಸಹಕಾರ ಸಂಘ ಮಾಡಲು ಸಾಧ್ಯವಾಗಿರಲಿಲ್ಲ. ನಿಮ್ಮೆಲ್ಲರ ಸಹಕಾರದಿಂದ ಈಗ ಸಂಘ ಮಾಡಿದ್ದೇವೆ. ತುಂಬಾ ಅಚ್ಚುಕಟ್ಟಾಗಿ ಪಾರದರ್ಶಕವಾಗಿ ನಡೆಯುತ್ತಿದೆ. ಕೇವಲ ಒಂದೇ ವಾರದಲ್ಲಿ ಗರಿಷ್ಠ ಮಟ್ಟದ ಸದಸ್ಯತ್ವ ಆದ ಕಾರಣ ಬೇಗನೆ ಸಂಘವಾಯಿತು. ಏನೇ ಇದ್ದರೂ ಒಗ್ಗಟ್ಟಿನಿಂದ ಸಲಹೆ ಸೂಚನೆ ನೀಡಿ ಪಾರದರ್ಶಕತೆಯಿಂದ ಸಾಗೋಣ. ಹೈನುಗಾರಿಕೆಯಿಂದ ನಿಮ್ಮೆಲ್ಲರ ಜೀವನ ಸುಖವಾಗಿ ಸಾಗಲಿ ಎಂದು ಹಾರೈಸಿದರು.

ರೈತರ ಮನವಿ:ಸಭೆಯಲ್ಲಿ ರೈತ ಅಲೋಕ್ ಅವರು ಮೇವಿನ ಹಗರಣ, ವಿಮೆ ಬಗ್ಗೆ, ವೈದ್ಯರನ್ನು ಸರಿಯಾದ ಸಮಯಕ್ಕೆ ಕಳುಹಿಸಿ ಎಂದು ಮನವಿ ಮಾಡಿದರು. ರೈತ ರಾಘು ಅವರು ಹಿಂದೆ ಇದ್ದ ಒಕ್ಕೂಟದ ಲಾಭಾಂಶವನ್ನು ನಮ್ಮ ಗ್ರಾಮಕ್ಕೂ ಕೊಡಿ, ಬರ ಇರುವ ಕಾರಣ ಮೇವನ್ನು ಒದಗಿಸಿ, ಜಂತುಹುಳು ನಿವಾರಣೆ ಲಸಿಕೆ ಕೊಡಿ, ಪಶು ಆಹಾರವನ್ನು ಗುಣಮಟ್ಟದಲ್ಲಿ ಕೊಡಿ ಎಂದು ಒತ್ತಾಯಿಸಿದರು.

ಕಾರ್ಯಕ್ರಮದ ಕೊನೆಯಲ್ಲಿ ಅತಿ ಹೆಚ್ಚು ಹಾಲು ಪೂರೈಸಿದ ರೈತರಿಗೆ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಡಾ.ಅಮರ್, ಶರತ್, ಶ್ಯಾಮ್ ಸುಂದರ್ ಹೆಚ್.ಪಿ, ಭಾಗ್ಯರಾಜ್ ಪಿ.ಎಂ, ಕಾಂತರಾಜು, ಮನೋಜ್, ಸತೀಶ್, ಉಪಾಧ್ಯಕ್ಷ ಪಿ.ಮಹೇಶ್, ನಿರ್ದೇಶಕರುಗಳು,ಹಾಲು ಉತ್ಪಾದಕರು,ಕೋಡಿಉಗನೆ ಮತ್ತು ಬೇವಿನತಾಳಪುರದ ಯಜಮಾನರುಗಳು, ಮುಖಂಡರು, ರೈತರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.

## ಸಾಕ್ಷರತಾ ದಿನಾಚರಣೆ , ನವ ಸಾಕ್ಷರರಿಗೆ ಸನ್ಮಾನ

**ಮಡಿಕೇರಿ:** ಕುಶಾಲನಗರದ ಪಿ.ಎಂ.ಶ್ರೀ ಶಾಲೆಯಲ್ಲಿ ಅಂತಾರಾಷ್ಟ್ರೀಯ ಸಾಕ್ಷರತಾ ದಿನಾಚರಣೆ ಹಾಗೂ ನವ ಸಾಕ್ಷರರಿಗೆ ಸನ್ಮಾನ ಕಾರ್ಯಕ್ರಮವು ಮಂಗಳವಾರ ನಡೆಯಿತು.

ಜಿಲ್ಲಾ ಸಾಕ್ಷರತಾ ನೋಡಲ್ ಅಧಿಕಾರಿ ಡಾ.ಹೇಮಂತ್ ರಾಜ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ರಾಜ್ಯದಲ್ಲಿ ಕೊಡಗು ಜಿಲ್ಲೆಯು ಶೇ.93 ಸಾಕ್ಷರತೆ ಸಾಧಿಸಿರುವುದು ಹೆಮ್ಮೆಯ ಸಂಗತಿಯಾಗಿದೆ ಹಾಗೂ ಕೆಲವೇ ದಿನಗಳಲ್ಲಿ ಕೊಡಗು ಜಿಲ್ಲೆಯನ್ನು 'ಸಂಪೂರ್ಣ ಸಾಕ್ಷರತಾ ಜಿಲ್ಲೆ' ಎಂದು ಘೋಷಿಸಲಾಗುವುದು ಎಂದರು.

ಡಯಟ್ ಉಪ ನಿರ್ದೇಶಕರು(ಅಭಿವೃದ್ಧಿ) ರಾಮ ಚಂದ್ರೇರಾಜೇ ಅರಸ್ ಅವರು ಶಾಲೆಯಲ್ಲಿ ಪಿ.ಎಂಶ್ರೀ ದ್ವಿಭಾಷಾ ಚಟುವಟಿಕೆಗಳ ಕೊಠಡಿ ಉದ್ಘಾಟಿಸಿ ಮಾತನಾಡಿ, ಬಹಳ ದಿನಗಳಿಂದ ಈ ಶಾಲೆಯ ಮುಖ್ಯ ಶಿಕ್ಷಕರು ಮತ್ತು ಸಹಶಿಕ್ಷಕರ ಪರಿಶ್ರಮದಿಂದ ಕೊಠಡಿ ನಿರ್ಮಾಣವಾಗಿದೆ ಎಂದರು.

15 ವರ್ಷ ಪೂರ್ಣಗೊಂಡ ಅಕ್ಷರಸ್ಥರಲ್ಲದವರು ಮುಖ್ಯವಾಹಿನಿಗೆ ಬರಬೇಕೆಂಬುದೇ ಮುಖ್ಯ ಆಶಯವಾಗಿದೆ. ಈ ಕಾರ್ಯಕ್ರಮ ಸಂಪೂರ್ಣ ಯಶಸ್ವಿಯಾಗಬೇಕಾದರೆ ಬಿ.ಆರ್.ಸಿ, ಬಿ.ಆರ್.ಪಿ ಹಾಗೂ ಸಿಆರ್‌ಪಿ ಗಳ ಪರಿಶ್ರಮ ಶ್ಲಾಘಿಸಿದರು.

ನವಸಾಕ್ಷರರು ಕೇವಲ ಸಹಿ ಮಾಡಲು ಕಲಿತರೆ ಸಾಲದು. ದೇಶದ ಅಭಿವೃದ್ಧಿಗೆ ನೆರವಾಗುವ ಶಿಕ್ಷಣ ಪಡೆಯಬೇಕು ಎಂದು ಸಲಹೆ ಮಾಡಿದರು.

ಸಾಕ್ಷರತರು ಸಾಧನೆ ಮಾಡುವುದರ ಜೊತೆಗೆ ಅವರನ್ನು ಒಂದೆಡೆ ಸೇರಿಸಿ ಅವರನ್ನು ಮುಖ್ಯವಾಹಿನಿಗೆ ತರುವುದೇ ಒಂದು ದೊಡ್ಡ ಸಾಹಸ ಎಂದು ಅಭಿಪ್ರಾಪಟ್ಟರು. 'ಜನರು ಸಾಕ್ಷರತರಾಗಬೇಕು, ಬಾಳಿಗೆ ಬೆಳಕಾಗಬೇಕು ಎಂದು ತಿಳಿಸಿದರು.

ಸಾಕ್ಷರತರ ಪಠ್ಯಪುಸ್ತಕ ಬಾಳಿಗೆ ಬೆಳಕು ಮತ್ತು ಸವಿ ಬರಹ ಎಂಬ ಎರಡು ಪುಸ್ತಕಗಳನ್ನು ಹೊಂದಿರುತ್ತದೆ. ಕರ್ನಾಟಕದ ಸಾಕ್ಷರತೆ ಶೇ.54 ರಿಂದ ಪ್ರಾರಂಭವಾಗಿ ಈಗ ಶೇ.75 ಕ್ಕೆ ತಲುಪಿದ್ದೇವೆ. ಅದರಲ್ಲಿ ಕೊಡಗು ಶೇ.93 ರಷ್ಟು ಸಾಧಿಸಿದ್ದೇವೆ ಎಂದು ಅವರು ತಿಳಿಸಿದರು.

ಸೋಮವಾರಪೇಟೆ ಕ್ಷೇತ್ರ ಶಿಕ್ಷಣಾಧಿಕಾರಿ ಕೃಷ್ಣಪ್ಪ ಅವರು ಮಾತನಾಡಿ ಜರ್ಮನಿ, ಅಮೆರಿಕ, ಇಂಗ್ಲೆಂಡ್ ದೇಶಗಳಲ್ಲಿ ನೂರಕ್ಕೆ ನೂರರಷ್ಟು ಸಾಕ್ಷರತೆ ಸಾಧಿಸಿದ್ದಾರೆ. ಸಾಕ್ಷರತೆ ಸಾಧಿಸಿರುವ ಈ ಎಲ್ಲಾ ದೇಶಗಳಲ್ಲಿ ಮಹಿಳೆಯರು ಮೇಲುಗೈ ಸಾಧಿಸಿದ್ದಾರೆ ಎಂದು ತಿಳಿಸಿದರು.

1988 ರಲ್ಲಿ ಮೊಟ್ಟ ಮೊದಲಿಗೆ ಸಾಕ್ಷರತೆ ಕಾರ್ಯಕ್ರಮ ಪ್ರಾರಂಭವಾಯಿತು. ಹತ್ತು ಹಲವಾರು ದೇಶಗಳ ಸಾಕ್ಷರತಾ ಪ್ರಮಾಣ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದ ಸಹಾಯಕರಾದ ರವಿಶಂಕರ್ ಅವರು ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ಮೂರು ತಾಲ್ಲೂಕುಗಳ ನವ ಸಾಕ್ಷರತರಿಗೆ ಸನ್ಮಾನಿಸಲಾಯಿತು. ವಿಭಾಗ ಮಟ್ಟದಲ್ಲಿ ಅಧಿಕಾರಿಗಳ ಸಭೆಯಲ್ಲಿ ನಂಜರಾಯಪಟ್ಟಣ ಕ್ಲಸ್ಟರ್‌ನ ನೆಲ್ಲಿಹುದಿಕೇರಿ ಪ್ರಧಾನ ಮುಖ್ಯ ಶಿಕ್ಷಕರಾದ ಆಶಾ ಅವರನ್ನು ಪ್ರಶಂಸಿದರು. ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕರಾದ ಮಹೇಶ್ ಅವರು ಮಾತನಾಡಿ ಯೂನಿಸೆಫ್‌ನ 14ನೇ ಮಹಾಸಭೆಯಲ್ಲಿ ದೇಶ ಸಾಕ್ಷರತೆ ಸಾಧಿಸುವುದು ಅತಿಮುಖ್ಯ ಎಂದು ಒತ್ತಿ ಹೇಳಲಾಗಿದೆ ಎಂದರು.

ಸಾಕ್ಷರತೆ ಪ್ರತಿಯೊಬ್ಬರ ಹಕ್ಕು. ಶಿಕ್ಷಣ ಪ್ರತಿಯೊಬ್ಬರ ಶಕ್ತಿ, ಆದ್ದರಿಂದ ದೇಶ ಅಭಿವೃದ್ಧಿ ಸಾಧಿಸಬೇಕಾದರೆ ಸಾಕ್ಷರತೆ ಸಾಧಿಸಬೇಕು ಎಂದು ತಿಳಿಸಿದರು.

## ಕುಶಲಕರ್ಮಿಗಳಿಗೆ ಸ್ವಯಂ ಉದ್ಯೋಗಕ್ಕೆ ವಿಶ್ವಕರ್ಮ ಯೋಜನೆ ಆಸರೆ: ಜಿಲ್ಲಾಧಿಕಾರಿ

**ಮಂಡ್ಯ:** ಸಾಂಪ್ರದಾಯಿಕವಾಗಿ ವಿವಿಧ ವೃತ್ತಿಗಳನ್ನು ಅವಲಂಬಿಸಿರುವ 18 ವರ್ಗಗಳ ಕುಶಲಕರ್ಮಿಗಳು ಹಾಗೂ ವೃತ್ತಿದಾರರನ್ನು ಪ್ರೋತ್ಸಾಹಿಸಿ, ಅವರ ಕೌಶಲ್ಯವನ್ನು ಮತ್ತಷ್ಟು ಅಭಿವೃದ್ಧಿಪಡಿಸುವುದರೊಂದಿಗೆ ಜೀವನಮಟ್ಟ ಸುಧಾರಿಸುವ ಉದ್ದೇಶದಿಂದ ಪ್ರಧಾನಮಂತ್ರಿ ವಿಶ್ವಕರ್ಮ ಯೋಜನೆ ಜಾರಿಗೊಳಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಕುಮಾರ್ ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲಾಧಿಕಾರಿ ಡಾ. ಕುಮಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಪ್ರಧಾನಮಂತ್ರಿ ವಿಶ್ವಕರ್ಮ (PM-VISHWAKARMA) ಯೋಜನೆಯ ಜಿಲ್ಲಾ ಮಟ್ಟದ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು.

ಯೋಜನೆಯಡಿ 18 ಸಾಂಪ್ರದಾಯಿಕ ವೃತ್ತಿಗಳಿಗೆ ಸೇರಿದ ಕುಶಲಕರ್ಮಿಗಳಿಗೆ ಅಗತ್ಯ ಕೌಶಲ್ಯ ತರಬೇತಿ ನೀಡಲಾಗುತ್ತಿದೆ. ಆಧುನಿಕ ತಂತ್ರಜ್ಞಾನ ಹಾಗೂ ಉಪಕರಣಗಳ ಬಳಕೆಯ ಕುರಿತು ಅರಿವು ಮೂಡಿಸಲಾಗುತ್ತಿದ್ದು, ತರಬೇತಿ ಪೂರ್ಣಗೊಳಿಸಿದ ಅರ್ಹ ಫಲಾನುಭವಿಗಳಿಗೆ ಪ್ರಮಾಣಪತ್ರ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಒದಗಿಸುವ ಮೂಲಕ ಅವರ ವೃತ್ತಿ ಕೌಶಲ್ಯವನ್ನು ಮತ್ತಷ್ಟು ಬಲಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಕುಶಲಕರ್ಮಿಗಳು ತಮ್ಮ ವೃತ್ತಿಯನ್ನು ವಿಸ್ತರಿಸಿ ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲವಾಗುವಂತೆ ಬ್ಯಾಂಕ್‌ಗಳ ಮೂಲಕ ಸಾಲ ಸೌಲಭ್ಯ ಒದಗಿಸುವುದು ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಅರ್ಹ ಫಲಾನುಭವಿಗಳಿಗೆ ಸಕಾಲದಲ್ಲಿ ಸಾಲ ಮಂಜೂರಾಗುವಂತೆ ಸಂಬಂಧಪಟ್ಟ ಇಲಾಖೆಗಳು ಹಾಗೂ ಬ್ಯಾಂಕ್‌ಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರದ ಅಧಿಕಾರಿ ದಿನೇಶ್, ವಿವಿಧ ಬ್ಯಾಂಕ್‌ಗಳ ಪ್ರತಿನಿಧಿಗಳು ಹಾಗೂ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.



## ಹೈನುಗಾರಿಕೆಯಿಂದ ರೈತರ ಬದುಕಿಗೆ ಆರ್ಥಿಕ ಭದ್ರತೆ

### ನೇರವಾಗಿ ಡೈರಿಗೆ ಹಾಲು ಪೂರೈಸುವುದರಿಂದ ಹಲವು ಅನುಕೂಲ: ಆರ್. ನಂಜುಂಡಸ್ವಾಮಿ

**ಚಾಮರಾಜನಗರ:** ಹೈನುಗಾರಿಕೆಯಿಂದ ಗ್ರಾಮೀಣ ಭಾಗದ ರೈತರ ಬದುಕಿಗೆ ದಾರಿಯಾಗಿದೆ, ಹಾಲನ್ನು ನೇರವಾಗಿ ಹಾಲಿನ ಡೈರಿಗೆ ನೀಡುವುದರಿಂದ ರೈತರಿಗೆ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಲವು ಪ್ರಮುಖ ಅನುಕೂಲಗಳು ದೊರೆಯುತ್ತವೆ ಎಂದು ಚಾಮುಲ್ ಮಾರ್ಗ ವಿಸ್ತರಣಾಧಿಕಾರಿ ಆರ್ ನಂಜುಂಡಸ್ವಾಮಿ ತಿಳಿಸಿದರು.

ನಗರದ ಸೋಮವಾರ ಪೇಟೆ ವಾಟಾಳ್ ಬಡಾವಣೆಯಲ್ಲಿ ಇರುವ ಸೋಮವಾರಪೇಟೆ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿಯಮಿತದ 2025-2026ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಅವರು ಚಾಮುಲ್ನಿಂದ ಹಾಲು ಉತ್ಪಾದಕರಿಗೆ ಸಿಗುವ ಸೌಲಭ್ಯಗಳ ಬಗ್ಗೆ ವಿವರಿಸಿದರು.

ಡೈರಿಗಳಲ್ಲಿ ವಾರಕ್ಕೊಮ್ಮೆ ಅಥವಾ ಹದಿನೈದು ದಿನಗಳಿಗೊಮ್ಮೆ ನೇರವಾಗಿ ರೈತರ ಬ್ಯಾಂಕ್ ಖಾತೆಗೆ ಹಣ ಜಮೆಯಾಗುತ್ತದೆ. ಇದು ಕೃಷಿ ಖರ್ಚು ಮತ್ತು ದಿನನಿತ್ಯದ ನಿರ್ವಹಣೆಗೆ ನಿಶ್ಚಿತ ಆದಾಯದ ಮೂಲ ಒದಗಿಸುತ್ತದೆ. ಗುಣಮಟ್ಟಕ್ಕೆ ತಕ್ಕ ಬೆಲೆ: ಹಾಲಿನ ಕೊಬ್ಬಿನಾಂಶ ಮತ್ತು ಎಸ್‌ಎನ್‌ಎಫ್ ಆಧಾರದ ಮೇಲೆ ವೈಜ್ಞಾನಿಕವಾಗಿ ಬೆಲೆ ನಿಗದಿಪಡಿಸುವುದರಿಂದ ಗುಣಮಟ್ಟದ ಹಾಲಿಗೆ ನ್ಯಾಯಯುತ ಬೆಲೆ ಸಿಗುತ್ತದೆ. ಮಧ್ಯವರ್ತಿಗಳ ಹಾವಳಿ ತಪ್ಪುತ್ತದೆ ಎಂದು ಹೇಳಿದರು.

ಸಂಘಗಳ ಮೂಲಕ ಗುಣಮಟ್ಟದ ಹಿಂಡಿ, ಬೂಸ ಮತ್ತು ಸಮತೋಲಿತ ಪಶು



ಆಹಾರಗಳು ಮಾರುಕಟ್ಟೆಗಿಂತ ಕಡಿಮೆ ದರದಲ್ಲಿ ಸಿಗುತ್ತವೆ. ಜಾನುವಾರುಗಳಿಗೆ ಲಸಿಕೆ, ಕೃತಕ ಗರ್ಭಧಾರಣೆ, ಸಾಮಾನ್ಯ ಕಾಯಿಲೆಗಳಿಗೆ ಉಚಿತ ಅಥವಾ ಅತ್ಯಂತ ಕಡಿಮೆ ಶುಲ್ಕದಲ್ಲಿ ತುರ್ತು ವೈದ್ಯಕೀಯ ಚಿಕಿತ್ಸೆ ಲಭ್ಯವಾಗುತ್ತದೆ. ಡೈರಿಗಳು ಲಾಭ ಗಳಿಸಿದಾಗ ವರ್ಷದ ಕೊನೆಯಲ್ಲಿ ಸದಸ್ಯ ರೈತರಿಗೆ ಬೋನಸ್ ಮತ್ತು ಷೇರು ಲಾಭಾಂಶವನ್ನು ನೀಡುತ್ತದೆ ಹಾಗೂ ಜಾನುವಾರು ವಿಮೆ ಸೌಲಭ್ಯ ಹಾಗೂ ಸುಲಭ ಕಂತುಗಳಲ್ಲಿ ಹಸು/ಎಮ್ಮೆ ಖರೀದಿಸಲು ಡೈರಿ ಮೂಲಕ ಸಾಲ ಸೌಲಭ್ಯ ಪಡೆಯಲು ಸಾಧ್ಯವಾಗುತ್ತದೆ. ಹಾಲು ಒಕ್ಕೂಟಗಳು ರೈತರು ಹಾಗೂ ಅವರ ಕುಟುಂಬಕ್ಕೆ ಆರೋಗ್ಯ ವಿಮೆ ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಧನವನ್ನು ನೀಡುತ್ತವೆ.

ಈ ಎಲ್ಲ ಸೌಲಭ್ಯಗಳು ರೈತರಿಗೆ ಕೃಷಿಯ ಜೊತೆಗೆ ಹೈನುಗಾರಿಕೆಯನ್ನು ಲಾಭದಾಯಕ ಉಪಕಸುಬನ್ನಾಗಿ ಮುನ್ನಡೆಸಲು ಭದ್ರತೆ ನೀಡುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಜ್ಯೋತಿಬೆಳಗಿಸಿಸುವ ಮೂಲಕ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಅಧ್ಯಕ್ಷರಾದ ಮಮತ ನೆರವೇರಿಸಿದರು.

ವೇದಿಕೆಯಲ್ಲಿ ಸೋಮವಾರಪೇಟೆ ಗ್ರಾಮಸ್ಥರಾದ ಎಸ್.ಪಿ.ರಾಜಪ್ಪ, ವೃಷಬೇಂದ್ರಸ್ವಾಮಿ, ಪುಟ್ಟರಾಜಯ್ಯ, ಹಾಗೂ ಇನ್ನಿತರರು ಇದ್ದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ರಾಜಮ್ಮ, ನಿರ್ದೇಶಕರುಗಳಾದ ನೀಲಮ್ಮ, ಇಂದ್ರಮ್ಮ, ಸಾಕಮ್ಮ, ಟಿ.ಎಂ.ಮಲ್ಲಿಕಾ, ನೀಲಮಣಿ, ಸೌಮ್ಯ, ರೂಪ, ಮೇಘ, ಮುಖ್ಯ ಕಾರ್ಯನಿರ್ವಾಹಕರಾದ ರತ್ನಮ್ಮ, ಹಾಲು ಪರಿಕ್ಷಕರಾದ ನೀಲಮ್ಮ ಉಪಸ್ಥಿತರಿದ್ದರು.

# ಬನ್ನಿ ನಾವೂ ಸಾಕ್ಷರರಾಗೋಣ



| ಡಾ. ಪ್ರಸನ್ನ ದೇವರ ಮಠ ಅನಿಲಕುಮಾರ್, ಮಾಗಳ

ಜ್ಞಾನವು ಮಾನವನ ಮೂಲಭೂತ ಹಕ್ಕು ಹಾಗೂ ಸ್ವಾಭಿಮಾನದ ಬದುಕಿಗೆ ಭದ್ರ ಬುನಾದಿ. ಕೇವಲ ಅಕ್ಷರ ಕಲಿಯುವುದು ಮಾತ್ರವಲ್ಲದೆ, ವ್ಯಕ್ತಿ ತನ್ನ ಸಮಾಜ, ಪರಿಸರ ಮತ್ತು ಆರ್ಥಿಕತೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಸಾಕ್ಷರತೆ ಅನಿವಾರ್ಯ ಸಾಧನವಾಗಿದೆ.

**ಆರಂಭಿಕ ಹೆಜ್ಜೆ (1965):** ಇರಾನ್‌ನ ರಾಜಧಾನಿ ತೆಹ್ರಾನ್‌ನಲ್ಲಿ 1965 ರ ಸೆಪ್ಟೆಂಬರ್‌ನಲ್ಲಿ ನಿರಕ್ಷರತೆಯ ನಿರ್ಮೂಲನೆ ಕುರಿತು ಶಿಕ್ಷಣ ಸಚಿವರ ಜಾಗತಿಕ ಸಮ್ಮೇಳನ ನಡೆಯಿತು. ಇಲ್ಲಿ ಸಾಕ್ಷರತೆಯನ್ನು ಕೇವಲ ವೈಯಕ್ತಿಕ ಬೆಳವಣಿಗೆಯಾಗಿ ನೋಡದೆ, ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ಮೂಲಾಧಾರವಾಗಿ ಪರಿಗಣಿಸಲಾಯಿತು.

**ಯುನೆಸ್ಕೋ ಘೋಷಣೆ (1966):** ಈ ಸಮ್ಮೇಳನದ ಆಶಯವನ್ನು ಎತ್ತಿಹಿಡಿದ ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆ (UNESCO), ಅಕ್ಟೋಬರ್ 26, 1966 ರಂದು ಪ್ರತಿವರ್ಷ ಸೆಪ್ಟೆಂಬರ್ 8 ರಂದು "ವಿಶ್ವ ಸಾಕ್ಷರತಾ ದಿನ"ವನ್ನಾಗಿ ಆಚರಿಸಲು ಅಧಿಕೃತವಾಗಿ ನಿರ್ಧರಿಸಿತು.

**ಮೊದಲ ಆಚರಣೆ (1967):** ಸೆಪ್ಟೆಂಬರ್ 8, 1967 ರಂದು ಪ್ರಪಂಚದಾದ್ಯಂತ ಮೊಟ್ಟಮೊದಲ ಬಾರಿಗೆ ವಿಶ್ವ ಸಾಕ್ಷರತಾ ದಿನವನ್ನು ಆಚರಿಸಲಾಯಿತು.

ಅಂದಿನಿಂದ ಇಂದಿನವರೆಗೂ ಪ್ರತಿವರ್ಷ ಜಾಗತಿಕ ಮಟ್ಟದಲ್ಲಿ ಸಾಕ್ಷರತೆಯ ಅಗತ್ಯತೆಯನ್ನು ಜಾಗೃತಗೊಳಿಸಲು ಈ ದಿನವನ್ನು ಮೀಸಲಿಡಲಾಗಿದೆ.

ಮಹತ್ವ ಮತ್ತು 2026 ರ ಧ್ಯೇಯವಾಕ್ಯ : ಸಾಕ್ಷರತೆಯು ಬಡತನ ನಿರ್ಮೂಲನೆ, ಲಿಂಗ ಸಮಾನತೆ, ಉತ್ತಮ ಆರೋಗ್ಯ ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳನ್ನು (SDG 4) ತಲುಪಲು ಪ್ರಮುಖ ಕೊಂಡಿಯಾಗಿದೆ.



**2026 ರ ಧ್ಯೇಯವಾಕ್ಯ: ಯುನೆಸ್ಕೋ** ನಿಗದಿಪಡಿಸಿರುವ 2026 ರ ಥೀಮ್: "Literacy for People, the Planet, and Prosperity" (ಜನತೆ, ಪರಿಸರ ಮತ್ತು ಸಮೃದ್ಧಿಗಾಗಿ ಸಾಕ್ಷರತೆ).

**ಆಶಯ:** ಇಂದಿನ ಹವಾಮಾನ ಬದಲಾವಣೆ, ಆರ್ಥಿಕ ಅಸ್ಥಿರತೆ ಮತ್ತು ಡಿಜಿಟಲ್ ಕ್ರಾಂತಿಯ ಸನ್ನಿವೇಶದಲ್ಲಿ, ಮಾನವ ಸಂಪನ್ಮೂಲವನ್ನು ಭೂಮಿಯ ಸಂರಕ್ಷಣೆ ಮತ್ತು ಸುಸ್ಥಿರ ಆರ್ಥಿಕ ಬೆಳವಣಿಗೆಗೆ ಸಜ್ಜುಗೊಳಿಸುವುದು ಈ ಬಾರಿಯ ಮುಖ್ಯ ಗುರಿಯಾಗಿದೆ.

**ಸಾಕ್ಷರತೆಯನ್ನು ಅಳೆಯುವ ಮಾನದಂಡಗಳು:** ಜಾಗತಿಕವಾಗಿ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಸಾಕ್ಷರತೆಯನ್ನು ಅಳೆಯಲು ಕಾಲಕ್ಕೆ ತಕ್ಕಂತೆ ಬದಲಾದ ಮಾನದಂಡಗಳಿವೆ:

ಸಾಂಪ್ರದಾಯಿಕ ಮಾನದಂಡ (Traditional Literacy): 7 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನ ವ್ಯಕ್ತಿಯು ಯಾವುದೇ ಒಂದು ಭಾಷೆಯಲ್ಲಿ ಸರಳ ವಾಕ್ಯಗಳನ್ನು ಅರ್ಥಮಾಡಿಕೊಂಡು ಓದಲು ಮತ್ತು ಬರೆಯಲು ಶಕ್ತನಾಗಿದ್ದರೆ ಆತನನ್ನು ಸಾಕ್ಷರ ಎಂದು ಪರಿಗಣಿಸಲಾಗುತ್ತದೆ (ಉದಾಹರಣೆಗೆ: ಭಾರತದ ಜನಗಣತಿ ಮಾನದಂಡ).

ಕ್ರಿಯಾತ್ಮಕ ಸಾಕ್ಷರತೆ (Functional Literacy): ಕೇವಲ ಸಹಿ ಮಾಡುವುದಲ್ಲದೆ, ದೈನಂದಿನ ಜೀವನದಲ್ಲಿ ಬ್ಯಾಂಕಿಂಗ್ ನಮೂನೆ ಭರ್ತಿ ಮಾಡುವುದು, ಸೂಚನಾ ಫಲಕಗಳನ್ನು ಓದುವುದು ಮತ್ತು ಲೆಕ್ಕಾಚಾರಗಳನ್ನು ಗ್ರಹಿಸುವ ಸಾಮರ್ಥ್ಯ.

**ಡಿಜಿಟಲ್ ಸಾಕ್ಷರತೆ (Digital Literacy):** ಯುನೆಸ್ಕೋ ಪ್ರಸ್ತುತ ಪ್ರತಿಪಾದಿಸುತ್ತಿರುವ ಆಧುನಿಕ ಮಾನದಂಡ. ಸ್ಮಾರ್ಟ್‌ಫೋನ್, ಇಂಟರ್ನೆಟ್, ಆನ್‌ಲೈನ್ ಸೇವೆಗಳು ಹಾಗೂ ಕೃತಕ ಬುದ್ಧಿಮತ್ತೆ (AI) ಆಧಾರಿತ ಸೌಲಭ್ಯಗಳನ್ನು ಸುರಕ್ಷಿತವಾಗಿ ಬಳಸುವ ಸಾಮರ್ಥ್ಯ.

**ಜಾಗತಿಕ ಸಾಕ್ಷರತಾ ಪ್ರಮಾಣ:** ಪ್ರಮುಖ ದೇಶಗಳ ತುಲನೆ

ವಿಶ್ವಬ್ಯಾಂಕ್ ಮತ್ತು ಯುನೆಸ್ಕೋದ ಅಂಕಿಅಂಶಗಳ ಪ್ರಕಾರ, ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಬಹುತೇಕ ಶೇಕಡಾ 100ರಷ್ಟು ಸಾಕ್ಷರತೆ ಹೊಂದಿದ್ದರೆ, ಆಫ್ರಿಕಾ ಮತ್ತು ದಕ್ಷಿಣ ಏಷ್ಯಾದ ಕೆಲವು ಭಾಗಗಳಲ್ಲಿ ಸವಾಲುಗಳು ಮುಂದುವರಿದಿವೆ.

ನಾರ್ವೆ / ಫಿನ್‌ಲ್ಯಾಂಡ್ / ಜಪಾನ್ । ~99.9% । ಸಾರ್ವತ್ರಿಕ ಗುಣಮಟ್ಟದ ಶಿಕ್ಷಣ ಮತ್ತು ಉನ್ನತ ಡಿಜಿಟಲ್ ಸಾಕ್ಷರತೆ ।

। ರಷ್ಯಾ । ~99.7% । ಪ್ರಾಥಮಿಕ ಶಿಕ್ಷಣದ ಕಡ್ಡಾಯ ಜಾರಿ ।

। ಚೀನಾ । ~97.2% । ವಯಸ್ಕರ ಶಿಕ್ಷಣ ಮತ್ತು ಗ್ರಾಮೀಣ ತಂತ್ರಜ್ಞಾನ ಆಧಾರಿತ ಸಾಕ್ಷರತೆ ।

। ಬ್ರೆಜಿಲ್ । ~94.5% । ಸಾರ್ವಜನಿಕ ಶಿಕ್ಷಣದ ಮೂಲಕ ಪ್ರಗತಿ ।

। ಭಾರತ । ~78% ? 80% । ವೇಗವಾಗಿ ಸುಧಾರಿಸುತ್ತಿರುವ ರಾಷ್ಟ್ರ; ವಯಸ್ಕ ಹಾಗೂ ಡಿಜಿಟಲ್ ಶಿಕ್ಷಣಕ್ಕೆ ಒತ್ತು ।

। ನೈಜರ್ / ಚಾಡ್ (ಉಪ-ಸಹಾರಾ ಆಫ್ರಿಕಾ) । ~30% ? 40% । ಮೂಲಸೌಕರ್ಯ ಕೊರತೆ ಹಾಗೂ ಬಡತನದಿಂದಾಗಿ ಕಡಿಮೆ ಪ್ರಮಾಣ ।

2026 ರಲ್ಲಿ ಭಾರತದ ಸಾಕ್ಷರತಾ ಸ್ಥಿತಿಗತಿ: ಸ್ವಾತಂತ್ರ್ಯ ಬಂದಾಗ ಕೇವಲ 12% ನಷ್ಟಿದ್ದ ಭಾರತದ ಸಾಕ್ಷರತೆಯು ಇಂದು ಮಹತ್ತರ ಮೈಲಿಗಲ್ಲು ತಲುಪಿದೆ.

ಪ್ರಸ್ತುತ ಪ್ರಮಾಣ : 2026 ರ ವೇಳೆಗೆ ಭಾರತದ ಒಟ್ಟಾರೆ ಸಾಕ್ಷರತಾ ದರವು ಅಂದಾಜು 78% ರಿಂದ 80% ರ ಆಸುಪಾಸಿನಲ್ಲಿದೆ.

ರಾಜ್ಯವಾರು ವೈಪರೀತ್ಯಗಳು: ಕೇರಳ (~96% ಕ್ಕಿಂತ ಹೆಚ್ಚು) ಮತ್ತು ಮಿಜೋರಾಂ ರಾಜ್ಯಗಳು ಮುಂಚೂಣಿಯಲ್ಲಿದ್ದರೆ, ಬಿಹಾರ, ಜಾರ್ಖಂಡ್ ಹಾಗೂ ರಾಜಸ್ಥಾನದಂತಹ ರಾಜ್ಯಗಳಲ್ಲಿ ಸಾಕ್ಷರತಾ ಪ್ರಮಾಣವನ್ನು ಹೆಚ್ಚಿಸಲು ತೀವ್ರ ಪ್ರಯತ್ನಗಳು ನಡೆಯುತ್ತಿವೆ.

ಸರ್ಕಾರದ ಪ್ರಮುಖ ಉಪಕ್ರಮಗಳು:

* ರಾಷ್ಟ್ರೀಯ ಶಿಕ್ಷಣ ನೀತಿ **(NEP 2020):** ಪ್ರಾಥಮಿಕ ಶಿಕ್ಷಣದಲ್ಲಿ ಮಾತೃಭಾಷಾ ಕಲಿಕೆ ಹಾಗೂ ಪೂರ್ಣ ಸಾಕ್ಷರತೆ-ಸಂಖ್ಯಾಜ್ಞಾನಕ್ಕೆ **(FLN)** ಆದ್ಯತೆ.
* ಉಲ್ಲಾಸ್ **(ULLAS - Nav Bharat Saaksharta Karyakram):** 15 ವರ್ಷ ಮೇಲ್ಪಟ್ಟ ಅನಕ್ಷರಸ್ಥರನ್ನು ತಲುಪಲು ರೂಪಿಸಲಾದ ಈ ಯೋಜನೆಯು ಕೇವಲ ಅಕ್ಷರಾಭ್ಯಾಸವಲ್ಲದೆ ಡಿಜಿಟಲ್ ಹಾಗೂ ಆರ್ಥಿಕ ಸಾಕ್ಷರತೆಯನ್ನು ತಳಮಟ್ಟಕ್ಕೆ ಕೊಂಡೊಯ್ಯುತ್ತಿದೆ.

ಮುಖ್ಯ ಸವಾಲುಗಳು:

ಲಿಂಗ ತಾರತಮ್ಯ (ಪುರುಷರ ಸಾಕ್ಷರತೆ ~84% ಇದ್ದರೆ, ಮಹಿಳೆಯರ ಸಾಕ್ಷರತೆ ~72% ಆಸುಪಾಸಿನಲ್ಲಿದೆ) ಮತ್ತು ಗ್ರಾಮೀಣ-ನಗರ ಪ್ರದೇಶಗಳ ನಡುವಿನ ಡಿಜಿಟಲ್ ಅಸಮಾನತೆ ಇನ್ನೂ ಪ್ರಮುಖ ಸವಾಲಾಗಿ ಉಳಿದಿದೆ.

ಅಕ್ಷರ ಜ್ಞಾನವಿಲ್ಲದ ಸಮಾಜವು ಪ್ರಜಾಪ್ರಭುತ್ವದ ನಿಜವಾದ ಹಕ್ಕುಗಳನ್ನು ಚಲಾಯಿಸಲು ಸಾಧ್ಯವಿಲ್ಲ.



2026 ರ ಸಾಕ್ಷರತಾ ದಿನದ ಸಂದರ್ಭದಲ್ಲಿ, "ನಾವೂ ಸಾಕ್ಷರರಾಗೋಣ, ಇತರರನ್ನೂ ಸಾಕ್ಷರರನ್ನಾಗಿಸೋಣ" ಎಂಬ ಸಂಕಲ್ಪದೊಂದಿಗೆ ಡಿಜಿಟಲ್, ಪರಿಸರ ಹಾಗೂ ಆರ್ಥಿಕ ತಿಳಿವಳಿಕೆಯನ್ನು ಪ್ರತಿಯೊಬ್ಬ ನಾಗರಿಕನಿಗೂ ತಲುಪಿಸುವುದು ಇಂದಿನ ತುರ್ತು ಅಗತ್ಯವಾಗಿದೆ.

# ನೀರು ಉಳಿಸದ ನಗರ; ನಾಳೆ ಬದುಕನ್ನು ಉಳಿಸಿಕೊಳ್ಳಬಹುದೇ?






| ಶಿವಬಸಪ್ಪ ಗು ಜಂಗಾಲಿ
ಲೇಖಕರು ಹಾಗೂ ಸಾಹಿತಿ

ನೀರು ಎಂದರೆ ಕೇವಲ ದಾಹ ನೀಗಿಸುವ ದ್ರವವಲ್ಲ; ಅದು ಬದುಕಿನ ಮೂಲ. ಮನುಷ್ಯನ ದೇಹದಿಂದ ಹಿಡಿದು ಕೃಷಿ, ಕೈಗಾರಿಕೆ, ನಗರ ಜೀವನ ಮತ್ತು ಪ್ರಕೃತಿಯ ಸಮತೋಲನದವರೆಗೆ ಎಲ್ಲವೂ ನೀರಿನ ಮೇಲೆ ಅವಲಂಬಿತವಾಗಿದೆ. ಆದರೂ ಆಧುನಿಕ ನಗರ ಜೀವನದಲ್ಲಿ ನೀರನ್ನು ಅತ್ಯಂತ ಸಾಮಾನ್ಯ ಸಂಪನ್ಮೂಲದಂತೆ ಬಳಸಲಾಗುತ್ತಿದೆ. ಕಟ್ಟಡಗಳು ಎತ್ತರಕ್ಕೆ ಬೆಳೆಯುತ್ತಿವೆ, ರಸ್ತೆಗಳು ವಿಸ್ತಾರವಾಗುತ್ತಿವೆ, ಜನಸಂಖ್ಯೆ ಹೆಚ್ಚುತ್ತಿದೆ. ಆದರೆ ಈ ಅಭಿವೃದ್ಧಿಯ ನಡುವೆ ನಮ್ಮ ಜಲಮೂಲಗಳು ಮಾತ್ರ ಕುಗ್ಗುತ್ತಿವೆ. ಹೀಗಿರುವಾಗ ಒಂದು ಪ್ರಶ್ನೆ ಅನಿವಾರ್ಯ?ನೀರು ಉಳಿಸದ ನಗರ ನಾಳೆ ತನ್ನ ಬದುಕನ್ನು ಉಳಿಸಿಕೊಳ್ಳಬಹುದೇ?

ಒಂದು ಕಾಲದಲ್ಲಿ ನಗರಗಳ ಸುತ್ತಲೂ ಕೆರೆಗಳು, ಕಾಲುವೆಗಳು, ಹೊಲಗಳು ಮತ್ತು ಹಸಿರು ಪ್ರದೇಶಗಳಿದ್ದವು. ಮಳೆ ಬಂದಾಗ ನೀರು ನೆಲದೊಳಗೆ ಇಳಿಯುತ್ತಿತ್ತು. ಕೆರೆಗಳು ತುಂಬುತ್ತಿದ್ದವು. ಅಂತರ್ಜಲ ಪುನರ್ಭರ್ತಿಯಾಗುತ್ತಿತ್ತು. ಆದರೆ ಇಂದು ಅನೇಕ ನಗರಗಳಲ್ಲಿ ಖಾಲಿ ಜಾಗಗಳ ಬದಲು ಕಾಂಕ್ರೀಟ್ ಕಟ್ಟಡಗಳು ನಿಂತಿವೆ. ಮಳೆನೀರು ಭೂಮಿಯೊಳಗೆ ಸೇರುವ ದಾರಿಗಳು ಮುಚ್ಚಿವೆ. ಪರಿಣಾಮವಾಗಿ ಮಳೆ ಬಂದಾಗ ರಸ್ತೆಗಳು ಜಲಾವೃತವಾಗುತ್ತವೆ; ಬೇಸಿಗೆ ಬಂದಾಗ ಅದೇ ನಗರ ನೀರಿಗಾಗಿ ಪರದಾಡುತ್ತದೆ. ಮಳೆ ಬಂದಾಗ ಪ್ರವಾಹ, ಮಳೆ ನಿಂತಾಗ ಬರ?ಇದು ಪ್ರಕೃತಿಯ ವೈರುಧ್ಯವಲ್ಲ; ನಮ್ಮ ನಿರ್ವಹಣೆಯ ವೈಫಲ್ಯ.

ನಗರಗಳಲ್ಲಿ ನೀರಿನ ಕೊರತೆ ಉಂಟಾದಾಗ ಟ್ಯಾಂಕರ್‌ಗಳ ಮೊರೆ ಹೋಗುವುದು ಸಾಮಾನ್ಯವಾಗಿದೆ. ಆದರೆ ಟ್ಯಾಂಕರ್ ನೀರು ಶಾಶ್ವತ ಪರಿಹಾರವಲ್ಲ. ಭೂಮಿಯೊಳಗಿನ ನೀರನ್ನು ನಿರಂತರವಾಗಿ ಹೊರತೆಗೆದು ಬಳಸುತ್ತಾ ಹೋದರೆ ಅಂತರ್ಜಲದ ಮಟ್ಟ ಕುಸಿಯುತ್ತದೆ. ಇಂದು ಟ್ಯಾಂಕರ್ ನಮ್ಮ ಮನೆ ಬಾಗಿಲಿಗೆ ಬರಬಹುದು; ಆದರೆ ನಾಳೆ ಟ್ಯಾಂಕರ್‌ಗೂ ನೀರು ಸಿಗದ ಪರಿಸ್ಥಿತಿ ಬಂದರೆ ಏನು ಮಾಡುವುದು? ನೀರಿನ ಬಿಕ್ಕಟ್ಟಿಗೆ ತಾತ್ಕಾಲಿಕ ಪರಿಹಾರವಲ್ಲ, ಶಾಶ್ವತ ಸಂರಕ್ಷಣೆಯೇ ಅಗತ್ಯ.

ನೀರಿನ ಸಂರಕ್ಷಣೆಯ ಆರಂಭ ನಮ್ಮ ಮನೆಯಿಂದಲೇ ಆಗಬೇಕು. ಹಲ್ಲುಜ್ಜುವಾಗ ನಲ್ಲಿಯನ್ನು ತೆರೆದಿಡುವುದು, ಅಗತ್ಯಕ್ಕಿಂತ ಹೆಚ್ಚು ನೀರು ಬಳಸಿ ಸ್ನಾನ ಮಾಡುವುದು, ವಾಹನ ತೊಳೆಯಲು ಅಪಾರ ಪ್ರಮಾಣದ ನೀರು ವ್ಯರ್ಥ ಮಾಡುವುದು, ಸೋರಿಕೆಯಿರುವ ನಲ್ಲಿಯನ್ನು ಸರಿಪಡಿಸದೆ ಬಿಡುವುದು?ಇವು ಸಣ್ಣ ತಪ್ಪುಗಳಂತೆ ಕಾಣಬಹುದು. ಆದರೆ ಸಾವಿರಾರು ಮನೆಗಳಲ್ಲಿ ಇದೇ ನಡೆಯುತ್ತಾ ಹೋದರೆ ಅಪಾರ ಪ್ರಮಾಣದ ನೀರು ವ್ಯರ್ಥವಾಗುತ್ತದೆ. ಒಂದು ಹನಿ ಚಿಕ್ಕದಾದರೂ, ಸಾವಿರಾರು ಹನಿಗಳ ನಷ್ಟ ದೊಡ್ಡ ದಾಹಕ್ಕೆ ಕಾರಣವಾಗಬಹುದು.

ಮಳೆನೀರು ಸಂಗ್ರಹಣೆ ಪ್ರತಿಯೊಂದು ಮನೆ ಮತ್ತು ಕಟ್ಟಡದ ಅವಿಭಾಜ್ಯ ಭಾಗವಾಗಬೇಕು. ಮೇಲ್ಛಾವಣಿಯಲ್ಲಿ ಬೀಳುವ ಮಳೆನೀರನ್ನು ಸಂಗ್ರಹಿಸಿ ಭೂಮಿಯೊಳಗೆ ಇಳಿಸುವ ಮೂಲಕ ಅಂತರ್ಜಲವನ್ನು ಪುನರ್ಭರ್ತಿ ಮಾಡಬಹುದು. ಅಪಾರ್ಟ್‌ಮೆಂಟ್‌ಗಳು ಮತ್ತು ವಸತಿ ಸಮುಚ್ಚಯಗಳು ನೀರಿನ ಬಳಕೆಯನ್ನು ಅಳೆಯಬೇಕು, ಸೋರಿಕೆಯನ್ನು ತಡೆಯಬೇಕು ಮತ್ತು ಸಾಧ್ಯವಾದಲ್ಲಿ ಬಳಸಿದ ನೀರನ್ನು ಮರುಬಳಕೆ ಮಾಡಬೇಕು. ಸ್ಮಾರ್ಟ್ ನಗರ ಎಂದರೆ ಕೇವಲ ಆಧುನಿಕ ಕಟ್ಟಡಗಳಿರುವ ನಗರವಲ್ಲ; ಪ್ರತಿಯೊಂದು ಹನಿಯನ್ನೂ ಗೌರವಿಸುವ ನಗರ.

ಕೆರೆಗಳ ಸಂರಕ್ಷಣೆಯೂ ಅತ್ಯಂತ ಮುಖ್ಯ. ಒಂದು ಕೆರೆ ಒಣಗಿದಾಗ ಕೇವಲ ಅದರಲ್ಲಿರುವ ನೀರು ಮಾತ್ರ ಕಳೆದುಹೋಗುವುದಿಲ್ಲ; ಅದರ ಸುತ್ತಲಿನ ಅಂತರ್ಜಲವೂ ಕುಸಿಯುತ್ತದೆ. ಆದ್ದರಿಂದ ಕೆರೆಗಳನ್ನು ಒತ್ತುವರಿಯಿಂದ, ಮಾಲಿನ್ಯದಿಂದ ಮತ್ತು ನಿರ್ಲಕ್ಷ್ಯದಿಂದ ರಕ್ಷಿಸಬೇಕು. ನಗರ ಯೋಜನೆಯಲ್ಲಿಯೇ ಕೆರೆಗಳು, ಕಾಲುವೆಗಳು ಮತ್ತು ಹಸಿರು ಪ್ರದೇಶಗಳಿಗೆ ಸೂಕ್ತ ಸ್ಥಾನ ನೀಡಬೇಕು. ಕೆರೆ ಉಳಿಸುವುದು ಎಂದರೆ ನೀರು ಉಳಿಸುವುದಷ್ಟೇ ಅಲ್ಲ; ನಗರದ ಭವಿಷ್ಯ ಉಳಿಸುವುದು.

ನೀರಿನ ಕೊರತೆಯ ಪರಿಣಾಮ ಕೃಷಿಯ ಮೇಲೂ ಬೀಳುತ್ತದೆ. ರೈತನ ಹೊಲದಲ್ಲಿ ನೀರಿಲ್ಲದಿದ್ದರೆ ಬೆಳೆ ಒಣಗುತ್ತದೆ, ಆದಾಯ ಕುಸಿಯುತ್ತದೆ ಮತ್ತು ಆಹಾರದ ಬೆಲೆ ಹೆಚ್ಚಬಹುದು. ಹೀಗಾಗಿ ನೀರಿನ ಸಂರಕ್ಷಣೆ ನಗರವಾಸಿಗಳ ಸಮಸ್ಯೆ ಮಾತ್ರವಲ್ಲ; ಅದು ರೈತನ ಬದುಕು ಮತ್ತು ದೇಶದ ಆಹಾರ ಭದ್ರತೆಯ ಪ್ರಶ್ನೆಯೂ ಹೌದು.

ಮಕ್ಕಳಿಗೆ ಚಿಕ್ಕಂದಿನಿಂದಲೇ ನೀರಿನ ಮೌಲ್ಯವನ್ನು ಕಲಿಸಬೇಕು. ಪಾಠಪುಸ್ತಕದಲ್ಲಿ ನೀರಿನ ಮಹತ್ವವನ್ನು ಓದಿಸುವುದಕ್ಕಿಂತ, ಮನೆಯಲ್ಲಿ ನೀರನ್ನು ಹೇಗೆ ಬಳಸಬೇಕು ಎಂಬುದನ್ನು ತೋರಿಸುವುದು ಹೆಚ್ಚು ಪರಿಣಾಮಕಾರಿ. ಶಾಲೆಗಳಲ್ಲಿ ಮಳೆನೀರು ಸಂಗ್ರಹಣೆ ಮತ್ತು ಜಲಸಂರಕ್ಷಣೆಯಂತಹ ಪ್ರಾಯೋಗಿಕ ಚಟುವಟಿಕೆಗಳನ್ನು ಉತ್ತೇಜಿಸಬೇಕು.

ನೀರಿನ ಸಂರಕ್ಷಣೆ ಸರ್ಕಾರದ ಜವಾಬ್ದಾರಿ ಮಾತ್ರವಲ್ಲ; ಪ್ರತಿಯೊಬ್ಬ ನಾಗರಿಕನ ಕರ್ತವ್ಯವೂ ಹೌದು. ಸರ್ಕಾರ ಕೆರೆಗಳನ್ನು ಪುನರುಜ್ಜೀವನಗೊಳಿಸಬಹುದು, ನೀರಿನ ಯೋಜನೆಗಳನ್ನು ರೂಪಿಸಬಹುದು. ಆದರೆ ಜನರು ನೀರನ್ನು ವ್ಯರ್ಥ ಮಾಡುತ್ತಿದ್ದರೆ ಯಾವುದೇ ಯೋಜನೆ ಯಶಸ್ವಿಯಾಗುವುದಿಲ್ಲ. ನೀರಿನ ಭದ್ರತೆ ಸರ್ಕಾರ ಮತ್ತು ಜನರು ಒಟ್ಟಾಗಿ ಕಟ್ಟಬೇಕಾದ ಭವಿಷ್ಯ.

ನಾಳೆ ನಮ್ಮ ಮಕ್ಕಳು ಇದೇ ನಗರದಲ್ಲಿ ಬದುಕಬೇಕಿದೆ. ಅವರಿಗೆ ಎತ್ತರದ ಕಟ್ಟಡಗಳನ್ನು ಕೊಟ್ಟು, ಆದರೆ ಕುಡಿಯಲು ನೀರು ಕೊಡಲು ಸಾಧ್ಯವಾಗದಿದ್ದರೆ ಆ ಅಭಿವೃದ್ಧಿಯ ಅರ್ಥವೇನು? ಅವರಿಗೆ ತಂತ್ರಜ್ಞಾನ ಕೊಟ್ಟು, ಪ್ರಕೃತಿಯನ್ನು ಕಳೆದುಕೊಂಡರೆ ಆ ಪ್ರಗತಿ ಯಾರಿಗಾಗಿ?

ಹೀಗಾಗಿ ಇಂದೇ ನಾವು ಬದಲಾಗಬೇಕು. ನಲ್ಲಿಯನ್ನು ಅಗತ್ಯವಿಲ್ಲದಾಗ ಮುಚ್ಚೋಣ. ಮಳೆನೀರನ್ನು ಸಂಗ್ರಹಿಸೋಣ. ಕೆರೆಗಳನ್ನು ಉಳಿಸೋಣ. ಮರಗಳನ್ನು ಬೆಳೆಸೋಣ. ನೀರನ್ನು ಮರುಬಳಕೆ ಮಾಡೋಣ. ಪ್ರತಿಯೊಂದು ಹನಿಯನ್ನೂ ಅಮೂಲ್ಯವೆಂದು ಪರಿಗಣಿಸೋಣ.

ಏಕೆಂದರೆ ನೀರು ಉಳಿಸುವುದು ಪ್ರಕೃತಿಗೆ ಮಾಡುವ ಉಪಕಾರವಲ್ಲ; ಅದು ನಮ್ಮದೇ ಬದುಕಿಗೆ ಮಾಡುವ ರಕ್ಷಣೆ. ನಗರಗಳು ಎಷ್ಟೇ ಎತ್ತರಕ್ಕೆ ಬೆಳೆದರೂ, ಅವುಗಳ ಬದುಕಿನ ಬೇರುಗಳು ನೀರಿನಲ್ಲೇ ಇವೆ. ಇಂದು ಉಳಿಸಿದ ಒಂದು ಹನಿ?ನಾಳೆ ಉಳಿಸುವ ಒಂದು ಜೀವ.

# ದೇಹವೇ ಜಯದ ಕವಚ



ದೈಹಿಕ ಸದೃಢತೆ ಎಂದರೆ ಕೇವಲ ಸ್ನಾಯುಗಳ ಬಿಗಿತವಲ್ಲ, ಅದು ಪ್ರತಿ ಜೀವಕೋಶದಲ್ಲೂ ಹರಿಯುವ ಪ್ರಾಣಶಕ್ತಿ. ನಿತ್ಯ ಸ್ಕ್ವಾಟ್, ಪುಶಪ್, ಪ್ಲ್ಯಾಂಕ್ ಎಂಬ ತ್ರಿವೇಣಿ ಸಾಧನೆ ಮಾಡಿದಾಗ ಸ್ನಾಯುಗಳಿಂದ ಮಯೋಕೈನ್ ಎಂಬ ಸಂದೇಶವಾಹಕ ಹೊರಟು ಮಿದುಳಿಗೆ ಬಿಡಿಎನ್‌ಎಫ್ ಪೋಷಕಾಂಶವನ್ನು ತಲುಪಿಸುತ್ತದೆ. ನೆನಪಿನ ಶಕ್ತಿ ಚುರುಕಾಗುತ್ತದೆ, ಮನದ ಮಂಜು ಕರಗುತ್ತದೆ. ಕೇವಲ ಹದಿನೈದು ನಿಮಿಷದ ಎಚ್‌ಐಐಟಿ ಚಟುವಟಿಕೆ ಎಎಂಪಿಕೆ ಕಿಣ್ವವನ್ನು ಎಚ್ಚರಿಸಿ ರಕ್ತದ ಸಕ್ಕರೆಯನ್ನು ಸ್ನಾಯುಗಳಿಗೆ ಎಳೆದು ಇನ್ಸುಲಿನ್ ಸಂವೇದನೆಯನ್ನು ಹೆಚ್ಚಿಸುತ್ತದೆ, ಮಧುಮೇಹದ ಬಾಗಿಲು ಮುಚ್ಚುತ್ತದೆ.

ಸದೃಢ ಸಮೂಹವೇ ಊರಿನ ನಿಜದ ನಿಧಿ. ಮುಂಜಾನೆ ಕೆರೆದಂಡೆಯ ಮೇಲೆ ಹಿರಿಯರ ಸಾಮೂಹಿಕ ವ್ಯಾಯಾಮ, ಸಂಜೆ ಬಯಲಿನಲ್ಲಿ ಯುವಕರ ಕಬಡ್ಡಿ ಆರ್ಭಟ, ಅಂಗಳದಲ್ಲಿ ಹೆಣ್ಣುಮಕ್ಕಳ ಹಗ್ಗ ಜಿಗಿತ – ಇವೆಲ್ಲವೂ ಆಸ್ಪತ್ರೆಯ ಹೊರೆಯನ್ನು ಇಳಿಸುವ ದಿವ್ಯ ಔಷಧಗಳು. ಕಚೇರಿಯಲ್ಲಿ ನಿಂತೇ ಸಭೆ, ಶಾಲೆಯಲ್ಲಿ ನಿಂತು ಓದುವ ಮೇಜು, ನಿಲ್ದಾಣದಲ್ಲಿ ವ್ಯಾಯಾಮ ಸೂಚಿ ಫಲಕ ಅಳವಡಿಸಿದರೆ ಊರೇ ತೆರೆದ ಜಿಮ್ ಆಗುತ್ತದೆ, ಒಬ್ಬರ ಬೆವರು ಇನ್ನೊಬ್ಬರಿಗೆ ಸ್ಫೂರ್ತಿಯಾಗುತ್ತದೆ.

ಇದಕ್ಕೆ ಸೂತ್ರ ಬಲು ಸರಳ. ವಾರದಲ್ಲಿ ಐದು ದಿನ ಮೂವತ್ತು ನಿಮಿಷ ವೇಗದ ನಡಿಗೆ ಮತ್ತು ಮೆಟ್ಟಿಲೇರುವಿಕೆ, ಎರಡು ದಿನ ಪ್ರತಿರೋಧ ಬ್ಯಾಂಡ್‌ನೊಂದಿಗೆ ಭುಜ-ತೊಡೆಗಳ ಬಲವರ್ಧನೆ. ಪ್ರತಿ ಬಟ್ಟಲಿನಲ್ಲಿ ಬೇಳೆ, ಮೊಟ್ಟೆ, ಮೊಸರಿನ ಪ್ರೋಟೀನ್ ಇರಲಿ. ಚಿಯಾ ಮತ್ತು ಕುಂಬಳ ಬೀಜಗಳು ಸ್ನಾಯುಗಳ ದುರಸ್ತಿ ಶಿಲ್ಪಿಗಳು. ತಿಂಗಳಿಗೊಮ್ಮೆ ಹಿಡಿತದ ಬಲ ಪರೀಕ್ಷಿಸಿ, ಏಕೆಂದರೆ ನಿಮ್ಮ ಹಿಡಿತವೇ ನಿಮ್ಮ ಆಯುಷ್ಯದ ಅಳತೆಗೋಲು.

ದೇಹವನ್ನು ಉಕ್ಕಿನಂತೆ ಕಾಯಿಸಿದಾಗ ಮೃತ್ಯುವಿನ ಅಸ್ತ್ರವೂ ಮೊಂಡಾಗುತ್ತದೆ. ಆಗ ಸದೃಢತೆಯು ಕೇವಲ ಆರೋಗ್ಯವಲ್ಲ, ಅದು ನಿಮ್ಮ ಬದುಕು ಹಾರಿಸುವ ವಿಜಯಪತಾಕೆಯಾಗುತ್ತದೆ.

ಅಂಕಣ 16
ಸಾವು ಸಂಕಟಪಡುವ ಸಂಗತಿಗಳು..!



|ಡಾ.ಸುಧಾಕರ.ಜಿ.ಲಕ್ಕವಳ್ಳಿ

# ಕೆ ಸತ್ಯವಾರ ಗ್ರಾಮದ ದೇವಾಲಯಕ್ಕೆ 2 ಲಕ್ಷ ಮೊತ್ತದ ಡಿಡಿ ವಿತರಣೆ!

**ಹೊಸಕೋಟೆ :** ಸಂಕಷ್ಟಕ್ಕೆ ಸಿಲುಕಿದವರಿಗೆ ನೆರವು, ಆರೋಗ್ಯ, ಶಿಕ್ಷಣಕ್ಕೆ ಸಹಾಯ, ಆರ್ಥಿಕತೆಗೆ ಪ್ರೋತ್ಸಾಹ ಹಾಗೂ ಸಾಮಾಜಿಕ ಬದ್ಧತೆಯ ಕಾರ್ಯಕ್ರಮಗಳ ಮೂಲಕ ಶ್ರೀಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ನಿಜವಾದ ಅರ್ಥ ಪೂರ್ಣ ಕೆಲಸ ನಡೆಸುತ್ತಿದೆ ಎಂದು ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷರಾದ ವೆಂಕಟೇಶ್ ತಿಳಿಸಿದ್ದಾರೆ.



ಹೊಸಕೋಟೆ ತಾಲ್ಲೂಕಿನ ಕೆ ಸತ್ಯವಾರ ಗ್ರಾಮದ ಶ್ರೀ ರಾಧಾಕೃಷ್ಣ ಸ್ವಾಮಿ ದೇವಾಲಯ ನಿರ್ಮಾಣಕ್ಕೆ ಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆವತಿಯಿಂದ 2 ಲಕ್ಷ ಮೊತ್ತದ ಡಿಡಿ ವಿತರಣೆ ಮಾಡಿ ಮಾತನಾಡಿದರು,

ಧಾರ್ಮಿಕ ಹಾಗೂ ಸಾಂಸ್ಕೃತಿಕ ಪರಂಪರೆ ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ದೇವಸ್ಥಾನಗಳ ಅಭಿವೃದ್ಧಿಗೆ ಆದ್ಯತೆ ನೀಡುವ ನಿಟ್ಟಿನಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಭಿವೃದ್ಧಿ ಯೋಜನೆ ಹೆಚ್ಚಿನ ಅನುದಾನ ನೀಡುತ್ತಾ ಬಂದಿದೆ. ಈಗಾಗಲೇ ಹೊಸಕೋಟೆ ತಾಲ್ಲೂಕಿನಲ್ಲಿ ಸಹ ಹೆಚ್ಚಿನ ದೇವಸ್ಥಾನಗಳ ನಿರ್ಮಾಣಕ್ಕೆ ಅನುದಾನ ನೀಡಲಾಗಿದೆ.

ಅದೇ ರೀತಿ ಸತ್ಯವಾರ ಗ್ರಾಮದ ಶ್ರೀ ರಾಧಾಕೃಷ್ಣ ಸ್ವಾಮಿ ದೇವಾಲಯಕ್ಕೆ ಮಂಜೂರು ಆಗಿರುವ 2 ಲಕ್ಷ ಮೊತ್ತ ವಿತರಣೆ ಮಾಡಲಾಗಿದೆ.

ದೇವಸ್ಥಾನದ ನಿರ್ಮಾಣ ಕಾಮಗಾರಿ ಪೂರ್ಣಗೊಂಡ ಬಳಿಕ ಗ್ರಾಮಸ್ಥರು ಹಾಗೂ ಭಕ್ತರಿಗೆ ಹೆಚ್ಚಿನ ಅನುಕೂಲವಾಗಲಿದೆ. ದೇವಸ್ಥಾನವು ಗ್ರಾಮದಲ್ಲಿ ಧಾರ್ಮಿಕ ಚಟುವಟಿಕೆಗಳ ಜೊತೆಗೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಗೂ ಕೇಂದ್ರವಾಗಲಿದೆ ಎಂದು ತಿಳಿಸಿದರು. ದೇವಸ್ಥಾನಗಳ ಅಭಿವೃದ್ಧಿಯು ಕೇವಲ ಕಟ್ಟಡ ನಿರ್ಮಾಣಕ್ಕೆ ಸೀಮಿತವಾಗದೆ, ನಮ್ಮ ಸಂಸ್ಕೃತಿ, ಪರಂಪರೆ ಹಾಗೂ ಧಾರ್ಮಿಕ ನಂಬಿಕೆಗಳನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಕಾರ್ಯವಾಗಿದೆ. ಈ ಹಿನ್ನೆಲೆಯಲ್ಲಿ ಗ್ರಾಮಸ್ಥರ ಬೇಡಿಕೆಗಳಿಗೆ ಸ್ಪಂದಿಸಿ ದೇವಸ್ಥಾನದ ಅಭಿವೃದ್ಧಿ ಕಾಮಗಾರಿಗಳಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಭಿವೃದ್ಧಿ ಯೋಜನೆ ಸಹ ಅಗತ್ಯ ಸಹಕಾರ ನೀಡಲಾಗುತ್ತಿದೆ ಎಂದರು. ದೇವಸ್ಥಾನದ ನಿರ್ಮಾಣ ಕಾಮಗಾರಿ ನಿಗದಿತ ರೀತಿಯಲ್ಲಿ ಹಾಗೂ ಗುಣಮಟ್ಟದೊಂದಿಗೆ ನಡೆಯಬೇಕು. ಉತ್ತಮ ರೀತಿಯಲ್ಲಿ ಕಾಮಗಾರಿ ಪೂರ್ಣಗೊಳಿಸುವಂತೆ ಅವರು ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ ಮಂಜೂರಾದ 2 ಲಕ್ಷ ಮೊತ್ತದ ಡಿಡಿ ವಿತರಣೆ ಮಾಡಿದರು. ಸಂಘದ ಅಧಿಕಾರಿಗಳು ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

# ಸೆ. 10 ರಂದು ವಿದ್ಯುತ್ ವ್ಯತ್ಯಯ



**ಮಂಡ್ಯ:** 66/11 ಕೆ. ವಿ ಕೋಲ್ಕರನ ದೊಡ್ಡಿ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಎಫ್ -07 ಪುರ ಫೀಲ್ಡರ್ ಮಾರ್ಗದಲ್ಲಿ ತುರ್ತುಕಾಮಗಾರಿ ಹಮ್ಮಿಕೊಂಡಿರುವುದರಿಂದ ಸೆಪ್ಟೆಂಬರ್ 10 ರಂದು ಬೆಳಗ್ಗೆ 9:30 ರಿಂದ ಸಂಜೆ 6:30 ಗಂಟೆಯವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಕೋಲ್ಕರನದೊಡ್ಡಿ ವಿದ್ಯುತ್ ವಿತರಣಾ ಕೇಂದ್ರದ ಪುರ ಫೀಡರ್ ನ ಪ್ರದೇಶಗಳಾದ ಟೀ ಮಲ್ಲಿಗೆರೆ, ತಗ್ಗಹಳ್ಳಿ, ಹಳುವಾಡಿ, ಪುರ, ಮಾರಸಿಂಗನಹಳ್ಳಿ, ತಿಮ್ಮನಹೊಸೂರು, ಲೋಕಸರ, ಲೋಕಸರ ಫಾರಂ, ಚೀರನಹಳ್ಳಿ ,ಹನಿಯಂಬಾಡಿ, ಮಂಗಲ, ಸಂತೆಕಸಲಗೆರೆ, ಹೆಬ್ಬಕವಾಡಿ, ಮತ್ತು ಕಮ್ಮನಾಯಕನಹಳ್ಳಿ ಹಾಗೂ ಈ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಕೊತ್ತತ್ತಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,